


H.V. Satyanarayana Sastry
Dept. of SANSKRIT
Sir M.V. College
BHADRAVATI.

ಒಲವೆಂಬ ಹೊತ್ತಿಗೆ

ಬೇಂದ್ರೆ

ವೆಂಬ ಹೊತ್ತಿಗೆಯನೋದ ಬಯಸುತ ನೀನು
ಲೆಯೆಷ್ಟು ಎಂದು ಕೇಳುತಿಹೆ ಹುಚ್ಚ!
ಲಿರುಳು ದುಡಿದರೂ, ಹಲಜನುಮ ಕಳೆದರು
ತೆತ್ತಲಾರೆ ಬರಿ ಅಂಚೆವೆಚ್ಚ.

ವರರೂನಿಯಲಿ ಹಲವು, ಕಣ್ಣೀರಿನಲಿ ಕೆಲವು
ತ್ರರದಿ ಬರೆದುದಕೆ ಲೆಕ್ಕವಿಲ್ಲ
ತ್ರ ಚಿತ್ರಾಕ್ಷರದ ಲಕ್ಷಪತ್ರಗಳುಂಟು:
ಕ್ಷೇತ್ರ ಓದುತಿದೆ ಮರೆತು ಸೊಲ್ಲ.

ರಿಹುದೋ ಎಂತಿಹುದೋ ಸಂಸಾರ ಸಾರ
ದವರು ಯಾರವರ ಅಂತಪಾರ
ದಂತು ಸಂಪುಟದಲ್ಲಿ ಒಲವ ಲೆಕ್ಕಕ್ಕೆ
ದಿ ಬರೆಯುತೊ ಹುಡುಗ, ನಿನ್ನ ಬೆಕ್ಕಕ್ಕೆ

═══

ॐ

ಕುಟ

ಅಂತರತಮ ನೀ ಗುರು
ಹೇ ಆತ್ಮತಮೋಹಾರಿ ॥

ಜಟಿಲ ಕುಟಿಲತಮ ಅಂತರಂಗ ಬ
ಭಾವ ವಿಜನ ಸಂಚಾರಿ ॥

ಜನುಮ ಜನುಮ ಶತಕೋಟಿ ಸಂಸ್ಕಾ
ಪರಮ ಬತರಮ ಸಂಸ್ಕಾರಿ ॥

ಧಾತು ಪ್ರಕೃತ್ಯೆ ನಾನಾ ಲಲಿತ ರುದ್ರ ಲೀಲಾ
ರೂಪ ಅರೂಪ ವಿಹಾರಿ ॥

ಗಾನ

ಪಕ್ಷಿಕಾಶಿ ಕುವೆಂಪು.

7 ದೂರಕೆ ದೂರಕೆ ಬಹು ಬಹು ದೂರಕೆ
ಹಾರುವೆ ಗಾನ ವಿಮಾನದಲಿ;
ಮುಗಿಲಿನ ದೂರಕೆ, ಗಗನದ ದೂರಕೆ,
ಶಶಿ ರವಿ ತಾರೆಗಳಾಚೆಯ ತೀರಕೆ,
ಮಾತಿಗೆ ನಿಲುಕದ ಭವ್ಯ ಅಪಾರಕೆ,
ಮನಸಿಗೆ ನಿಲುಕದ ದಿವ್ಯ ಅತೀತಕೆ,
ದೂರಕೆ ದೂರಕೆ ಬಹು ಬಹು ದೂರಕೆ,
ಹಾರುವೆ ಗಾನ ವಿಮಾನದಲಿ!
ಹಾರುತ ಹಾರುತ ಭೂರ್ಭುವಸ್ಸ್ವರ್ಗಳನ್
ಆತ್ಮವಿಲಯದಲಿ ತಬ್ಬುವೆನು.
ಬಿಸಿಲಿಗೆ ಹಬ್ಬುವ ಮಂಜಿನಂದದಲಿ
ಲೋಕಲೋಕಗಳ ಹಬ್ಬುವೆನು!

೨೧-೧೧-೧೯೨೨.

ದೇವರೂರು.

ಎಲ್ಲಿರುವುದು ನಾ ಸೇರುವ ಊರು?
ಬಲ್ಲವರರಿಯದ, ಯಾರೂ ಕಾಣದ
ಎಲ್ಲಿಯು ಇರದಾ ಊರು!
ಭವಭಯವಿಲ್ಲದ ಊರಂತೆ
ದಿವಿಜರು ಬಯಸುವ ಊರಂತೆ
ದೇವರೂರಂತೆ, ಬಹ್ಮದೂರಂತೆ,
ಕವಿಗಳು ಕಂಡಿಹ ಊರಂತೆ!
...ಎಲ್ಲಿರುವುದು ನಾ......
ಅಲ್ಲಿರುವುದು ನಾ ಸೇರುವ ಊರು!
ಬಲ್ಲವರರಿತಾ, ಎಲ್ಲರು ಕಾಣುವ
ಎಲ್ಲಿಯು ಇರುವಾ ಊರು!
ಜ್ಞಾನಿಗಳಿರುವುದೆ ಆ ಊರು.
ಧ್ಯಾನದ ಮೇರೆಯೆ ಆ ಊರು.
ನಾನಿಹ ಊರು, ನೀನಿಹುದ ಊರು,
ಮಹಾನತೆಯಾಳುವ ದೇವರೂರು!
...ಎಲ್ಲಿರುವುದು ನಾ......

'ಕೊಳಲು'

ಕುವೆಂಪು.

ದೋಣಿಗನ ಹಾಡು.

ಷೋಡಶಿ — ಕುವೆಂಪು

ದೂರಾ! ಬಹುದೂರಾ! ಹೋಗುವ ಬಾರಾ!
ಅಲ್ಲೇ ಇಹುದೆಮ್ಮ ಊರಾ ತೀರಾ!
ದೂರದೂರ ಹೋಗುವ ಬಾರ,
ಅಲ್ಲಿಹುದೆಮ್ಮ ಊರ ತೀರ.
ಚಲಜಲದಲೆಗಳ ಮೇಲ್ಹಾರಾಡಿ
ಬಳಲಿಕೆ ತೊಳಲಿಕೆಗಳನೆಲ್ಲ ದೂಡಿ
ಗೆಲುವಿನ ಉಲಿಗಳ ಹಾಡಿ
ಒಲುಮೆಯ ಮಾತಾಡಿ
ಹಕ್ಕಿಗಳಿಂಚರ ಕೇಳಿ
ಆನಂದವ ತಾಳಿ
ಹಿಮಮಣಿ ಕಣಗಣ ಸಿಂಚಿತ ಅಂಚಿನ
ಹಸುರಿನ ತೀರದ ಮೇಲಾಡಿ,
ಕಿಸಲಯ ಕಂಪನದಿಂಪನು ನೋಡಿ
ಕೂಡಿ ಆಡಿ ನೋಡಿ ಹಾಡಿ
ತೇಲಿ ತೇಲಿ ಹೋಗುವ ಬಾರ,
ಅಲ್ಲಿಹುದೆಮ್ಮ ಊರ ತೀರ.
ದೂರಾ! ಬಹುದೂರಾ! ಹೋಗುವ ಬಾರಾ!
ಅಲ್ಲೇ ಇಹುದೆಮ್ಮ ಊರಾ ತೀರಾ!

'ಕೊಳ್ಳಲು?'

ಪ್ರಾರ್ಥನೆ

ಕುವೆಂಪು.

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.
ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಅಲರಿನ ತೆರದಿ
ನನ್ನ ಬಾಳಿರಲಿ.
ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.
ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ
ನಿನ್ನಾಳವೆನಗಿರಲಿ
ನೀನೆ ನನಗಿರಲಿ
ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆಡೆಗೆ ಬರಲಿ.

ನಿನ್ನವನು ನಾನಲ್ಲವೆ?

ಕೊಳಲು? ಕುವೆಂಪು.

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು, ದೇವದೇವ;
ಬುದ್ಧಿಯಿದು ಗುಡಿಯೊಳುರಿಯುವ ದೀಪವೆಂದು
ಅಮಲ ಚಿಂತನ ತೈಲವನು ತುಂಬುವೆ.

ಎದೆಯು ಕಮಲಾಕರದಿ ನೀನು ಮೀಯುವೆ ಎಂದು
ಕಂಬನಿಯ ನವಜಲದಿ ದಿನವು ತೊಳೆವೆ;
ಇರುಳು ಕವಿಯುವ ತೆರದಿ ರವಿಯು ಬೆಳಕನು ಕರೆವ,
ಮನದ ಬಾಗಿಲ ತೆರೆವೆ; ಮುಚ್ಚದಿರುವೆ.

ಎನ್ನ ಕರ್ಮದ ಹಣ್ಣುಗಳ ಕೊಯ್ದು ತರುವೆ,
ಸುಖದುಃಖಗಳನೆಲ್ಲ ಆಯ್ದು ತರುವೆ;
ಕಣ್ಣು ಕಿವಿ ಮೂಗು ಬಾಯಿಂದ್ರಿಯಂಗಳು ಬಿರಿದ
ಹೂವುಗಳ ಮಾಲೆಯನು ನೆಯ್ದು ಬರುವೆ.

ಗಂಟೆಗಳ ನಾ ಹೊಡೆಯೆ, ಶಂಖವನು ನಾ ಊದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೊ, ದೊರೆಯೆ!

ಅನಿಕೇತನ.

ಅನಿಕೇತನ ಕುವೆಂಪು

ಓ ನನ್ನ ಚೇತನ,
ಆಗು ನೀ ಅನಿಕೇತನ!
ರೂಪು ರೂಪುಗಳನು ದಾಟಿ,
ನಾಮಕೋಟಿಗಳನು ಮೀಟಿ,
ಎದೆಯು ಬಿರಿಯೆ ಭಾವದೀಟಿ, ॥ ಓ ನನ್ನ...
ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ, ॥ ಓ ನನ್ನ...
ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು! ॥ ಓ ನನ್ನ...
ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀನೆ ಅನಂತವಾಗು:
ಆಗು, ಆಗು, ಆಗು, ಆಗು,
ಓ ನನ್ನ ಚೇತನ,
ಆಗು ನೀ ಅನಿಕೇತನ!

೨೦. ೧೧. ೫೬

ನನ್ನ ಹಾಡು

೧೧ ಬೇಂದ್ರೆ

ನನ್ನ ಹರಣಾ
ನಿನಗೆ ಶರಣಾ
ಸಕಲ ಕಾರ್ಯಕಾರಣಾ
ನಿನ್ನ ಮನನ
ದಿಂದ ತನನ-
ನೆನುತಿದೆ ತನು ಪಾವನಾ.

ಸುಖದ ಮಿಷವು
ದುಃಖ ವಿಷವು
ಅಗ್ನಿ ಪ್ರಾಣಪೂರಣಾ
ಪಂಚಕರಣಾ
ಗಳಿಗೆ ಗಡಣಾ
ಕಟ್ಟಿತು ಗುಡಿ ತೋರಣಾ.

ನಿನ್ನ ಚರಣಾ
ಸುಸಂತರಣಾ
ಜಗದ್ಭರಿತ ಭಾವನಾ
ಹಾಸ್ಯಕಿರಣಾ
ತದನುಸರಣಾ
ತದಿತರ ಪೃಥ ಶಾಸನಾ.

ರುರುತ್ವ ರಕ್ಷವೆ
ಕರುಣಾ ದಕ್ಷವೆ
ಜೀವಧರ್ಮ ಧಾರಣಾ.
ರಕ್ಷವೆ ಜನನ
ವಿರಕ್ಷ ಮರಣಾ
ಸಮರಕ್ಷವೇ ಜೀವನ.

ನಾವಿಕ.

'ಕೊಳಲು' ಕುವೆಂಪು.

ಕೈ ಬಿಟ್ಟರೆ ನೀ ಗತಿಯಾರೈ ?
ಕಿರುದೋಣಿಯು ಮುಳುಗದೇನೈ ?

ಮೊರೆಯುವ ನೊರೆಯುವ ಕಡಲಿದು, ಗುರುವೆ,
ಭೋರೆಂದಲೆಗಳು ಏಳುತಿವೆ ;
ನೀರೆ ನೀರೆಯಾಗಿಹ ತೆರೆ ತೆರೆಯಲ್ಲಿ
ಮೃತ್ಯುವು ನೃತ್ಯವ ಮಾಡುತಿದೆ !

ಉತ್ತರಮುಖಿಯು ಪುಡಿಪುಡಿಯಾಗಿದೆ !
ಗಾಳಿಯು ! ಮೋಡವು ! ಮಿಂಚುತಿದೆ !
ಕತ್ತಲು ಕವಿದಿದೆ, ಚಿತ್ತವು ನಡುಗುತಿದೆ,
ಕಾಣದು ಕಣ್ಣಿಗೆ ಧ್ರುವತಾರೆ !

ಹರಿದಿದೆ ಕಟ್ಟು, ಮುರಿದಿದೆ ಹುಟ್ಟು,
ಬಳಲಿಹೆ, ಬೆದರಿಹೆ ಕಂಗೆಟ್ಟು !
ಹೋದವರರಸಿಬರುವ ಮುಳುಗಿದ ಜಿಹ್ವೆಯು
ಬರಿಯ ದೋಣಿಗಳು ತೋರುತಿವೆ !

ಅನ್ಯದು ಯಾವುದಯ್ಯ ಎನ್ನಯ ದೊರೆ
ಅನ್ಯರದಾವುದಯ್ಯ ।
ಎಲ್ಲ ಸೌಭಾಗ್ಯವು ನಿನ್ನದಾಗಿರಲಾಗಿ ॥
ಗಂಗೆಯ ಜಲವೆಲ್ಲ ತುಂಗಭದ್ರೆಯದೆಲ್ಲ
ಮಂಗಳಕರಳಾದ ಯಮುನೆಯದೆಲ್ಲ ।
ತುಂಗತರಂಗದ ಸಿಂಧು ನದಿಯದೆಲ್ಲ
ಹಿಂಗದಿರುವ ಸಾಗರ ಜಲನಿಧಿಯೊಳಪ್ಪುವು ॥
ಚಂಪಕ ರಜವೆಲ್ಲ ಚಂದನ ಪುಡಿಯೆಲ್ಲ
ಸೊಂಪಿನ ಪಾಟಲ ಕಣವೆಲ್ಲ ।
ಪಾರಿಜಾತಕ ರಜವೆಂಬುದನ್ನಾರು
ಪರೀಕ್ಷಿಸಿ ಪೇಳ್ವರೋ ವನವಾತದಲಿ ನಿಂದು ॥
ಭಿನ್ನಭಾವವ ಬಿಟ್ಟು ನಿನ್ನ ಪೂರ್ಣತೆಯನ್ನು
ಚೆನ್ನಾಗಿ ನೋಳ್ಪ ಕಣ್ಣೆನ್ನದಾಗಿರಲಾಗಿ ।
ನಿನ್ನ ಮಹಿಮೆಯನೆನ್ನ ಕಣ್ಣಿಗೆ ತೋರಿಸು
ಪುಣ್ಯವೆ ~~[illegible]~~ ಅನ್ಯರದಾಗಿರಲೆಂದಿಗು ॥

ಅಂಬಿಗ ನಾ ನಿನ್ನ ನಂಬಿದೆ । ಜಗ-
ದಂಬಾರಮಣ ನಿನ್ನ ನಂಬಿದೆ ॥
ತುಂಬಿದ ಹರಿಗೋಲಂಬಿಗಾ ಅದ-
ಕೊಂಬತ್ತು ಛಿದ್ರವು ಅಂಬಿಗಾ ।
ಸಂಭ್ರಮದಿ ನೋಡಂಬಿಗಾ ಅದ-
ರಿಂಬು ನೋಡಿ ನಡೆಸಂಬಿಗಾ ॥
ಹೊಳೆಯ ಭರವ ನೋಡಂಬಿಗ ಅದರ
ಸೆಳೆವು ಘನವಯ್ಯ ಅಂಬಿಗ ।
ಸುಳಿಯೊಳು ಮುಳುಗಿದೆ ಅಂಬಿಗ ಎನ್ನ
ಸೆಳೆದು ಕೊಂಡೊಯ್ಯು ನೀ ಅಂಬಿಗ ॥
ಆರು ತೆರೆಯ ನೋಡಂಬಿಗ ಅದು
ಮೀರಿ ಬರುತಲಿದೆ ಅಂಬಿಗ ।
ಯಾರಿಂದಲಾಗದು ಅಂಬಿಗ ಅದ ನಿ-
ವಾರಿಸಿ ನಡೆಸಂಬಿಗ ॥
ಸತ್ಯವೆಂಬುದು ಹುಟ್ಟಂಬಿಗ ಸದ-
ಭಕ್ತಿಯೆಂಬುದೆ ಪಥವಂಬಿಗ ।
ನಿತ್ಯಮೂರುತಿ ನಮ್ಮ ಪುರಂದರ ವಿಠಲನ
ಮುಕ್ತಿ ಮಂಟಪಕೊಯ್ಯೊ ಅಂಬಿಗ ॥

ಜಯ ಹೇ ಕರ್ನಾಟಕ ಮಾತೆ.

'ಕನ್ನಡ ಡಿಂಡಿಮ' ಕುವೆಂಪು.

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
.. ಭಾರತ ಜನನಿಯ....
ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ
..ಭಾರತ ಜನನಿಯ....
ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ;
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ

ಕಬ್ಬಿಗರುದಿಸಿದ ಮಂಗಳಧಾಮ
ಕವಿ ಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
.. ಭಾರತ ಜನನಿಯ....
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣಾ ಶರಾವತಿ ತುಂಗಾ
ಕಾವೇರಿಯ ವರ ರಂಗ!
ಚೈತನ್ಯ ಪರಮಹಂಸ ವಿವೇಕರ
.. ಭಾರತ ಜನನಿಯ....
ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!
.. ಜಯತೆ ಭಾರತ ಜನನಿಯ....

ಕನ್ನಡಮ್ಮನ ಹರಕೆ

(ಕನ್ನಡ ಡಿಂಡಿಮ) (ಕುವೆಂಪು)

ಕನ್ನಡಕೆ ಹೋರಾಡು ಕನ್ನಡದ ಕಂದ ;
ಕನ್ನಡವ ಕಾಪಾಡು ನನ್ನ ಆನಂದ !
ಜೋಗುಳದ ಹರಕೆಯಿದು ಮರೆಯದಿರು, ಚಿನ್ನ ;
ಮರೆತೆಯಾದರೆ, ಅಯ್ಯೊ ಮರೆತಂತೆ ನನ್ನ !

ಮೊಲೆಯ ಹಾಲೆಂತಂತೆ ಸವಿಜೇನು ಬಾಯ್ಗೆ ;
ತಾಯಿಯಪ್ಪುಗೆಯಂತೆ ಬಲು ಸೊಗಸು ಮೆಯ್ಗೆ ;
ಗುರುವಿನೊಳ್ನುಡಿಯಂತೆ ಶ್ರೇಯಸ್ಸು ಬಾಳ್ಗೆ ;
ತಾಯ್ನುಡಿಗೆ ದುಡಿ, ಮಡಿ, ಇಹಪರಗಳೇಳ್ಗೆ !

ರನ್ನ ಪಂಪರ ನಚ್ಚು ಕನ್ನಡದ ಸೊಲ್ಲು
ಬಸವದೇವನ ಮೆಚ್ಚು ಹರಿಹರನ ಗೆಲ್ಲು ;
ನಾರಣಪ್ಪನ ಕೆಚ್ಚು ಬತ್ತಳಿಕೆ ಬಿಲ್ಲು ;
ಕನ್ನಡವ ಕೊಲುವ ಮುನ್ ಓ ನನ್ನ ಕೊಲ್ಲು !

ನೆವವು ಏನಾದರೇನ್, ಹೊರನುಡಿಯು ಹೊರೆಯಲ್ತೆ ;
ನಿನ್ನ ನಾಡೊಡೆಯನು ನೀನ್; ವೈರಿಯನು ತೊಲೆಯಲ್ತೆ.
ಕನ್ನಡದ ನಾಡಿನಲಿ ಕನ್ನಡವ ಮೆರೆಯಲ್ತೆ ;
ತಾಯ್ಗಾಗಿ ಹೋರಾಡಿ ತಾಯ್ನುಡಿಯ ಪೊರೆಯಲ್ತೆ !

ಕನ್ನಡಕೆ ಬಂದಿಳಿಕೆ ಬಾಯ್ದೆರೆಯುತಿಹುದಿಂದು;
ನೀ ನಿದ್ದೆ ಮಾಡಿದರೆ ಹಾಕುವುದು ಕೊಂದು!
ಎದ್ದೇಳೆಲೊ, ಕಂದಯ್ಯ, ಕತ್ತಿಯನು ಕೊಳ್ಳೊ!
ತಳ್ಳದಿರು ನೀಚರ ರೋಗ ಬಂದಿಳಿಕೆ, ತಳ್ಳೊ!

ಏಳಯ್ಯ, ಕಂದಯ್ಯ, ಒರೆಯುವೆನು ನಿನ್ನ;
ಕನ್ನಡಮ್ಮನ ಹರಕೆ, ಮರೆಯದಿರು ಚಿನ್ನ!
ಮರೆತೆಯಾದರೆ ಅಯ್ಯೊ, ಮರೆತಂತೆ ನನ್ನ
ಹೋರಾಡು ಕನ್ನಡಕೆ ಕಲಿಯಾಗಿ, ರನ್ನ!

ಕ್ಷೀರಸಾಗರ ವಿಹಾರ
ಅಪರಿಮಿತ ಘೋರ ಪಾತಕ ವಿದಾರ ।
ಕ್ರೂರ ಜನಗಣ ವಿದೂರ
ನಿಗಮ ಸಂಚಾರ ಸುಂದರ ಶರೀರ ॥
ಶತಮಖಾಹಿತ ವಿಭಾಂಗ ಶ್ರೀರಾಮ ಶಮನರಿಪು ಸನ್ನುತಾಂಗ
ಶ್ರಿತ ಮಾನಸಾಂತರಂಗ ಜನಕಜಾ ಶೃಂಗಾರ ಜಲಜ ಭೃಂಗ ॥
ರಾಜಾಧಿರಾಜ ವೇಷ ಶ್ರೀರಾಮ ರಮಣೀಯತರ ಸುಭೂಷ
ರಾಜನುತ ಲಲಿತ ಭಾಷ ಶ್ರೀ ತ್ಯಾಗರಾಜಾದಿ ಭಕ್ತ ಪೋಷ ।

ಗಂಗಾವತರಣ

ಅಂಬಿಕಾತನಯದತ್ತ

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವದೇವರನು ತಣಿಸಿ ಬಾ
ದಿಗ್ ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ
ಸ್ವರ್ಗ ತೊರೆದು ಬಾ
ಬಯಲ ಜರಿದು ಬಾ

ನೆಲದಿ ಹಸಿರು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

ನನ್ನ ತಲೆಯೊಳಗೆ
ನನ್ನ ಬೆಂಬಳಿಗೆ
ನನ್ನ ಬಳಕೆಳಗೆ
ನುಗ್ಗಿ ಬಾ
ಕಣ್ಣ ಕಣ ತೊಳೆಸಿ
ಉಸಿರ ಎಳೆ ಎಳಸಿ
ನುಡಿಯ ನುಸಿ ಮೊಳೆಸಿ
ಅಗ್ಗಿ ಬಾ
ಎದೆಯ ನೆಲೆಯಲ್ಲಿ ನೆಲಸಿ ಬಾ.
ಜೀವ ಜಲದಲ್ಲಿ ಒಕಲಿಸಿ ಬಾ
ಮೂಲ ಕೋಲದಲ್ಲಿ ನೆಲಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಕಂಬಿಕು ಮಿಂಚಾಗಿ ತೇರಲ್ಲಿ ಬಾ
ನೀರು ನೀರಾಗಿ ಉರುಳ್ಳಿ ಬಾ
ಮುತ್ತು ಹೂಡೆಮರಲ್ಲಿ ಹೊರಲ್ಲಿ ಬಾ
ದಂಯುಬುರದ ದೀನ
ಹುರೆಂಯುಳ್ಳದ ದೀನ
ನೀಲರದ ಮೀನ
ಕರೆ ಕರೆವ ಬಾ
ಇಲ್ಲಿದು ಬಾ ತಾಯಿ
ಇಲ್ಲಿದು ಬಾ.

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳ್ಳಿ ಸುಳ್ಳಿದು ಬಾ
ಶಿವ ಸುಭ್ರ ಕರುಣೆ
ಅತಿಕಂಬಿದ ಕರುಣೆ
ವಾತ್ಸಲ್ಯವರಣೆ
ಇಲ್ಲಿ ಇಲ್ಲಿದು ಬಾ

ಇಳಿದು ಬಾ ತಾಯಿ
ಇಳಿದು ಬಾ.

ಕೊಳ್ಳೆಂತು ತೊಳ್ಳೆವವರು ಇಲ್ಲ ಬಾ
ಬೇಲೆ ಶಕ್ತಿಗಳು ಹೊಲ್ಲ ಬಾ
ದೀಲಿ ಮಾಡಿದರು, ಇಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನು ಸುತ್ತ ಬಾ
ಸುತ್ತ ಜನಗಳನ್ನು ಎತ್ತ ಬಾ
ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ದುದ್ದ ಸುದ್ದ ನೀರೆ
ಎತ್ತೆತ್ತ ಎದ್ದ ಆಕಾಶದುದ್ದ
ಘರ್ಜಿಸುತ್ತಲಿದ್ದ ಧೀರೆ
ಸಿರಿಮಾತಜಾತ ವರ ಪಾರಿಜಾತ
ತಾರಾ-ಕುಸುಮದಿಂದೆ.

ಶೃಂಗಾರ ಮದ್ಯ ಮಂದಾರ ಗಂಧೆ
ನೀನೇ ತಾಯಿ ತಂದೆ.

ರಸಪೂರ ಜನ್ಯ ನೀನಲ್ಲ ಅನ್ಯ
ಸಚ್ಚಿದಾನಂದ ಕನ್ಯ
ಬಂದಾರೆ ಬಾರೆ, ಬಂದಾರೆ ಹಾರೆ
ಕಣ್ ಧಾರೆ ತಡೆವರೇನೇ?
ಅವತಾರವೆಂದೆ ಎಂದಾರೆ ತಾಯಿ,
ಈ ಅಧಃಪಾತವನ್ನೇ
ದೂರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ
ಮಾಮತ ಮಾಮತೆ ಎಂದಂತೆ
ಮುಡುಕಿ ಬಾ
ನಿನ್ನ ಕಂದನ್ನ ಹುಡುಕಿ ಬಾ
ಹುಡುಕಿ ಬಾ ತಾಯಿ
ಮುಡುಕಿ ಬಾ.

ಕಿರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಮತ್ತೆ ತಳೆದು ಬಾ

ಕೈ ತೊಳೆದು ಬಾ
ಇಳೆಗಿಳಿದು ಬಾ ತಾಯಿ
ಇಳಿದು ಬಾ ತಾಯಿ
ಇಳಿದು ಬಾ.

ಶಂಭು-ಶಿವ-ಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ.

ಸೋಮನಾಥಪುರದ ದೇವಾಲಯ

ಕೊಳ್ಳಲು?

ಕುವೆಂಪು.

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು!
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.
ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ;
ಕರ್ಪೂರದಾರತಿಯ ಜ್ಯೋತಿಯಿಲ್ಲ.
ಭಗವಂತನಾನಂದ ರೂಪುಗೊಂಡಿಹುದಿಲ್ಲಿ;
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ!
ಸುರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ!
ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ!
ಮೂರ್ಛೆಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ

ದೋಣಿ ಹಾಡು

ಕೊಳಲು — ಕುವೆಂಪು.

ದೋಣಿ ಸಾಗಲಿ, ಮುಂದೆ ಹೋಗಲಿ, ದೂರ ತೀರವ ಸೇರಲಿ!
ಬೀಸುಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ!

ಹೊನ್ನ ರವಿಯು ಕಿರಣ ಕೈಗಳಿಂ ಹೇಮವಾರಿಯ ಚೆಲ್ಲುತಿರಲು,
ಮೇಘಮಾಲೆಗೆ ಬಣ್ಣವೀಯುತ ಪಶ್ಚಿಮಾಂಬರ ವಿರಚಿಸಿ,
ನೋಡಿ, ಮುಗಿಲಿನಾ ದಿಗಂತದಿ ಮುಳುಗುತಿರ್ಪನ ಸೂರ್ಯನಿದೊ
ರಂಜಿಸುತ್ತಿದೆ! ಚೆಲುವಿನಂಬರಕೆ ಸುಪ್ರಭಾತದ ಬಣ್ಣನಿದೊ!

ಕೆರೆಯ ಹಿಂಬಿನ ಮೇಲೆ ಮುಂಬಿನ ಹನಿಗಳುಂಬಿದ ಪ್ರಮಾಮುಳಿ
ಮಿಂಚುತಿರ್ಪುದು ಮುಗುಳುತ್ತಿರಲು ಕಾಲಕೋಟಲ ದಿನಮಣಿ!
ಹಸುರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬೀಸುತಿದೆ,
ಕುಹುಕುಹು ಹಾಡುವ ಚಿತ್ರಕೋಕಿಲ ಮಧುರಗಾನವ ತರುತಿದೆ!

ದೂರ ಬೆಟ್ಟದ ಮೇಲೆ ತೇಲುವ ಬೆಳ್ಳಿಯ ಮೋಡವ ನೋಡಿರಿ;
ಅದನೆ ನೋಡುತ, ಅಂತೆ ತೇಲುತ ದೋಣಿಯನು ನಡೆಸಿರಿ!
ನಾವು ಲೀಲಾಮಾತ್ರ ಜೀವರು, ನಮ್ಮ ಜೀವನ ಲೀಲೆಗೆ!
ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ!

ಧ್ರುವತಾರೆ

ಕಾವ್ಯಸುಂದರಿ — ಕುವೆಂಪು

ಅಗಣಿತ ತಾರಾಗಣಗಳ ನಡುವೆ
ನಿನ್ನನೆ ನೆಚ್ಚಿಹೆ ನಾನು;
ನನ್ನೀ ಜೀವನ ಸಮುದ್ರಯಾನಕೆ
ಚಿರ ಧ್ರುವತಾರೆಯು ನೀನು.

ಇಲ್ಲಿಹ ಅಲ್ಲಿಹ ತಿರೆಗಳೆಡೆ ನಾ
ತೊಳಲುತ ಬಳಲುವುದೇನು?
ದಿಟ್ಟಿಯು ನಿನ್ನೊಳೆ ನೆಟ್ಟಿರೆ, ಕಡೆಗೆ
ಗುರಿಯನು ಸೇರೆನೆ ನಾನು?

ಚಂಚಲವಾಗಿಹ ತಾರಕೆಗಳಲಿ
ನಿಶ್ಚಲನೆಂದರೆ ನೀನೆ!
ಮಿಂಚಿ ಮುಳುಗುತಿಹ ನಕ್ಷತ್ರದೆಡೆಯಲಿ
ಶಾಶ್ವತನೆಂದರೆ ನೀನೆ!

೭.೧೧.೨೫

ನಿನ್ನೆಡೆಗೆ ಬರುವಾಗ.

ತೋಡಿ. ಕುವೆಂಪು.

ನಿನ್ನೆಡೆಗೆ ಬರುವಾಗ ಸಿಂಗರದ ಹೊರೆಯೇಕೆ?
ಸಡಗರದ ಮುತ್ತುಗಳ ಬಿಂಕವೇಕೆ?
ನಿನ್ನ ಮುಂದಿರುವಾಗ ಮಂತ್ರಗಳ ಮರೆಯೇಕೆ?
ತಂತ್ರದಾಯದ ಮುಸುಕು ಲಜ್ಜೆಯೇಕೆ?

ನೂಪುರದ ಗೆಜ್ಜೆಗಳ ಕಿಂಕಿಣಿಯ ದನಿ ನಿನ್ನ
ಸವಿಗೊರಲ ಇಂಚರವ ಕೆಡಿಸದಿರಲಿ!
ಮಂತ್ರಗಳ ಜಪಮಣಿಕೆಯು, ದೊರೆ, ನಿನ್ನ ಸಿರಿಮೊಗದ
ಸೌಂದರ್ಯವನು ಮಬ್ಬುಗೆಯ್ಯದಿರಲಿ!

ನಗ್ನತೆಗೆ ನಾಚದಲೆ ಸಿರಿಬಳ್ಳಿ ತೆಕ್ಕೆಯಿಂ
ಮೂಡಿ ಸುಗ್ಗಿಯನೊಲವ ಹೂವಿನಂತೆ
ಸಿಂಗರದ ಹೊರೆಯುಳಿದು, ಮಂತ್ರಗಳ ಮರೆಯುಳಿದು
ಪ್ರೇಮಕಾರತಿ ಹಿಡಿದು ತೇಲಿಬರುವೆ!

೧೯೨೬.

ನಮಸ್ಕಾರ.

ಕುವೆಂಪು

ಮಣಿಯುತೆನ್ನ ಶಿರವು ನಿನ್ನ
ಚರಣಧೂಳಿತಲದಲಿ.
ನನ್ನ ಅಹಂಕಾರವೆಲ್ಲ
ಮುಳುಗಲಶ್ರುಜಲದಲಿ!

ನನಗೆ ನಾನೆ ಪೂಜೆಗೆಯ್ದು
ಸೊಡರನೆತ್ತಲು
ಬೆಳಕು ಬರುವ ಬದಲು ಅಂಧ್ಯ
ಬರಿಯ ಕತ್ತಲು!
ಅಹಂಕಾರದಂಧಕಾರ
ಮುತ್ತುತಿದೆ ಸುತ್ತಲು!

ನನ್ನ ನಾನೆ ಮರೆಯುವಂತೆ
ನಾನು ಗೈವ ಕರ್ಮದಿ
ನಿನ್ನ ಇಚ್ಛೆ ಪೂರ್ಣವಾಗ-
ಲೆನ್ನ ಜೀವ ಧರ್ಮದಿ.

ತಣಿಯುತೆನ್ನ ಜ್ಞಾನ ನಿನ್ನ
ಚರಮಶಾಂತಿಯು;
ಬೆಳಗಲೆನ್ನ ಪ್ರಾಣ ನಿನ್ನ
ಪರಮ ಕಾಂತಿಯು.

ನನ್ನನಳಿಸು, ನೀನೆ ನೆಲಸು
ಹೃದಯಪದ್ಮದಲದಲಿ!

ಬನದಲಿ ದಿನ ದಿನ

[illegible] ಕುವೆಂಪು

ಬನದಲಿ ದಿನ ದಿನ ಬಣ್ಣದ ಹೂಗಳು
ನಿನ್ನಯ ಚೆಲುವನು ಸಾರುತಿವೆ;
ಕೋಗಿಲೆ ಗಿಳಿಗಳು ನಿನ್ನ ನಿನಾದದ
ಇಂಪಿನ ಸವಿಯನು ಬೀರುತಿವೆ;
ತೀಡುವ ತಂಪಿನ ತಣ್ಣನೆ ಗಾಳಿಯು
ನಿನ್ನುಸಿರೊಲ್ಮೆಯ ತೋರುತಿದೆ.
ಹಸನಹಸನೆಸೆಯುವ ಮುಗಿಲ್ಮಾಲೆಗಳು
ನಿನ್ನಲಂಕದ ತೆರೆಯುವುವೆ?
ಗಾಳಿಗೆ ಬಳುಕುವ ತೆಳ್ಳನೆ ಬಳ್ಳಿಯು
ನಿನ್ನಡಿಯಡಿಗಳನು ಜರೆಯುವುವೆ?
ಬನದಲಿ ಮುಳುಗುವ ತಿಳಿಗೊಳದಾವರೆ
ಕಣ್ಣನು ಸೊಗಸಿಗೆ ಕರೆಯುವುವೆ?
ಬನದೊಳು ನೀನೇ? ನಿನ್ನೊಳು ನಾನೇ?
ನಾನೂ ನೀನೂ ಬನದೊಳಗೇ?
ಬನವೂ ನೀನೂ ಕನಸಿನ ನಾನೂ
ಎಲ್ಲವು ಎನ್ನಯ ಮನದೊಳಗೇನೋ?

೭.೧೧.೭೫

ತೇನ ವಿನಾ...

ಯಮನ್ ಕುವೆಂಪು

ತೇನ ವಿನಾ ತೇನ ವಿನಾ
ತೃಣಮಪಿ ನ ಚಲತಿ ತೇನ ವಿನಾ.
ಮಮತೆಯ ಬಿಡು, ಹೇ ಮೂಢಮನಾ.
ಮೂಢಮನಾ, ಹೇ ಮೂಢಮನಾ!

ರವಿಯಿಲ್ಲದ ಭಯವು, ಶಶಿಯಿಲ್ಲದ ಭಯವು,
ತಾರಾನಿವಹಕೆ ಇರದ ಭಯವು,
ನಿನಗೇತಕೆ ಬಿಡು, ಅಣು! ಶ್ರದ್ಧೆಯನಿಡು;
ನಿನ್ನನೆ ನೈವೇದ್ಯದ ನೀಡು!
.. ತೇನ ವಿನಾ...

ಎಲ್ಲೆಲ್ಲಿಯು ಕಂಯಕ್, ಎಲ್ಲೆಲ್ಲಿಯು ಕಾಲ್
ಎಲ್ಲೆಲ್ಲಿಯು ಕಣ್ ತಾನಾದ
ಸತ್ ಚಿತ್ ಶಕ್ತಿಯ ಆನಂದವಿರಲ್
ಬಿಡು ಏತಕೆ ನಿನಗೆ ವಿಷಾದ!
.. ತೇನ ವಿನಾ...

ಸದಾ

[illegible] ಕುವೆಂಪು

ನಿನ್ನ ಆಶೀರ್ವಾದದ ಪರಿವೇಷ ಮುತ್ತುತ್ತಿರಲಿ
ನನ್ನನು ಸದಾ;
ನನ್ನ ಭಕ್ತಿಯ ಬಳ್ಳಿ ಮಲರಾಂತು ಸುತ್ತುತ್ತಿರಲಿ
ನಿನ್ನನು ಸದಾ.
ನನ್ನ ಹೃದಯದ ತುಂಬಿ ನಿನ್ನಡಿಯ ಮಧುರತೆಗೆ
ಹಾರಲಿ ಸದಾ;
ನನ್ನ ಶಾಂತತೆ ನಿನ್ನನಂತತೆಯನೆದೆಬಿಡದೆ
ಊರಲಿ ಸದಾ.
ನನ್ನ ವ್ಯಕ್ತಿತೆ ನಿನ್ನ ವ್ಯಕ್ತಿತ್ವಸಾಗರದಿ
ತೇಲಲಿ ಸದಾ;
ನನ್ನ ಕರ್ಮಗಳೆಲ್ಲ ನಿನ್ನ ಇಚ್ಛಿತ ಮರ್ಮವನೆ
ಹೋಲಲಿ ಸದಾ.
ನನ್ನ ನ್ಯೂನತೆಯೆಲ್ಲ ನಿನ್ನ ಪೂರ್ಣತೆಗಾಗಿ
ನೋಯಲಿ ಸದಾ;
ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ
ಸಾಯಲಿ ಸದಾ!

ಚಂದಮಾಮಗೆ

ಳ್ಳಲು?

ಕುವೆಂಪು.

ಚಂದಿರ ಬಾರೋ, ತೇಜೋ
ಮಂದಿರ ನೀ ಬಾರೋ.

ಮೂಡಣ ಗಗನವ ಶೋಭಿಸುತ
ಮೋಡಗಳೆಡೆಯೊಳು ರಂಜಿಸುತ
ಅಲೆಗಳ ಬೆಳಗುತ
ತೊರೆಗಳ ತೊಳಗುತ
ನಾಡಿಗೆ ದೇಸಿಯ ನೆರೆಕೊಡುತ!
ಪರ್ವತವೆರಡನು ಸಂಧಿಸುತ
ಪರಮಾನಂದವ ಬಂಧಿಸುತ
ಕಾಂತಿಯ ಬೀರುತ
ಶಾಂತಿಯ ತೋರುತ
ತರಳೆಯ ಮನದೊಳು ಮಂದಿಸುತ!
ಮೊಂಯು ಮೋದವ ಮೋದಿಸುತ
ಸ್ವಾಂತವ ಸಾಂತದಿ ಸೇಯಿಸುತ
ಕಮಲವನಳಿಸುತ
ಕುಮುದವನೊಲಿಸುತ
ಮಿಥ್ಯೆಗೆ ಸತ್ಯತೆಯೂಂಯುತ್ತ!

ಬಿದಿಗೆಯ ಚಂದ್ರ.

'ಪ್ರೇಮಕಾಶ್ಮೀರ' ಕುವೆಂಪು.

ಪಡುವಣ ಬಾನಿನ ನೀಲಿಯ ಕೋಣೆಯಲಿ
ಬಿದಿಗೆಯ ರೇಖಾ ಚಂದ್ರಮನು
ನವವಧು ವದನದ ಮುಗುಳ್ನಗೆಯಂದದಿ
ಮೆರೆವನು ಮೋಹಿಸುವನು.

ನೈಲಾಕಾಶದ ಚಿತ್ರರಚನೆಯೊಳು
ಕಿಡಿಕಿಡಿ ಕೆತ್ತಿದೆ ತಾರಾಳಿ ;
ತರುವನ ಗಂಧರೆ ವಿತಾನದಿ ಮಲಗಿವೆ
ಭಾವ ಸಮಾಧಿಯೊಳು !

ಉದ್ವೇಗವನಳಿಯದ ಸಂತೃಪ್ತಿಯ
ನಿರುಪಮ ಔದಾಸೀನ್ಯದಲಿ
ತ್ರಿಜಗಜ್ಜೀವನವಾಹಿನಿ ಹರಿದಿದೆ
ಸುಖಮಯ ಸುಷುಪ್ತಿಯೊಳು.

ವಿತಾನದ ಮಡಿಲಲಿ, ಕುಸುರು ಕುಸಲೆಯೊಳು
ಮಲಗಿರುವೆನು ನಾನೇಕಾಂಗಿ ;
ನೀನೆಂದಿಗೆ ಬರುವೆಯೊ ಎಂಬುವ
ಚಿಂತೆಯೆ ನಾನಾಗಿ.

ಕುಮಾರವ್ಯಾಸ

ಪಾಂಚಜನ್ಯ — ಕುವೆಂಪು.

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು; ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು!
ಆ ಕುರುಕ್ಷೇತ್ರವು ತೋರುವುದು;
ಆ ರಣರಂಗದಲಿ
ಆ ಸಂಗ್ರಾಮದಲಿ
ವೀರಕ್ಷತ್ರಿಯರಾರ್ಭಟ ಕೇಳುವುದು!
ಮತ್ತೆ ನವಿರೇಳುವುದು!
ಹೊಳೆಯುವ ಕೈದುಗಳಾಟದಲಿ
ಕಲಿಗಳ ಕದನದ ಕೂಟದಲಿ
ತಾಗುವ ಗದೆಗಳ ಸಂಘಟ್ಟಣೆಯಲಿ
ರಥ ಚಕ್ರ ಧ್ವನಿ ಚೀತ್ಕಾರದಲಿ
ಸಾಯುವರ ಶಾಪದಲಿ
ಬೀಳುವರ ತಾಪದಲಿ
ನಸು ಸೋತಿರುವರ ಕೋಪದಲಿ
ನೆರೆ ಗೆದ್ದವರಾಟೋಪದಲಿ

ನುಗ್ಗುವ ಸೈನ್ಯದ ಹಾಹಾಕಾರದಲಿ
ಕೆನೆಯುವ ಕುದುರೆಗಳ ಹೇಷಾರವದಲಿ
ಕಿವಿ ಬಿರಿಯುವುದು !
ಎದೆ ಮುರಿಯುವುದು !
ಬೀಸುವ ಖಡ್ಗದ ಮಿಂಚಿನ ಹೊಳಪಲಿ
ಚಿಮ್ಮುವ ರಕ್ತದ ಬುಗ್ಗೆಯ ನೋಟದಿ
ಕಣ್ಣೊಡೆಯುವುದು !
ಮೈ ನಡುಗುವುದು !

ಕೇಳಿರಿ ! ಪಾರ್ಥನ ಸಾರಥಿಯು
ರಣಗೀತೆಯನು,
ರಣ ನೀತಿಯನು,
ಬೋಧಿಸುವನು ಸವ್ಯಸಾಚಿಯನು !
ಕುರುರಂಗದ ಶರಶಯ್ಯೆಯಲಿ
ಭೀಷ್ಮನು ಮಲಗಿಹನು !
ಹೆಣಗಳ ಬಣಬೆಯ ಮಂಚದಲಿ
ದ್ರೋಣನು ಬಿದ್ದಿಹನು !

ನೇತ್ರದಿಂದುರಿಸುತಲಿರುವನು ಭೀಮನು,
ಅಗ್ನಿ ನೋಡಲ್ಲಿ!
ರಥದಿಂದುರುಳುತಲಿರುವನು ಕರ್ಣನು,
ಹಾ! ಹಾ! ನೋಡಲ್ಲಿ!
ರಣಚಂಡಿಯು ಆ ಚಂಡಿಯು ಮಗಳು
ಹೆಣ್ಣಿನ ರೂಪದ ಬರುತಿಹಳು!
ಮುಗುಳ್ನಗೆ ಬೀರುತ ನೋಡಲ್ಲಿ
ನಿಂತಿರುವಳು ರಣಾಂಗಣದಲಿ
ಕ್ರೂರವಾಗಿ ಮುಡಿಗೆದರಿ!

ವೈಶಂಪಾಯನ ಸರಸಿಯ ತೀರದಿ,
ತೋರುವದಾರಲ್ಲಿ?
ಕೌರವದೇವನು ನಿಶ್ಚಲನಾಗಿರುವನು
ಭೀಮನ ಸಮರದಲಿ!
ವೈರಿಯ ಎದೆಯನು
ಒಡೆಯುವ ಗದೆಯನು
ಮೇಲೆತ್ತುತ್ತಿರುವನು ನೋಡಲ್ಲಿ!

ಭೀಮನು ಬಿದ್ದನೆ ?
ಕೌರವ ಗೆದ್ದನೆ ?
ಮುಂದಾಗುವುದನು ಕಾಣೆಲ್ಲ !
ಇದಾವ ನ್ಯಾಯವು ?
ಅನ್ಯಾಯವು !
ಕೃಷ್ಣನ ಕುಹಕವ ನೋಡಲ್ಲ !
ಏನನು ನೋಡುವೆ ? ತಡೆಯುವೆ ಏಕೆ ?
ಕೌರವರಾಯನು ಮಡಿಯುತೆ ಬೀಳ್ವೆ ?
ಯುವಕನೆ, ತುಡುಕು ಕಠಾರಿಯನು !
ಹೊಡೆ ರಣಭೇರಿಯನು !
ನಡೆ, ನಡೆ ! ಊದು ತುತ್ತೂರಿಯನು !
ಕರೆ ರಣಮಾರಿಯನು !

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು, ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು
ಕಲಿ ಕೆಚ್ಚಾಗುವನು !
ಕವಿ ಹುಚ್ಚಾಗುವನು !

೧೧.೧.೧೯೨೭

ಒಂದು ರಾತ್ರಿ

ಮುಗಿಲ ತೊಟ್ಟಿಲಲಿ ಮಲಗಿರುವ ಚಂದಿರನ
ಜೋಗುಳ ಹಾಡಿ ತೂಗುತ್ತಿತ್ತು.
ರಿ ಮುದುರಿ ಮಲಗಿರುವ ಹಕ್ಕಿ ಗೂಡುಗಳಲ್ಲಿ
ರುಳು ಹೊಂಗನಸ ಹಾಡಿ ಸಾಗುತ್ತಿತ್ತು.
ಳಿರುವ ಹೊಂದಳಿರಲಿ ನರುಗಂಪಿನುದರದಲಿ
ಗನಸಿನ ಹಾಡು ಕೇಳುತ್ತಿತ್ತು.
ಬಾನಿನಿಂದಿನ ಹೊಳೆಹೊಳೆಯಂಬಾಗನ ಕಿರುಮೋಡಿ
ಸ್ವಾಧಿನ ಗೀತೆಯನು ಹೇಳುತ್ತಿತ್ತು.
ಮುಂದಿನ ದಿನದ ನವನವೋದಯಕಾಗಿ
ತವಕಿಸುವಂತೆ ತೋರುತ್ತಿತ್ತು.
ತೆರೆತೆರೆಯೊಳಿರುಳು ಮೆಲ್ಲ ಮೆಲ್ಲನೆ ಉರುಳಿ
ನ ಸುಪ್ರೋದಯವ ಸಾರುತ್ತಿತ್ತು.

ವನಗಾಯಕ.

[illegible]

ಉದಯದ ಗಗನದಲಿ ಅರುಣನ ಕಾಂತಿ
ಜಗದ ಜೀವನಕೆ ಚೇತನ [illegible]
ನಿನ್ನಯ ಗಾನದ ಕುಹೂ [illegible] ಮಾಯೆ
ಜನಮನದಂಬರ ಕೇಳುವುದು :
ಕೋಗಿಲೆಗಳ ಬಾಯ್ತೆರೆವುದು.
ಪ್ರಭಾತ ವಿತಾನವನೆತ್ತರ ಮಾಡಿ
ಕಾಡುನಾಡುಗಳ ತುಂಬಿ ತುಳುಕಾಡಿ
ಜಗನ್ನಿದ್ರೆಗೆ ಜೋಗುಳ ಹಾಡಿ
ಪ್ರಕೃತಿನೀ ತಣಿಸುವುದು ;
ಕ್ರಾಂತಿಗೆ ಶಾಂತಿಯನೀಯುವುದು.
ಓ ವನಗಾಯಕ ವರ ಮಾಣಿಕ್ಯ,
ನಿನ್ನ ಗಾನದ ಕೂಜನ ಪಾಠ
ಕಬ್ಬಿಗನಿಗೆ ಮುಕ್ತಿಯ ಆವೇಶ:
ಸುರಲೋಕಕೆ ನೀ ಸ್ವರಬಾಣ !
ಕೇಳ್ವವರೆಲ್ಲಗೆ ತಿಳಿಯದು ನಿನ
ಕಂಠದ ವೈಖರಿ. ತಿಳಿಯಲಿ ನೀ,
ಸಾವಿನ ಬದುಕಿನ ನಿನ್ನ ಗಾನ
ನಿನಗೆ ನಮೋ ಓ ಕಾಜಾಣ !

ಮುಗಿಲ ಲೀಲೆ.

'ಪ್ರೇಮಕಾಶ್ಮೀರ'

ಕುವೆಂಪು

'ಬಾನಿನ ಜಗಲಿಯ ನೀಲಿಯಲಿ
ಬಿಳಿಮುಗಿಲಿನ ಕೂಸಾಡುತಿದೆ!'
'ಹಡಗಿನ ಪಟ ದಿಂತ ಕಡಲಿನಲಿ
ಗುರಿಯಿಲ್ಲದೆ ತೇಲಾಡುತಿದೆ!'
'ಯಮುನೆಯ ನೀರಿನ ಹೊನಲಿನಲಿ
ನಿದ್ದೆಯ ಹಂಸವು ತೇಲುತಿದೆ!'
'ನೀಲಿಯ ತೈಲದ ಬಟ್ಟಲಲಿ
ಬೆಣ್ಣೆಯ ಮುದ್ದೆಯು ಹೊಳೆಯುತಿದೆ!'
'ಹಸುರನು ಹಾಸಿದ ತೊಟ್ಟಿಲಲಿ
ಬಿಳಿಗನಸಿನ ಸಿಸು ನಿದ್ರಿಸಿದೆ!'
'ಅಮ್ಮನ ಕಣ್ಣಿನ ಕಪ್ಪಿನಲಿ
ತಮ್ಮನ ಚಿತ್ರವು ಮುದ್ರಿಸಿದೆ!'
'ಮುಗಿಲಾಡುತಿದೆ!
'ಮುಗಿಲೋಡುತಿದೆ!'

ನಾದವಿರದ ಬದುಕು

ಕೆ.ಎಸ್. ನಿಸಾರ್ ಅಹ್ಮದ್

ನಾದವಿರದ ಬದುಕೇ, ಉನ್ಮಾದ ಕೋಲಾಹಲ;
ಈ ನೆಲದ ಜಲದ ಸವಿಯು, ರವಿ ಕಿರಣವೇ ಮರೆಯುವುದೇ

ನಾದವಿರದ ದುಡಿತದಲ್ಲಿ ಬಲಿಯಾಗದಿರಲಿ ಬೆರಗು
ದುಡಿದು ಬಾಳ್ವ ಸಂಗತಿಯಲ್ಲಿ ಮರೆದಿರಲಿ ಕಲೆಯ ಸೊಗಸು

ಕಣ್ಣಿಗೆ ಎಷ್ಟು ಇಷ್ಟವೇನು ? ಕನಸಿರದ ಬಾಳು, ಬಾಳ್ಗೆ
ಮುಳ್ಳುಬಳ್ಳಿ ಸಿಂಗರಿಸದ ಕರಿಮುಗಿಲ ಸೊಂಪು ಮಾಲೆ.!

ಬಿದಿಯಸ್ತ್ರಗಳಲಿ ಲೋಕ ತಾನಲ್ಲ ಬರಿಯ ಮುಗ್ಗ;
ಕತ್ತಲು ಬಿಡುವಿನಲ್ಲಿ ಸತತ ಜ್ಯೋತಿ ತಾನಾಗಬೇಕು ಕಣ್ಣು.

ತಾಳ ಶ್ರುತಿಗಳು ಜೀವ ಮಾಗಿ ಮುಗುಳ್ನಗುವ ಪಡೆಯುತಿರಲಿ
ಹೊಸ ನಲಿವ ನೆಲೆಗೆ ತಾನು ನಿಲುವಂತೆ ನಡೆಯುತಿರಲಿ

ರಾಧೆ ನನ್ನ ಕನ್ನೆಗೆ.

'ಪ್ರೇಮಕಾಶ್ಮೀರ'

ಹೊಂಬಿದ್ದೆಳೆಂತು ಗರುಕೆ ಮೇಲೆ
ಒಕಿಬ್ಬಿ ಹುಲ್ಲೆ ಮರಿಯಂತು ನ್ನೋಲೆ
ನನ್ನನೊಪ್ಪಿ ರಾಧೆಯಂತುಪ್ಪಿ
ಒಕುಂಬಿನಿದ ದಳು ಕನ್ನೆಗೆ!

ಎಲ್ಲ ಬರೆದುಕೊಳ್ಳುವ ವಿಧಿ
(ನಲ್ಲೆ ಶಾಶ್ವ ಪುಣ್ಯನಿಧಿ!)
ನಿನಗೆ ನನ್ನದೊಂದು ಮೊರೆ:
ಮುತ್ತು ಕೊಟ್ಟು ದನಿಯ ಬರೆ,
'ರಾಧೆ-ನನ್ನ-ಕೆ-ನ್ನೆ-ಗೆ'.

'ಏನನು ಕೇಳಿ, ಏನನು ನೀಡಿ?'
ಸುಳ್ಳನೆ ಬರೆ, ನಿನಗೆ ಮುಕ್ತಿ!
'ಏನಗೆ ಮೋಕ್ಷ, ಭ್ರಾಂತಿ, ಭಕ್ತಿ!
ಹೋಗಲಿ! ಎದಕೂ ಕ್ಷಮೆ!
ಆದರೆ ನನ್ನದೊಂದೆ ಮೊರೆ:
ಮುತ್ತು ಕೊಟ್ಟು ದನಿಯ ಬರೆ,
ರಾಧೆ

ಆತ್ಮನಿವೇದನ.

[illegible]? ಕುವೆಂಪು.

'ಬೃಂದಾವನಕೆ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ!'
'ಬೃಂದಾವನದಿ ಹಾಲನು ಕೊಳ್ಳುವ-
ರಾರಿಹರೇ ಹೇಳಿಂದುಮುಖಿ?'

'ಗೋವನು ಕಾಯುವ ಗೋವಿಂದನಿಹನೇ
ಹಾಲನು ಕೊಳ್ಳುವ, ಕೇಳ್ ಸಖಿ!
ಚಿನ್ನವ ಕೊಡನೇ, ರನ್ನವ ಕೊಡನೇ,
ತನ್ನನೆ ಕೊಡುವನು ಬಾರ್, ಸಖಿ!'

'ಕಣ್ಣನು ಮೋಹಿಪ ಪೀತಾಂಬರವನು,
ಬಣ್ಣದ ಬಳೆಗಳ ಧರಿಸು, ಸಖಿ;
ಚೆನ್ನನ ಮೋಹಿಸುವೆ ಚೆಂದಿನ ಹಾರವು
ಸಿಂಗರಿಸಲಿ, ಹೇ ನಳಿನಮುಖಿ!
ಘಿಲ್ಘಿಲೆನ್ನಲಿ ನೂಪುರ, ಗೋಪಿ,
ಹಣೆಯೊಳು ಚಂದನ ರಂಜಿಸಲಿ!
ತೊಂಡೆಯ ಹಣ್ಣನು ತುಟಿಗಳು ನಗಲಿ,
ನಡೆನ [illegible] ರಲಿ ತಾ[illegible]!'

'ಯಮುನಾತೀರದೊಳ್ಳಲೆಯುವ ಬಾರೇ
'ಹಾಲು ಬೇಕೆ ಹಾಲೆ'ಂದು ಸಖಿ,
ಹಾಲನು ಮಾರುವ ನೆವದಿಂದ ಹರಿಯು
ಮೋಹಿಸಿ ಕರೆಯುವ ಬಾರೆ, ಸಖಿ!

ಹಾಲ ನಿವೇದಿಸಿ ಆತ್ಮವನರ್ಪಿಸಿ
ಮುಕ್ತಿಯ ಹೊಂದುವ, ಸೌಮ್ಯಮುಖಿ!
ಹಾಲನು ಮಾರಿ ಹರಿಯನು ಕೊಳ್ಳುವ
ನಾವೇ ಧನ್ಯರು, ಕಮಲಮುಖಿ!

ನಮ್ಮ ಲಾಭವ ಮೀರುವ ಲಾಭವು
ಬೇರಿನ್ನಿಹುದೇ, ಇಂದುಮುಖಿ?
ಬೃಂದಾವನಕೇ ಹಾಲನು ಮಾರಲು
ಹೋಗುವ ಬಾರೇ ಬೇಗ, ಸಖಿ!'

೭. ಎಸ್. ೩.

ನನ್ನ ಹೃದಯವನಿತ್ತು ಹಾಡು ನನ್ನ ನಿನ್ನ ಮೋಹಕೆ
ಸುಖಿಸು ನೀನೆ ಸಮಯವನಿತ್ತು ತಕ್ಕ ಭಾವ ರಾಗಕೆ ||

ತಂತಿ ತಂತಿ ಮಿಡಿತದಲ್ಲಿ
ಹಿಡಿತವಿರಲಿ ಬೆರಳಿಗೆ
ಗತ್ತು ಗತ್ತಿನಲ್ಲಿ ತಾಕ-
ಇರಲಿ ನಾದಲಹರಿಗೆ.

ಎನಗೆ ಸೋತು ಎನಗೆ ಹೃತು
ತಾರೆ ಎದೆಗೆ ಮಲ್ಲಿಗೆ.
[illegible]
ತುಂಬು ಮಲ್ಲಿಗೆ.

ತಂತಿ ತಂತಿ ಮಿಡಿತದಲ್ಲಿ ಹಿಡಿತವಿರಲಿ ಬೆರಳಿಗೆ
ಗತ್ತು ಗತ್ತಿನಲ್ಲಿ ತಗಕಿರಲಿ ನಾದಲಹರಿಗೆ
ನಾದಲೋಕದಲ್ಲಿ ಏಕವಾಗಲೆದೆಯು ಶೋಕವ
ಶೋಕಲೋಕ ತೊಳೆಯಿತು ಬೆಸುಗೆ ಭಕ್ತಿಯದಲ್ಲಿ ಪ್ರಾರ್ಥನೆ ||
ನನ್ನ ಜೀವಮಾನದಲ್ಲಿ ತುಂಬಿ ಬಾರೆ ಹಾಡಿಗೆ
ನನ್ನ ತಂತಿ ಮೀಟುಕೆಯಲ್ಲಿ ಬೆಳೆದು ಬಾರೆ ವೀಣೆಗೆ
ಎದೆಯು ಮಿಡಿತವಿತ್ತು ಹಾಡೆ ನನ್ನ ಹಾಡ ಸೊಂಪಿಗೆ
ಸ್ವರಕೆ ಸ್ವರವ ಬೆರೆಸಿ ಏಕಮಿಳನ ಒಂದೆ ರಾಗಕೆ ||

ವೀಣಾಗಾನ.

ಶ್ರೀಮತಾಕ್ಷೀರ — ಕುವೆಂಪು.

ನಾನೆ ವೀಣೆ, ನೀನೆ ತಂತಿ
ಅವನೆ ವೈಣಿಕ;
ಮಿಡಿದನೆನಲು ರಸದ ಹೊನಲು
ಬಿಂದು ಬಿಂದು ಸೇರಿ ಸಿಂಧು
ನಾದ ರೂಪಕ.

ಭುವನವೆಲ್ಲ ಸವಿಯ ಸೊಲ್ಲ
ಕವಿಯ ಗಾನ:
ನನ್ನ ನಿನ್ನ ಹೃದಯಮಾನ-
ಕಲ್ಲಿ ಜೇನ ಸೊಗದ ಸ್ನಾನ;
ಅಮೃತ ಪಾನ.

ತಂತಿಯುಂಚಿತರತಿ ಮಿಡಿಂಚಿ
ರಸ ಪ್ರಳಯವಾಸೆ
ನನ್ನ ನಿನ್ನ ಜೀವಮಾನ
ತಾನ ತಾನ ತನನ ತಾನ
ಪ್ರಾಣ ಪುಳಕಿಸೆ.

ಎಂತು ನಿನ್ನನು ಗೆಲುವೆ?

'ಪ್ರೇಮ ಕಾಶ್ಮೀರ' — ಕುವೆಂಪು

ಕೆಂಪು ಗುಲಾಬಿಯಂತು ಚೆಂದುಟಿ ಚೆಲುವೆ,
ಎಂತು ನಿನ್ನನು, ಹೇಳು, ಗೆಲುವೆ ?

ಸುಗ್ಗಿಯ ಹೊಸಸಿರಿ ಹೂಗಳ ಕೊಯ್ದು
ತರಲೇನೊಂದಿನಿಮಾಲೆಯ ನೆಯ್ದು?
ಕಾಜಾಣವ ಕೋಗಿಲೆಗಳ ಬೇಡಿ
ಕಲಿತಿಂಚರದಿಂ, ನಿನ್ನನೆ ನೋಡಿ,
ತುಟಿಯಿಂ ಸೋರುತಲಿರೆ ಸವಿಜೇನು
ಮುದ್ದಿನ ಹೆಸರನು ಕರೆಯಲೆ ಏನು?
ಸೊಬಗಿನ ಕದನದಿ ಮದನನ ಕೊಂದು,
ಸುರಲೋಕದ ವರಗಂಗೆಯ ಮಿಂದು,
ನಂದನದಮೃತದ ಫಲವದ ತಿಂದು,
ನಿನ್ನೆಡೆ ನಿಂತರೆ 'ರತಿ, ಬಾ!' ಎಂದು?
ದಾನವೊ ಮಾನವೊ ಪ್ರಾಣವೊ ಏನು?
ಯಾವುದರಿಂದೆನಗೊಲಿಯುವೆ ನೀನು?

ಕೆಂಪು ಗುಲಾಬಿಯಂತು ಚೆಂದುಟಿ ಚೆಲುವೆ
ಎಂತು ನಿನ್ನನು, ಹೇಳು, ಗೆಲುವೆ ?

ಮುಳ್ಳುಇದರೇನ್ ಸಾವೆ?

ಶ್ರೀಮೀನಾಕ್ಷಿಗೆ — ಕುವೆಂಪು.

ಬೆಳ್ದಿಂಗಳು ಹಾಲ್ ಚೆಲ್ಲಿದ
ಹುಣ್ಣಿಮೆಯಿರುಳುಗಳಲ್ಲಿ
ಬನದಂಚಿನ ಹೊಳೆ ತುಂಗೆಯ
ಸಕ್ಕರೆ ಮರಳಲ್ಲಿ
ಓ ರೋಮರ್ಕರೆ ಸಾವಿರ್ಕರು
ಶೃಂಗಾರದಿ ಕೂಡಿ
ನಲಿದಾಡುವ ಬಾ ನಲ್ಲಳೆ,
ರಸದೋಕುಳಿಯಾಡಿ.

ಮೇಗಡೆ ಬಾನ್, ಕೆಳಗಡೆ ಕಾನ್,
ಹೊನ್ನದ ಜೇನ್ ನಡುವೆ ;
ನಿನ್ನೊಳು ನಾನ್, ನನ್ನೊಳು ನೀನ್,
ನಮಗಿನ್ನೇನ್ ಗೊಡವೆ ?
ಹೊನ್ನೊಲುಮೆಯ ಹೊಂಬೊನಲಲಿ
ತೇಲುವ ಬಾಳ್ ನಾವೆ
ಆಲಿಂಗನದಾವರ್ತದಿ
ಮುಳ್ಳುಇದರೇನ್ ಸಾವೆ?

—

ಯಾವ ಜನ್ಮದ ಮೈತ್ರಿ

'ಕೃತ್ತಿಕೆ'

ಕುವೆಂಪು

ಯಾವ ಜನ್ಮದ ಮೈತ್ರಿ, ಈ ಜನ್ಮದಲಿ ಬಂದು
ನಮ್ಮಿಬ್ಬರನು ಮತ್ತೆ ಬಂಧಿಸಿರುವುದೋ ಕಾಣೆ!
ಎಲ್ಲಿದ್ದರೇನಂತೆ, ನಿನ್ನನೊಲಿಯುವೆ ನಾನೆ,
ಗುರುದೇವನಾಣೆ, ಓ ನನ್ನ ನಚ್ಚಿನ ಬಂಧು!
ವಿಶ್ವಜೀವನವೆಂದು ಪಾರವಿಲ್ಲದ ಸಿಂಧು:
ಮೇಲೆ ತೆರೆ ನೊರೆಯಿದ್ದು ಭೋರ್ಗರೆಯುತಿರೆ ಸದಾ
ಅಂತರಾಳದಲಿ ಗುಪ್ತಗಾಮಿನಿಯಾಗಿ
ಹೃದಯಗಳು ನಲಿಯುತಿವೆ ಪ್ರೇಮತೀರ್ಥದಿ ಮಿಂದು
ಅಪರಸ್ಪರ್ಶಗಳು ಸೃಷ್ಟಿಕರ್ತನಿರಲು;
ಸ್ವಾರ್ಥ ಜಿಜ್ಞಾಸೆಯಲಿ ಕಾಲಹರಣವದೇಕೆ?
ಕುರುಡನಾದರೆ ದಾರಿಯರ್ಥ ತಿಳಿಯಲು ಬೇಕೆ?
ಹಾದಿ ಸಾಗಿದರಾಯ್ತು! ಬರುವುದೆಲ್ಲಾ ಬರಲಿ!
ಬಾರಯ್ಯ, ಮಮ ಬಂಧು, ಜೀವನಸುಧೆ ದೋಣಿಯವು
ಒಂದಾಗಿ ಮುಂದುವರಿಯುವ; ಹಿಂದಿರಲಿ ನೋವು!

೭.೧.೨೨

ಶಿ. ಡಿ.

ನೇರ ನೇರ ನೇರ ನಿನ್ನ ಅರಸಿ ಬಂದೆ ಹೇ ವಿಭೋ
ವೇಗ ನಿನ್ನ ಬಳಿಗೆ ಬರುವ ತವಕದಿಂದಲಿ.

ದೂರ ದೂರ ದೂರದಿಂದ ಸಾಗಿ ಬಂದೆ ಹೇ ವಿಭೋ
ದಾರಿ ಎಡರ ದಾಟಿ ಬಂದೆ ನಿನ್ನ ಸೇರಲು
ದಾರಿ ದಾರಿ ದಾರಿ ಇನಿತು ಸವೆಯುತಾಯ್ತು ಹೇ ಪ್ರಭೋ
ದಾರಿ ಕಂಡಿತೆಷ್ಟು ದೂರ ದೂರ ನಡೆದರೂ...

ತೀರ ತೀರ ತೀರ ಬಳಿ ಕಡೆಗೆ ಬಂದೆನೆನ್ನೆ ವಿಭೋ
ದಾರಿ ಕೊನೆಯು ಕಂಡಿತಿಲ್ಲ ನಿನ್ನ ಪಾದದಿ
ದಾರಿ ದಾರಿ ದಾರಿ ಹಗುರ ಬಾರದಾದೆನೆನ್ನೆ ಪ್ರಭೋ
ಸೋತುಬಿಟ್ಟೆನೆಂದು ಹೇಳ್ವ ಲಜ್ಜೆ ತಾಳೆನೆ.

ಪೂರ ಪೂರ ಪೂರ ನಿನ್ನ ನಂಬಿ ಬಂದೆ ಹೇ ವಿಭೋ
ನಿನ್ನ ಕೃಪೆಯದೊಂದು ಮಾತ್ರ ಕಾಯುತೆನ್ನನು
ಕಾವ ಕಾವ ಕಾವರಾರು ಬೇರೆಯಿಲ್ಲವೆನ್ನ ಪ್ರಭೋ
ಕಾವತಂದ ಭಕ್ತಿ ಎನಗೆ ಒಂದೆ ಆಸರೆ.

ನಲವು.

ಕೆ.ಎಸ್. ನಿಸಾರ್ ಅ

ನನ್ನ ನಲವಿನ ಬಳ್ಳಿ ಮೈದುಂಬಿ ನಲಿವಾಗ
ಆಲೋಕವೇ, ಹೀರುತಿರು ದುಂಬಿಗಳು ಹೂವ ;
ಬಾಳಿನ ಕಷ್ಟಗಳ ಬಲು ಘೋರ ಸುಂಟರಗಾಳಿ
ಬಿಗಿದೊಂದೆ ಕನಸಿಡುವೆ, ಬೆರಗಿರು ನೋವ.

ಸವಿಸುಳಿದೀ ಸುಳಿಗೆ, ಬಂದು ಮೆಲ್ಲನೆ ಬಳಿಗೆ
ಪಲ್ಲವಿಸುತಿಹೆ ಎಡೆಂತು, ಚೈತ್ರದಂತೆ ;
ಇಂದು ನಾ ಮೈ ಮರೆತು, ಬೆಳೆಯುವೆ ಹೊಸ ಬೆರೆತ
ಆಸೆಗಳ ಚಿಪ್ಪೊಡೆದಿರು ಹಕ್ಕಿಯಂತೆ.

ಆಗಸಕೆ ಎಸೆದಿರುವ ಕಲ್ಲಿನಂತೇರುವೆನು
ಗಾಳಿಯಲಿ ತೇಲುವೆನು — ಗಂಧದಂತೆ ;
ಮತ್ತೆ ಬೀಳುವೆನಿಲ್ಲ, ಚಿಂತೆಗಳ ಕೆಸರಲ್ಲಿ —
ಬಿಚ್ಚುಬಿಡು ಈಗೆನ್ನ ಮುಕ್ತನಂತೆ.

ಹೃದಯ ಸಮುದ್ರ

ಹೃದಯಸಮುದ್ರ ಬೇಂದ್ರೆ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಮಿಂಚು ಬಳ್ಳಗ ತೆರೆತೆರೆಗಳಾಗಿ ಅಲೆಯುವುದು ಪೂರ್ಣಪೂರಾ.
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರು ಧೀರಾ
ಅದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಲ್ಲಾ ದೂರಾ.

ಕರೆ ಬಂದಿತಲ್ಲಾ, ತೆರೆ ಬಂದಿತಲ್ಲಾ, ನೆರೆ ಬಂದಿತಲ್ಲಾ ಬಳ್ಳಿಗೆ.
ದೂರಿತ್ಯದ ಭಾವ, ಚೈತ್ಯದ ಜೀವ ಅದರೊಳಗೆ ಬೆಳ್ಳಗೆ ಬೆಳಗೆ.
ಇದೆ ಹೃದಯವಲ್ಲಾ ಇದೆ ಹೃದಯ ತಮ್ಮ ನವತೆ ನಿಮ್ಮ ಆತ್ಮಗಳಿಗೆ.
ಅಂಬಿಗನು ಬಂದ ನಂಬಿಗನು ಬಂದ ಬಂದ್ಯದ ದಿವ್ಯಗಳಿಗೆ.

ಇದು ಉಪ್ಪುನೀರ ಕಡಲಲ್ಲ ನಮ್ಮ ಒಡಲಲ್ಲ ಇದರ ನೆಲೆಯು
ಕಾಣುವಂತಿಗಲಲ್ಲ ಕಾಣುವಂತಿಗಲ್ಲ ತಿಳಿದ್ಯದ ಇದರ ಬೆಲೆಯು.
ಸಿಕ್ಕಲ್ಲ ಅಲ್ಲ ಸಿಕ್ಕಲ್ಲ ಮಾತ್ರ ಒಡೆಯುವುದು ಇದರ ಸೆಲೆಯು
ಕಣ್ಣ ಕಳ್ಳಿದಾಗ ಕಾಲ ಹೋರಾಡಾಗ ಹೊಳೆಯುವುದು ಇದರ ಕಳೆಯು.

ಬಂದವರ ಬಳಿಗೆ ಬಂದ್ಯದ ಮುತ್ತು ನಿಂದವರ ನೆರೆಗು
ಬಂದ್ಯದೋ ಬಂದ್ಯದ.
ನವಮನುವು ಬಂದ ಹೊಸ ದ್ವೀಪಗಳಿಗೆ ಹೊರಟಾನ ಬನ್ನ
ಅಂದ್ಯದೋ ಅಂದ್ಯದ.

ಮೊಂಯೂ ಕಿನ್ನರಿ.

'ಸಖೀಗೀತ' ಬೇಂದ್ರೆ

ಮರುಳು ಮಾಡಾಕ ಹೋಗಿ ಮರುಳಾಗಿ ಸಿಕ್ಕಳ ನಾರಿ
ಮರುಳ್ಯಾಕ ನಾನ್ಯಾಕ ಜಂಗಮುಂದ್ಯಾಗ
ಕಿನ್ನರಿ ಆಕಿನ್ಯಾಕ ಕೈಯಾಗ
ನುಡಿಸಾಕ ಬಂದ್ಹಾಂಗ ಮೈಯಾಗ ||
ಆಡುತಾಡುತ ಬಂದು ಸಿಂಗಾರ ಹೊಳ್ಳಿ ಹಾಂಗ
ಪಾಡಿಲೆ ತಿರುಗಲ್ಯ ಕಡಿದ್ಯೇನ
ನಾದ ತುಳ್ಕಿ ಕೊಂಡ ಗುಂಗಿಂದು ಹುಳ್ಳ ಹ್ಯಾಂಗ
ಗುಣುಗುಣು ಗೋನಗುಟ್ಟಿ ನುಡಿದ್ಯೇನ
ತನ್ನೊಡೆಯನ ಕೂಡ ಬಿಕ್ನ್ಯಾಕ ನಡಿಸೀದ
ಕುಣಿ ಕುಶ್ಗುರುವಾಗ ಹಿಡಿದ್ಯೇನ
ಮುಚ್ಚಿದರ ಮುರುಕುದ ಪಂಚ್ಯೋರ ಕಲೆತೆಲ್ಲ
ಸುಳ್ಳ್ಯಾನ ನಿಡಿಮಿಡಿ ನಿಡಿದ್ಯೇನ.
ಎದಿಗೊತ್ತಿ ಹಿಡಿದರು ಮುತ್ತಿಟ್ಟು ಮುತ್ತಿಟ್ಟು
ಮುಳ್ಳುಮುಳ್ಳು ನುಮ್ನೆ ಅತ್ತೇನ
ಕೈಯಾಡಿಸಿದಂತೆ ಮೈಕಮ್ಮ ನಡುಗಿದಿ
ಇದು ಹೊಸ ಗಮಕದ ಗತ್ತೇನ
ಮೊದಲ ಭೆಟ್ಟಿಗೆ ಬಂದ ಮಳ್ಳ್ಯಾನ ಮಾಡಿದ್ಹಾಂಗ
ಮುಂಕೊಟ್ಟ ತಡವಡಿಸಿ ತಡದೇನ.

ತಂತ್ಯೆಲ್ಲ; ಜೀವದ ತಂತು ನೀ ಅಂತ್ಯದ
ಶ್ರುತಿ ಹಿಡಿದು ಜತಿ ಹಿಡಿದು ನಡದೇನ.
ಕಂಕಣಾ ಕಾಲುಂಗರಕ ಮೆಲ್ಲುಸಿರ ಛಂದಕ
ಕುಣಿತಾನ ನಡೆದಾಂಗ ಕಾಲ್ಯಾಗ
ಕರಗಿ ಬಾ, ಅರಗಿ ಬಾ, [illegible] ಎರಗಿ ಬಾ, ಸ್ವಾಮಿ
ಸಕ್ಕರಿ ಬೆರೆದಾಂಗ ಹಾಲ್ಯಾಗ
ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ
ಬಿಂಬೀಸಿ ಎದೆಯೊಳಗ ಅಂದ್ಹಾಂಗ
ರಭಸಾದ ಮಿಡಿದಾವ ತಂತಿ; ಗೆಜ್ಜೆ ತ್ರೃಜಣ ಕಟ್ಟಿ
ಮಂಡಿಂಡು ಮೈಯೊಳಗ ಬಂದ್ಹಾಂಗ.
ಅಂಗಳದ ಇನಿಯನ ಕಕ್ಕನೆ ನೋಡುತ
ಬಸಿರ ಹೂ ಕುಲುಕುಲು ನಕ್ಕ್ಯಾಂಗ
ನಲ್ಲ ಮುಟ್ಟಿದ ನಲ್ಲ, ನಲ್ಲೆಯು ಮೈಯೆಲ್ಲ
ಹಿಗ್ಗಿನ ಮುಳ್ಳಿಗೆ ಸಿಕ್ಕ್ಯಾಂಗ
ಜುಂಜುಮು ರುಂಜುಮು ಗುಂಗುಣು ಘುಂಘುಮು
ನಾದದ ನದಿಯೊಂದು ನಡೆದ್ಹಾಂಗ
ಗಲ್ಲಗಲ್ಲಕೆ ಹಚ್ಚಿ ನಲ್ಲನಲ್ಲೆಯರಿರುಳು
ಗುಜುಗುಜು ಗುಲುಗುಲು ನುಡಿದ್ಹಾಂಗ.

ಹೆಣ್ಣಿಂದು ಜೇನ್ನೊಣ ಪಟ್ಟಾದಿ ಕಟ್ಟ್ಯಾದಿ
ಹೂಜೇನ ಹನಿಹನಿ ಕುಡಿದ್ಯಾಂಗ
ಮುಂಗಾರಿ ಮುಗಿಲ ಮನದ ಮಿಡುಕಾಟದ
ಮೊಗ್ಗಿಗೆ ಬಾಯಿಲ್ಲ ಬಿಡಿಸ್ಯಾಂಗ
ಸಂಜೆಯಿಂದು ಮುಗಿಲಾಗ ಕೋಲ್ಬಿಲ್ಲು ತೊಟ್ಟ್ಯೊಂದು
ಗಾಳಿ-ಸುಳಿಗೆ ಶೃತಿ ಹಿಡಿದ್ಯಾಂಗ
ಗಗನಸಂಚಾರದ ನಾರದನ ವೀಣೆಯಿಂದ
ರಾಗೀನ ತಂತಿ ಬಿಡಿಸ್ಯಾಂಗ.
ಆತನೀತನ ಪಂತ ಯಾತನದ ಯಾತನೆಂತು
ಯಾತ ತಿರುಗೊಟ್ಟ್ಯದು ನಿಂದಾಂಗ
ನಾಡೀನ ನುಡಿನುಂಗಿ ತಾಡೀನ ತಾನೆ ತಾ
ತಾನಾಗಿ ತನನನ್ನ ಬಂದ್ಯಾಂಗ
ರಂಗೊಂದು ದಂಗೊಂದು ಗುಂಗೊಂದು ಹೊಂದಿಕ್ಯೊಂದು
ಹತ್ಯಾಗಿ ಜತ್ಯಾಗಿ ಸುಳಿದ್ಹಾಂಗ
ಹಳೆಯ ಜೀವದ ಮ್ಯಾಲೆ ಜೇನಿನ ಸುರಿಮಳಿ
ಜೇಂಗುಟ್ಟಿ ಹನಿಹನಿ ಇಳಿದ್ಯಾಂಗ.
ಪ್ರಕೃತಿ ಪುರುಷಗೆ ಸೋತು ಪ್ರಾಣಸ್ವಂತಿಕೆನಾತು
ಅನುಭವದ ತಿಳಿವಾತು ಆದ್ಯಾಂಗ

ಹಾಸಾಕ ಹಾಡೀನಿ ಹೊಚ್ಯಾಕ ಕಿನ್ನರಿ
    ನೆಯ್ಯಂತೋಳಗೆ ನೂಲು ಹೊಸೆದ್ಯಾಂಗ
ಜೀವದ ರಸ ಹಿಂಡಿ ತುಂತುರು ಮಳೆಯಾಗಿ
    ತಂತಿಯ ಮಿಂಚೆಲ್ಲ ಸಿಡಿದ್ಯಾಂಗ
ಮುಗುಳ್ನಗಿದ್ದನ ಕೈಯ-ಕಿನ್ನರಿಯಾಗಿ ಸಿಕ್ಕ
    ಮಾಯಿಯ ಮೈಗೆ ಮೆಲ್ಲ ನುಡಿದ್ಯಾಂಗ.

ತುಂಬಿ ಬಂದಿತ್ತ.

[illegible] ಬೇಂದ್ರೆ.

ತುಮತ ತುಮತ ತುಮತ ತುಮತ ತುಮತ ತುಮತ ತುಮತ ತುಮ

ತುಂಬಿ ಬಂದಿತ್ತ ತಂಗಿ

ತುಂಬಿ ಬಂದಿತ್ತ ||ಪಲ್ಲ||

ಬೆಳ್ಳಕ್ಕಿಗಿಂತ ಬೆಳ್ಳಗೆ ಇತ್ತ   ಮನಸಿಗೆ ಮುಟ್ಟಿತ್ತ

ಗಾಳಿಗಿಂತ ತೆಳ್ಳಗೆ ಇತ್ತ   ಬೆಳ್ಳಕ್ಕಿಗೆ ಮರಳಿ ಕಮಲವರ

ಬೆಳದಿಂಗಳಿನ ಗಂಗಿ ಹಾಂಗ   ಜೇನ ಬಿಟ್ಟಿತ್ತ ತಂಗಿ

ಬೆಂಗಸೆ ನೆಗೆದಿತ್ತ   ತುಂಬಿ ಬಂದಿತ್ತ

ಮೈಗೊಳ್ಳಿಸುವ ಮಾಟಮಾಟಗ ||ತುಮತ ತುಮ||

ಮಾಡಿ ಬಂದಿತ್ತ   ಕಾಲಹಾದ್ಯಾಗ ಕಟ್ಟಿತ್ತ

ಅದಿಮುದಿಗೂಡಿ ನಡುವಂತೆಲ್ಲ   ನಾವಿನಾಂಗ ತೆಪ್ಪಿತ್ತ

ಮುಳಗಿಸಿ ಬಿಟ್ಟಿತ್ತ ತಂಗಿ   ಹದ್ದು ಬಂದು ಹಾವಿನ ಮ್ಯಾಲೆ

ತುಂಬಿ ಬಂದಿತ್ತ ||ತುಮತ ತುಮ|| ಎರಗಿ ನಿಂತಿತ್ತ

ಇರುಳು ಮುಖದ ಮ್ಯಾಗ ಹಗಲಿನ ಬೆಳ


ದೂವಿಗಿಸುವ ಕಂಪು ಇತ್ತ   ಕರಗಿ ನಿಂತಿತ್ತ

ಹಾಡಿಗಿಸುವ ಇಂಪು ಇತ್ತ   ಗುಂಗು ಹಿಡಿದು ತಂಗಿದಾಗ

ಜೀವಕ ಮನ ಕಟ್ಟಿದ್ಹಾಂಗ   ತುಂಬಿ ನಿಂತಿತ್ತ ಈಗ

ಎದ್ಯಾಗ ನಟ್ಟಿತ್ತ   ತುಳುಕಿ ಹೋಗಿತ್ತ

ಮನಸಿನ ಮಾತು ಹಿಡಿದ್ಹಾಂಗ   ತಂಗಿ ತುಂಬಿ ಬಂದಿತ್ತು



ಚಿತ್ರಿಂದು ಮಳೆಂದು ಸುಂಜೆ.

ಗುಜರಾತಿನ. ಬೇಂದ್ರೆ

ಇರುದು ಪ್ರೀತಿಂದು ಹಾಂಗ.
ಸುರುದು ಚಿತ್ರಿಂದು ಮಳೆಂದು
ಮುಗುಳು ನಗಿ ಸುತ್ತುರುಳಿಸಿ
ಸುರದ್ಯತ್ರ ಸುರದಾವ.
ಚಿತ್ರೇನೋ ಚಿತ್ರೇನೋ
ಮಿಂಚಿನ ಮುತ್ತ್ರೇನೋ
ಕಣ್ಣುಬಿಟ್ಟು ತೆರೆವೃದರಾಗ
ಹರದ್ಯಾರಿಗೆ ಹರದಾವ.
ಇಳಿದು ಗುಡ್ಡದ ತಲೆಗೆ
ಮೋಡ ಮುಸುಕಿಳಿದಾಗ
ಬದಿಂದು ಗುಡ್ಡದ ಮ್ಯಾಲೆ
ಬಿಸಿಲು ಮೈ ಚಾಚ್ಯಾವ.
ಗಿಡಬಳ್ಳಿ ಎಲೆ ಎಲೆ
ತೊಂದ್ದು ತೆಂಗಿನ ಗರಿ
ಬೆಳ್ಳಿ ಸುಳ್ಳಿ ಬರೆದಾಂಗ
ಮಿತಿವ್ಯಾರಿ ಮಿಂಚ್ಯಾವ.
ಮಿಮವಲಕ ಮುಗಿದ ಕಿರಣ
ಮುಗಿಲಕ ಚುಚ್ಚಿಕೊಂಡು

ಅಂತಿಣ ಕುಂಕುಮ ತಂದು
ಮುಗಿಲ್ಗಳಿಗೆ ಹಂಚ್ಯಾವ.
ಸಂಜೆಸೂರ್ಯನ ಹೆಗಲ
ಜರದ ಸುತ್ತೇಲ ಸೋಗಿ
ನವಿಲಸೋಗೆನ್ನ ಮುಗಿಲ
ಸೆರಗ್ಗ ಬೀಸ್ಯಾವ.
ಹೊಲಹಂಚಿನ ಹಸಿರ ಬಯಲು
ಮುತ್ತಿನ ಸೋಸೆ ತಳೆದು
ಮುಚ್ಚದವರ ಪಾದಕ್ಕಂತ
ಹರದಿ ಹಾಸ್ಯಾವ.
ದಿನಗೂಲಿಗೆ ದುಡಿದು ದಣಿದು
ತಣಿದು ಹೊರಟವರ ಮಾರಿ
ಎದಿಂಮುತ್ತರ ಬೆಳ್ಳಗಿ ಕಳಸು
ಪಿಚ್ಚ್ಯಾಂಗ ಮರೆದಾವ.
ಹದಕ್ಕ ಹದಕಾಗಿ ಬಂದು
ಮಳಿಗೆ ನೆನೆನೆನೆದು ನೆನಸಿ
ಬರುವ ಸುಗ್ಗಿಯ ಚಿತ್ರ
ಅವರ ಚಿತ್ತ ಬರೆದಾವ.

ಗದ್ದ ಗಲ್ಲದ ಹಂತಿ
ಕೊಳ್ಳೀಗಿ ಹವಳದ ಹಾರ
ಇಳ್ಳಿಗ ಬಿಸಲಿನ ನಡುವೆ
ತೊಳ್ದಳು ಎದ್ದಾವ.
ಸಿಂಗಾರಿಲ್ಲದ ಸೊಬಗು
ಸೊಗಸು, ಜೀವಕ್ಕೆ ಮುದ್ದು;
ಸೋತ ದಾರಿಗರ ಕಣ್ಣು
ಮನಸು ಕದ್ದಾವ.
ಬಿತ್ತರಿ-ಜೋಳದ ತೆನೆಯು
ಎರಡು ಬದಿಗೆ ಸುರಿದು
ಹಿಂವರ ಮುಖದೆದ ಮುಖಕ್ಕೆ
ಬಿತ್ತರ ಹಿಡಿದಾವ.
ಹಗಲು ಮುಳ್ಳದಕೆ ಕಳ್ದು
ಇರುಳು ವಸತಿಗಂತೆ
ಬೆಳ್ಳಕ್ಕಿ ತೋರಣಾಗಿ
ಬೆಳ್ವಲಕ್ಕೆ ನಡೆದಾವ.

ಬಂದುಳು ಗುಡಿಸಲದ ಜೀವ
ಕಾಡು-ಗೂಡಿನ ಹಕ್ಕಿ
ತಮ್ಮ ಸುಂಜೋರಿ ಮಾಡಿ
ಸೋಬಾನೆ ಹೇಳ್ಯಾವ.
ಮುಸ್ಸಂಜೆ ಮುಗಿದಾಗ
ಗೀಗೀ ಸ್ವಾರಿಂದು ದನಿಂದು
ತೇಲಿ ಬರುವಂತೆ ನಾಡು
ಕಿವಿಯಾಗಿ ಕೇಳ್ಯಾವ.

ಹುಬ್ಬಳ್ಳಿಯಾಂವಾ.

ಸಿ. ಅಶ್ವತ್ಥ — ಬೇಂದ್ರೆ

ಇನ್ನು ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ
ವಾರದಾಗ ಮೂರು ಸರತಿ ಬಂದು ಹೋದಾಂವಾ ||ಪಲ್ಲವಿ.

ಭಾಳ ಜರದ ವಾಲಿರುಮಾಲಾ ಸುತ್ತಿಕೊಂಡಾಂವಾ
ತುಂಬು ಮೀಸಿ ತಿರುವಿಕೋತ ಹುಬ್ಬು ಹಾರಿಸ್ಯಾಂವಾ
ಮಾತುಮಾತಿಗೆ ನಕ್ಕ ನಗಿಸಿ ಆಡಿಸ್ಯಾಂವಾ
ಏನೋ ಅಂದರ ಏನೋ ಕಟ್ಟಿ ಹಾಡ ಹಾಡ್ಯಾಂವಾ
ಇನ್ನು ಯಾಕ...

ತಾಳಿಮಣಿಗೆ ಬ್ಯಾಳಿಮಣಿ ನನಗೆ ಬೇಕೆಂದಾಂವಾ
ಬಂಗಾರ-ಹುಡಿಲೇ ಭಂಡಾರಾನ ಚೆಲ್ಲಸೇನಂದಾಂವಾ
ಕಸರಬೇಲಿ ಹಾಸಿದು ಬಸವೇಲಿ ಬಿಟ್ಟು ದಾಟಿ ಬಂದಾಂವಾ
ಜೋಗತೇರಿಗೆ ಮೂಗುತಿ ಅಂತ ನನ್ಯಗ ಅಂದಾಂವಾ
ಇನ್ನು ಯಾಕ...

ಇರು ಅಂದರ ಬರತೇನಂತ ಎದ್ದು ಹೊರಟಾಂವಾ
ಮಾರೀ ತೆಳಗ ಮಾಡಿತೆಂದರೆ ಇದ್ದು ಬಿಡಾಂವಾ
ಹಿಡೀ ಹಿಡೀಲೆ ರೊಕ್ಕಾ ತೆಗದು ಹಿಡಿ ಹಿಡಿ ಹಿಸ್ಯಾಂವಾ
ಬರೇ ಅಂತ ಕೈ ಮಾಡಿದರ ಹಿಡ್ಯಾದ ಬಿಡಾಂವಾ
ಇನ್ನು ಯಾಕ...

ಚಿನ್ನದಾಸ ಜೋಡಿ ಚಿನ್ನದಾಸ್ಯಾಂಗ ನೀ ನನಗಂದಾಂವ
ಚೆಲುವಿಯಂಯಲ್ಲ ನೀ ಚಿನ್ನದಾಮಣಿಯಂತೆ ರತ್ನಕ್ಕೆ ಬಂದಾಂವ
ಬೆರಳಿಗುಂಗರಾ ಮೂಗಿನಾಗ ಮೂಗುಬಟ್ಟು ಇಟ್ಟಾಂವಾ
ಕಾಲ್ಗೆ ನಾಗಿನ ಗೊಂಬೆ ಹಾಂಗ ಎದ್ಯಾಗ ನಿಟ್ಟಾಂವಾ
ಇನ್ನು ಯಾಕೆ...

ಹೂವ್ವಾ ಒಯ್ದಾಂವಾ ನನಗೆ ತಾನ್ಯಾಗಿ ಮುಡಿಸಿ ಕೊಂಡಾಂವಾ
ಕಂಡ ಕೆನ್ನೀಗೆ ತುಟಿ ಒತ್ತಿ ಮುದ್ದಿಸಿ ಕೊಂಡಾಂವಾ
ಜಲ್ಲ ಜಲ್ಲಕ ಗೆಜ್ಜಿ ಕಟ್ಟಿ ಬಳೆತೊಡಿಸಂದಾಂವಾ
ಎದಿಮ್ಯಾಗಿನ ಗೆಣತಿನ ಸುದ್ದಿ ಇಟ್ಟ ಕೊಂಡಾಂವಾ
ಇನ್ನು ಯಾಕೆ...

ಯಲ್ಲಿ! ಮಲ್ಲಿ! ಪಾರೀ! ತಾರೀ! ನೋಡಿದೇನ್ರವ್ವಾ?
ಸಿಂಗಿ! ರಂಗಿ! ಶಾಂತೀ! ಎಲ್ಲಾನ ನನ್ನಾಂವಾ?
ಹೆಚ್ಚರ ಹುಡುಗ ನೆನಗೊಂಡ್ಹೋದಾ ಅಂತ ನನ್ನ ಜೀವಾ
ಹಾದಿ ಬೀದಿ ಹುಡುಕತೈತ್ರಿ ಬಿಟ್ಟ ಎಲ್ಲಾ ಕಾಮ್ಯಾಂವಾ
ಇನ್ನು ಯಾಕೆ...

ಪ್ರಶ್ನೆಗೆ ಉತ್ತರ

ಮೈಸೂರುಮಲ್ಲಿಗೆ? ಕೆ.ಎಸ್.ನ.

ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು —
ನಮ್ಮೂರು ಹೊನ್ನೂರೊ, ನಿಮ್ಮೂರು ನವಿಲೂರೊ
ಚೆಂದ ನಿನಗಾವುದೆಂದು.
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ?
ನಮ್ಮೂರ ಮಂಚಕದಲಿ ನಿಮ್ಮೂರ ಕನಸಿದನು
ವಿಸ್ತರಿಸಿ ಹೇಳಬೇಕೆ? —
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ? — ಎನ್ನರಸ,
ಸುಮ್ಮನಿರಿ ಎಂದಳಾಕೆ.

ತೌರೂರ ದಾರಿಯಲಿ ತೆಂಗುಗಳು ತಲೆಬಾಗಿ
ಬಾಳೆಗಳು ತೋಳ ಬೀಸಿ;
ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ಹಬ್ಬಿ
ಬಳುಕುತಿರೆ ಕಂಪು ಸೂಸಿ;
ನಗುನಗುತ ನಮ್ಮೂರ ಹೆಣ್ಣುಗಳು ಬರುತಿರಲು
ನಿಮ್ಮೂರ ಸಂತೆಗಾಗಿ,

ನಮ್ಮೂರಿಗಿಂತಲೂ ಹೊನ್ನೂರೆ ಸುಖವೆಂದು
ನಿಲ್ಲಿಸಿತು ಪ್ರೇಮ ಕೂಗಿ. —
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ
ಎಂದೆನ್ನ ಕೇಳಬೇಕೆ? — ಎನ್ನರಸ,
ಸುಮ್ಮನಿರಿ ಎಂದಳಾಕೆ.

ನಿಮ್ಮೂರ ಬಂಡಿಂತಲಿ ನಮ್ಮೂರ ಬಿಸಿಲ್ನಾಗ
ಓಡಿದುದು ನಾರಿ ಬೇಗ ;
ಪುಟ್ಟ ಕಂದನ ಕೇಕೆ ತೊಟ್ಟಿಲನು ತುಂಬಿತ್ತು —
ನಿಮ್ಮೂರ ಸೇರಿದಾಗ.
ಊರ ಬೇಲಿಗೆ ಬಂದು, ನೀವು ನಮ್ಮನು ಕಂಡು
ಕುಶಲವನು ಕೇಳ್ದಾಗ,
ತುಟಿಯಿಂದಲೇನೋ ನಿಂದು, ಕಣ್ಣಲೇನೋ ಬಂದು
ಕೆನ್ನೆ ಕೆಂಪಾದುದಾಗ.
ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಬೇಕೆ? — ಎನ್ನರಸ,
ಸುಮ್ಮನಿರಿ ಎಂದಳಾಕೆ.

—

ನೀ ಬರುವ ದಾರಿಯಲಿ

ಕೆ.ಎಸ್.ನ.

ನೀ ಬರುವ ದಾರಿಯಲಿ
ಹಗಲು ತಂಪಾಗಿ
ಬೇಲಿಗಳ ಸಾಲಿನಲಿ
ಹಸಿರು ಕೆಂಪಾಗಿ
ಮಂಜಿನಾ ಮುಗಿಯುವ ತನಕ
ಎಳೆಬಿಸಿಲ ಮುಗಿಲ ಕನಕ
ಸಾಲು ಮರಗಳ ಮೇಲೆ ಹೊಂಬಗ ಸುರಿದಿರಲಿ!
ನೀ ಬರುವ ದಾರಿಯಲಿ
ಹಕ್ಕಿಗಳು ಹಾಡಿ
ಬೆಳ್ದಿಂಗಳಿಂದಿನಲಿ
ತಾರೆಗಳು ಮೂಡಿ
ಕನಸು ಹಬ್ಬಲಿ ನಿನ್ನ
ಕಣ್ಣ ಬಳಿ, ಚಿನ್ನ,
ಹತ್ತಾರು ಗಳಿಗೆಯಲಿ ಹಾಡಿ ಹಾರಿರಲಿ!
ನೀ ಬರುವ ದಾರಿಯಲಿ
ಬನದೆಲರು ಸುಳಿದು
ಸಂತಸದ ಇರುಳಿನಲಿ
ಆದುದನು ನುಡಿದು
ಮುಂದೆ ಕಾದಿಹ ನೂರು
ಹರುಷಗಳ ಕಣ್ ತೆರೆದು
ಮಂಜುನಾವ್ರೋ ನಾಲುಗಡೆಯೂ ನೀನರಿಯದಂತಿರ

ನಿನ್ನೊಲುಮೆ.

"ಇರುವಂತಿಗೆ." ಕೆ. ಎಸ್. ನ.

ನಿನ್ನೊಲುಮೆಯಿಂದಲೇ ಬಾಳು ಬೆಳಕಾಗಿರಲು
ಚಂದ್ರಮುಖಿ ನೀನೆನಲು ತಪ್ಪೇನೆ?
ನಿನ್ನ ಸೌಜನ್ಯವೇ ದಾರಿ ನೆರಳಾಗಿರಲು
ನಿತ್ಯಸುಖಿ ನೀನೆನಲು ಒಪ್ಪೇನೆ?

ನಿನ್ನ ನಗೆಮಲ್ಲಿಗೆಯು ಹಂಬಲದ ಪಾತ್ರೆಯಲಿ
ಚೆಲ್ಲಿಸೂಸುವ ಅಮೃತ ನೀನೇನೆ!
ನನ್ನ ಕನಸುಗಳೆಲ್ಲ ಕೈಗೊಳುವ ಯಾತ್ರೆಯಲಿ
ಸಿದ್ಧಿಸುವ ಧನ್ಯತೆಯು ನೀನೇನೆ!

ನಿನ್ನ ಕಿರುನಗೆಯಿಂದ, ನಗೆಯಿಂದ, ನುಡಿಯಿಂದ
ಚಿತ್ತಾರದ ಮನೆ ನನ್ನ ಬದುಕೇನೆ!
ಚಂದ್ರನಲಿ ಚಿತ್ರಿಸಿದ ಚೆಲುವಿನೊಳಗುಡಿಯಿಂದ
ಗಂಗೆ ಬಂದಳು ಇದ್ದ ಕಡೆಗೇನೆ!

ಶ್ರೀಕೃಷ್ಣನಂತೊಂದು ಮುಗಿಲು.

೨ ರೂಪಂತಿಗೆ

ಕೆ.ಎಸ್.ನ.

ಶ್ರೀಕೃಷ್ಣನಂತೊಂದು ಮುಗಿಲು
ರಾಧೆಯಂತಿನ್ನೊಂದು ಮುಗಿಲು
ಹೊಳೆದಾರಿ ಕಾಯುವ ಮುಗಿಲು
ಜರತಾರಿ ಸೆರಗಿನ ಮುಗಿಲು.
ಬೆಣ್ಣೆಯ ಗಿರಿಯಂತೆ ಮುಗಿಲು ಅಲ್ಲಿ
ಬಳುಕುವ ಯಮುನೆಯ ಮುಗಿಲು
ಗೋಪಿಯರ ತಂಡದ ಮುಗಿಲು ಬಳಿ
ಹರಿಗೋಲು ಕೃಷ್ಣೆಯ ಹೊನಲು.
ಬಳ್ಳಿಯ ಮನೆಯಂತೆ ಮುಗಿಲು ಅಲ್ಲಿ
ಹಳ್ಳಿಯ ಹಾಡಿನ ಹುಯಿಲು
ಹೆಣ್ಣಿಗೆ ಎಷ್ಟೊಂದು ದಿಗಿಲು ಇಲ್ಲಿ
ಕೆನ್ನೆಗೆ ಹೂವಿನ ನೆಳಲು.
ಕಿರುತಾರೆ ಮುಡಿದೊಂದು ಮುಗಿಲು ತನ್ನ
ಒಡಲುರಿಗೆ ಬೆರಗಾದ ಮುಗಿಲು
ಕೊಳಲನು ತುಟಿಗಿಟ್ಟ ಮುಗಿಲು ನಿನ್ನ
ತುಟಿ ನನ್ನ ಕೊಳಲೆನುವ ಮುಗಿಲು.
ಬಾ ಬಾರೆ ಎನ್ನುವ ಮುಗಿಲು ಅಲ್ಲಿ
ಬರಲಾರೆನೆನ್ನುವ ಮುಗಿಲು

ಕೆನ್ನೆ ಕೆಂಪಾದೊಂದು ಮುಗಿಲು ಎಲ್ಲೋ
ಇನ್ನೊಂದು ಮುತ್ತೆನುವ ಮುಗಿಲು.
ಶ್ರೀಕೃಷ್ಣನಂತೊಂದು ಮುಗಿಲು
ರಾಧೆಯಂತಿನ್ನೊಂದು ಮುಗಿಲು
ಅಲ್ಲೊಂದು ಇಲ್ಲೊಂದು ಮುಗಿಲು
ಮುಗಿಲೆಲ್ಲ ಕೃಷ್ಣನ ಕೊಳಲು.

నగుమోము గలవాని నా మనోహరుని
జగమేలు శూరుని జానకీవరుని ।
దేవాదిదేవుని దివ్యసుందరుని
శ్రీ వాసుదేవుని సీతారాఘవుని ।
నిర్మలాకారుని నిఖిలాఘహరుని
ధర్మాది మోక్షంబు దయచేయు ఘనుని ।
బోధతో పలుమారు పూజించి నేనా-
రాధింతు శ్రీ త్యాగరాజసన్నుతుని ॥

ಕೆ ಎಸ್ ನ.

ಇವಳು ಯಾರು ಬಲ್ಲೆ ಏನು
ಇವಳ ಹೆಸರ ಹೇಳಲೇನು
ಇವಳ ದನಿಗೆ ತಿರುಗಲೇನು
ಇವಳು ಏತಕೋ ಬಂದು ನನ್ನ ಸೇರಿದವಳು.

ಅಡಿಯ ಮುಟ್ಟ ನೀಳ್ದ ಜಡೆ
ಮುಡಿಯ ತುಂಬ ಹೂವ್ವ ಹೆಡೆ
ಇವಳು ಅಡಿಯನಿಟ್ಟ ಕಡೆ
ಹೆಜ್ಜೆ ಹೆಜ್ಜೆಗೆ ಒಂದು ಮೊಗ್ಗು ಮಲ್ಲಿಗೆ.

ಅಂಗಾಲಿನ ಕುಂಜೆಗೆಂಪು
ಕಾಲಂದುಗೆ ಗೆಜ್ಜೆ ಇಂಪು
ಮೋಹದ ಮಲ್ಲಿಗೆಂತ ಕಂಪು
ಕರೆದುವೆನ್ನನು,..
ನಾನು ಹಿಡಿಯ ಹೋದೆನು.

ಬಂಗಾರದ ಬೆಳಕಿನೊಳಗೆ
ಮುಂಗಾರಿನ ಮಿಂಚು ಮೆರೆಗೆ
ಇಳೆಗಿಳಿದಿಹ ಮೋಡದೊಳಗೆ
ಇವಳು ಮೆರೆಯುತಿದ್ದಳು,
ನನ್ನ ಕರೆಯುತಿದ್ದಳು.

ನೀಲಿ ನಲ್ಲ ಹಿಲ್ಲೆಯು ಉಂಗುರ
ಭೂಮಿ ಮೇಲೆ ಹೂವಿನುಂಗುರ
ಮನ ಸೆಳೆದ ನಲ್ಲ ಕೊಟ್ಟ ನಲ್ಲ
ಕೆನ್ನೆ ಮೇಲೆ ಪ್ರೇಮದುಂಗುರ
ಹಿಂದು ಗೆಯು ಕಾಲನುಂಗುರ
ಇದರ ದನಿ ಎಷ್ಟು ಸುಂದರ
ತರುವ ಲತೆಯು ಸೇರಿದ ಕಥೆಯು
ತನುವ ಬಳಸಿ ತೋಳಿನುಂಗುರ
ಮಣ್ಣಿನಲ್ಲಿ ಕಂಡೆ ಉಂಗುರ
ಹೊನ್ನ ನಾಟಿ ಗಿಲಿದುಂಗುರ
ಬೆರಳಿನಿಂದ ತಿರಿದುಂಗುರ
ಕಣ್ಣ ಸೆಳೆವ ಹುರುಳಿನುಂಗುರ
ಇನೆ ನಿನ್ನ ಪ್ರೇಮ ಸಿಂಚರ
ಎನ್ನ ಹೃದಯ ಸ್ಪಂದು ಬಂಧುರ
ನಾನು ಸುಖಿಯ ಕಿವಿಯೊಳ್ಳಿಂಚರ
ದೇಹದ ಮೇಲೆ ಬೆವರಿನುಂಗುರ,

ಉಂಗುರ.

ಕೆ.ಎಸ್.ನ.

ಗಾಳಿ ಆಡಿದರೆ ಬನವೆಲ್ಲ ಆಡಿ
ಹೂವಿನುಂಗುರ ;
ಮಳೆ ಮೂಡಿದರೆ ಕೆರೆಯು ಆಡಿ
ನೀರಲೆಯುಂಗುರ ;
ತಾರೆ ಧುಮುಕಿದರೆ ಬಾನಿನ ಬಾನೆ
ಬೆಳಕಿನುಂಗುರ ;
ಕಣ್ಣು ತುಂಬಿ ಬರೆ ನಿದ್ದೆಯು ಬೆಳಗಿಗೆ
ಕನಸಿನುಂಗುರ ;
ತುಂಬಿದ ಬಟಲಿಗೆ ತಾಂಬೂಲದ ತುಟಿ
ಬೆಂಕಿಯುಂಗುರ ;
ಬಾಳ ಪಾತಾಳದ ಕಲ್ಲ ಕಣ್ಣಿನಲಿ
ಮಣ್ಣಿನುಂಗುರ ;
ಬಿಲ್ಲದ ಹೆಣ್ಣಿನ ಸುಲ್ಲದ ಬಯಕೆಗೆ
ಎಲ್ಲೋ ದೂರದ
ಕನಸು ನೂಡಿಸುವ ಕೊರಗಿನ ಬೆಳ್ಳಿಗೆ
ಆಸೆಯುಂಗುರ.
ಏನೆಯ ಕತ್ತಲೆಯ ಪ್ರೌಢೆಯಲಿ, ಕಮಲಾ,
ವಜ್ರದುಂಗುರ ;
ನಿನ್ನ ಕೆನ್ನೆಯಲಿ ಮೆಲ್ಲಗೆ ನನ್ನ
ಪ್ರೇಮದುಂಗುರ.

ಮದುವೆ

ನಿಸಾರ್

ಇಂದು ಗೆಳೆಯನ ಮದುವೆ;
ಹೊಸ ನೀರಿಗಿಳಿಯುವುದು ಅವನ ನಾವೆ.
ಉತ್ತರೀಯಕೆ ಇಂದು ಸೀರೆ ನೆರಿಗೆಯ ಗಂಟು;
ಹಸುರಾಗಿ ಹಬ್ಬುವುದು ಹೊಸತು ನಂಟು.
ಕಣ್ಣು ಆಸೆಯ ಬಯಕೆ, ಬಳಗೆ ಕಿಲಕಿಲ ಸೇಸೆ
ಹಸೆಗೇರಿದಿಬ್ಬರಿಗೆ ಒಲವು ಗಂಟು.
ಗರತಿಯರ ಆರೈಕೆ, ಗುರುಜನದ ಹಾರೈಕೆ
ಬೆಳದಿಂಗಳಿನ ನೆರಳು ಆ ಬಕೆ ಬಿಸಿಲು.
ಹೆಣ್ಣ ತಾಯಿಯ ಕಣ್ಣು ಹನಿಯುವುದು ನೀರಲ್ಲ,
ಪನ್ನೀರು; ಉಪ್ಪಲ್ಲ, ಸವಿಯ ಹಾಲು.
ಲಾಭವೆಲ್ಲರಿಗಿಂದು: ಭಾರವಿಳಿಸಿದ ಹಗುರ
ಮನಸು ಹೆಣ್ಣನು ಹೆತ್ತು ಹೊತ್ತವರಿಗೆ.
ಗಂಡಿಗೋ ಈ ಹೆಣ್ಣು ಮುಳುಗುವವನಿಗೆ ಬೆಂಡು;
ನೆಮ್ಮದಿಯ ಗುಡಿ ಹೆಣ್ಣು ಕಣ್ಕೋನೊಳಗೆ.
ತವರೂರ ಬೀಡಿಕ್ಕೆ ಬೆಳಕು ಬಿತ್ತಿದ ಹಬ್ಬ
ನನ್ನ ಗೆಳೆಯನ ತಾಯಿ ತಂದೆಯರಿಗೆ.
ನಂಟರಿಷ್ಟರಿಗೇಕೆ ನನ್ನಂಥ ಮಿತ್ರರಿಗು
ಲಾಭ: ಬಿಸಿ ಬಿಸಿಯಾಗಿ ಕಾದ ಅಡುಗೆ.

═

ಪುಟ 150 ಕ್ಕೆ

ಗೃಹಲಕ್ಷ್ಮಿ

ಮೈಸೂರ ಮಲ್ಲಿಗೆ. ಕೆ.ಎಸ್.ನ.

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುತಿನ್ನೆಯ ಚೆನ್ನೆ ನನ್ನ ಮಡದಿ ;
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ.

ಕರೆದಾಗ ತೌರುಮನೆ - ನೆನೆದಾಗ ನನ್ನ ಮನೆ -
ಹಳ್ಳಿಯೆರಡರ ಮುದ್ದು ಬಳ್ಳಿಯಿವಳು.
ಮುಚ್ಚುಮರೆಯಿಲ್ಲದೆಯೆ ಬಿಚ್ಚುಮಲ್ಲಿಗೆಯಂತೆ
ಅರಳುತಿರುವವಳ ಬದುಕು.
ಬಂಗಾರದೊಡವೆಗಳ ಬಯಕೆಯಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಲವೆ, ನನ್ನ ಬೆಡಗಿ.

ಹಸುರು ಸೀರೆಯನುಟ್ಟು, ಕೆಂಪು ಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ ;

ಹಣೆಯ ನಾಲ್ಕು ಪದವಳ ಕುಂಕುಮದ ನಿಡುಬೊಟ್ಟು
ಲಕ್ಷ್ಮಿಯವಳೆನ್ನ ಮನೆಗೆ.
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ;
ನಾವು ಗಂಧರ್ವರಂತೆ.

ತೆಂಗುಗರಿಗಳ ಮೇಲೆ ತುಂಬುಚಂದಿರ ಬಂದು
ಬೆಳ್ಳಿ ಹಸುಗಳ ಹಾಲು ಕರೆಯುವಂದು
ಅಂಗಳದ ನಡುವೆ ಬೃಂದಾವನದ ಬಳಿ ನಿಂದು
ಹಾಡುವೆವು ಸಿರಿಯ ಕಂಡು.
ತಾರೆಗಳ ಎಣಿಸುವೆವು, ಚಂದಿರನ ದಾಟುವೆವು
ಒಲುಮೆಯೊಳಗೊಂಡು ನಾವು;
ನಮಗಿಲ್ಲ ನೋವು, ಸಾವು.

ಬಾರೆ, ನನ್ನ ಶಾರದೆ!

ಮೈಸೂರು ಮಲ್ಲಿಗೆ. ಕೆ. ಎಸ್. ನ.

ಮದುವೆಯಾಗಿ ತಿಂಗಳಿಲ್ಲ,
ನೋಡಿರಣ್ಣ ಹೇಗಿದೆ!
ನಾನು ಕೂಗಿದಾಗಲೆಲ್ಲ
ಬರುವಳೆನ್ನ ಶಾರದೆ!
ಹಿಂದೆ ಮುಂದೆ ನೋಡದೆ,
ಎದುರು ಮಾತನಾಡದೆ.
ಕೋಣೆಯೊಳಗೆ ಬಳೆಯ ಸದ್ದು!
ನಗುವರತ್ತೆ ಬಿದ್ದು, ಬಿದ್ದು!
ಸುಮ್ಮನಿರಲು ಮಾವನವರು,
'ಬಳಿಗೆ ಅಕ್ಕ, ಭಾವನವರು'
ಎಂದು ತುಂಟ ಮೈದುನನು,
ಗುಟ್ಟು ಬಯಲಿಗೆಳೆವನು!
ಒಂದು ಹೆಜ್ಜೆಗೊಂದು ಗಂಟು
ಹೇಗೊ ಸೇರಿ ಹೊಂದಿಕೊಂಡು,
ಕಾಣದೊಂದು ಕನಸು ಕಂಡು,
ಮಾತಿಗೊಲಿಯದಮೃತವುಂಡು,
ದುಃಖ ಹಗುರವೆನುತಿರೆ,
ಪ್ರೇಮವೆನಲು ಹಾಸ್ಯವೆ?

ಯಾರು ಕಣ್ಣ ನುಡಿಸಲೇನು ?
ಊರೆ ಎಷ್ಟು ಕುಣಿಸಲೇನು ?
ಜನರ ಜಾಲವಿಲ್ಲ ಬೇಗ
ಹೃದಯದೊಳಗೆ ಪ್ರೇಮರಾಗ
ಇಂಥ ಕೂಗನಳಿಸಿದೆ,
ಬೆಳಗಿ, ಬದುಕ ಹರಸಿದೆ.
ನನ್ನ ಮಾತು ರಾಮಬಾಣ;
ಬಿಡುವೆನಿದೋ, ಮಹಾತ್ರಾಣ!
ಗಂಡನೊಡನೆ ಗಂಡನೊಡವೆ
ಬಾಳ್ವ ಮೊದಲ ಮೋಹದೊಳಗೆ
ಮಗದೆಯೂದಬಾರದೆ,
ನಾನು, ನನ್ನ ಹಾರದೆ ?
ಬದುಕು ನೆಳಲ ಬಿಸಿಲ ದಾರಿ
ಮುತ್ತು ಕಳ್ಳ ಬೆಕ್ಕಿನಂತೆ
ಹೊಂಚುತಿರುವುದು, ಯಾರ ದಾರಿ-
ಗಿಲ್ಲ ಕೊನೆಯೋ! ಇಂದಿನಂತೆ
ನಾಳೆ ಎನ್ನಲಾಗದು,
ಇತ್ತ ನಿಂದು ನಿಲ್ಲದು;
ಮತ್ತೆ ಎಲ್ಲೊ ದೊರಕದು:

ಇಂದೆ ಅದಕೆ ಕರೆವುದು
ನನ್ನ ಹುಡುಗಿ ಎನುವುದು
ಹೂವ ಮುಡಿಸಿ ನಗುವುದು
ಅಪ್ಪಿ ಮುತ್ತನಿಡುವುದು.-
ಬಾರೆ ನನ್ನ ಹಾರದೆ
ಬಾರೆ ಅತ್ತ ನೋಡದೆ!

ತಿಂಗಳಾಯಿತೆ ?

ಮೈಸೂರ ಮಲ್ಲಿಗೆ — ಕೆ. ಎಸ್. ನ.

ಪಯಣಿಸುವ ವೇಳೆಯಲಿ ಬಂದು ಅಡಿಗೆರಗಿ
ಮುಂದೆ ನಿಂದಳು ನನ್ನ ಕೈ ಹಿಡಿದ ಹುಡುಗಿ.
ಇನ್ನೆಂದು ಬರುವಿರೆಂದೆನ್ನ ಕೇಳಿದಳು ;
ಇನ್ನೊಂದು ತಿಂಗಳಿಗೆ ಎಂದು ಹೇಳಿದೆನು.

ಕೆನ್ನೆ ಕೆಂಪಾಗಿರಲು ಸಂಜೆ ಮುಗಿಲಂತೆ
ಕಣ್ಣಿರಲು ತಿಳಿಬಾನ ಕಿರುತಾರೆಯಂತೆ
ಮೆಯ್ಯಿರಲು ವಸಂತ ಪುಷ್ಪವನದಂತೆ
ಮನಸು ಬಾರದು ನನಗೆ ಅಡಿಯನಿಡೆ ಮುಂದೆ.

ಅಲ್ಲಲ್ಲಿ ನಿಂದವಳ ನೋಡುತಡಿಗಡಿಗೆ
ತೆರಳಿದೆನು ವಿರಹದಲಿ ನಿಲ್ದಾಣದೆಡೆಗೆ —
ದಾರಿಯಲಿ ಕಂಡೊಬ್ಬ ಹಣ್ಣು ಮಾರುವನು
ಹೊರಟು ಹೋದುದು ಬಂಡಿ ಎಂದು ಹೇಳಿದನು.

ಹಿಂತಿರುಗಿ ಬಂದೆನ್ನನೆಂದಿನ ಮಾತಿನಲಿ,
'ತಿಂಗಳಾಯಿತೆ?' ಎಂದಳೆನ್ನ ಹೊಸ ಹುಡುಗಿ !

ನಕ್ಕು ನಗಿಸು.

ಮೈಸೂರ ಮಲ್ಲಿಗೆ. ಕೆ. ಎಸ್. ನ.

ಒಮ್ಮೆ ನಕ್ಕು ನನ್ನ ನಗಿಸು
ಬಿಮ್ಮನುತಿಹುದೆನ್ನ ಮನಸು,
ಮುನ್ನಿಲ್ಲದ ಚಿನ್ನಗನಸು
ನಿನ್ನ ತಾನೆ ಕೈಗೂಡಿತು.
ತಣ್ಣನೆ ಕಡಲಂತೆ ನಗು,
ಬಣ್ಣದ ಮುಗಿಲಂತೆ ನಗು,
ಹುಣ್ಣಿಮೆಯಿರುಳಂತೆ ನಗು;
ನನ್ನೊಲುಮೆಯ ಹೆಣ್ಣೆ ನಗು
ಅತ್ತು ಸುತ್ತುಹೋದ ಬದುಕ-
ನೆತ್ತಿ ತುಂಬಿ ಜೀವಕಳೆಯ
ಮುತ್ತನಿಟ್ಟು ಕೆಮ್ಮೆಯುತ್ತಿ
ಕಣ್ಣನೊಳಗೆ ದೀಪ ಹಚ್ಚಿ,
ಎದೆಯ ಹೊರೆಯನಿಳಿಸಿ, ಮೇಲೆ
ಬರುವ ನಗುವ ಬದುಕ ಚೆಲೆ.
ನಕ್ಕ[illegible] ನಗಬಲ್ಲದಿಲ್ಲೆ.
ಕೆನ್ನೆ ಕೆನ್ನೆಯೊಂದು ಮಾಡಿ
ನಗುವ ನನ್ನ ನಿನ್ನ ನೋಡಿ

ಕನ್ನಡಿಯಲಿ ಬಂದು ಹೋಲಿವೆ
ನಕ್ಕು ಬಿಡಲಿ, ಬಿಕ್ಕಿ ನಗು.
ನಕ್ಕುಬಿಡು. ಬಿಕ್ಕಿ ಮುತ್ತು
ಸುರಿದು ಹೋಗಲಿ ;
ಮಕ್ಕಳಂತೆ ನಕ್ಕುಬಿಡು ,
ಚಿಂತೆ ತೊಲಗಲಿ.

ಕೋಗಿಲೆ!

ಬೆಂಗಳೂರ. ಕೆ.ಎಸ್.ನ.

ತುಂಬು ತಿಂಗಳಿನ ಮಲ್ಲಿಗೆ ದುಂಬಿನ
ನಂಬದ ಬೆಳ್ಳಕ್ಕಿನ ನೆರಳಿನಲಿ,
ತುಂಬಿ ತುಂಬಿ ಬಹ ನಾಡಿನ ಹಾಡಿನ
ತುಂಬಹಾಸೆಗಳ ಕೊರಳಿನಲಿ —
ಅಕ್ಕ ಓ ಕೋಗಿಲೆ !
ಚಿಕ್ಕ ಹೂ ಕೋಗಿಲೆ.
ಮರದ ಮೇಲೆ ತೂಗಾಡುವ ಹಾಡಿಗೆ
ಹೆಸರು ಬಂದಿತೆ ಕೋಗಿಲೆ ?
ಸೊಕ್ಕಿ ಬರುವ ಸುಮ್ಮನದ ಕೂಗಿಗೆ
ಸುಖದ ಲೋಕ ಹೆಬ್ಬಾಗಿಲೆ
ತೆರೆಸುವೆ, ಈಗಲೇ ?
— ಹಾಡದೇ ಕೋಗಿಲೆ !
ಅಲ್ಲಿ ಇರು ನೀನಿಲ್ಲಿ ಇರು ನೀ
ನೆಲ್ಲಿ ಇರು ನೀ ಬರಿಂತು ದನಿ !
ಎಲ್ಲಾ ನಾದದ ತುಷಾರ ವಾಹಿನಿ ;
ಎತ್ತರದುತ್ತರ ನಿನ್ನ ದನಿ !
— ಬಾನ ಹೂ ಕೋಗಿಲೆ ;
ಮುಗಿಲ ಮುತ್ತಾಗಲೆ !

ಹೂವು ಇಲ್ಲದ ಎಲೆಯೂ ಇಲ್ಲದ
ಬನದ ಹುಲ್ಲು ಈ ಕೋಗಿಲೆ!
ಎದೆಯ ಗಾಯದಲಿ ಮೆಲ್ಲಗೆ ಸುಳಿಯುವ
ದನಿಯ ನೀಡಿಲೆ ಕೋಗಿಲೆ?
— ಹಾಡಿತೆ, ಕೋಗಿಲೆ?
ಇಲ್ಲವೆ, ಹಸುಕಲೆ.

ಒಂದು ಸಂಜೆ.

[illegible] ೬೩೯.

ವಿತಾನ ತಬ್ಬಿತು ನೆಲವ; ಜುಮ್ಮೆನೆ ಪುಳಕಗೊಂಡಿತು ಧಾರಿಣಿ; ನೋಡಿ ನಾಚಿತು ಬಾನು; ಸೇರಿತು ಕೆಂಪು ಸಂಜೆಯ ಕದಪಲಿ. ಹಕ್ಕಿಗೊರಲಿನ ಸುರತಗಾನಕೆ ಬನಿಯು ನಸುವೇ ಸಡಿಲಿತು; ಚಿಕ್ಕ ಚಿಕ್ಕ ನೆಯ್ದಿನ ಸಂದಿ ಗಾಳಿ ಮೆಲ್ಲನೆ ತೆವಳಿತು.

ಇರುಳ ಸೆರಗಿನ ನೆಳಲು ಚಾಚಿತು, ಬಾನು ತೆರೆಯಿತು ಕಣ್ಣನ ನೆಲವು ತಣಿಯಿತು, ಚಿವರು ಕುಣಿಯಿತು; ಬಾಷ್ಪ ನನೆಸಿತು ಹುಲ್ಲನು ವಿತಾನ ಬಿರುಕಿತು, ಹೊರಳಿತೆದ್ದಿತು; ಗಾಳಿ ನೋಟನೆ ಬೀಸಿತು, [illegible] ಚಾಮರಕೆ ಹಾಯೆಂದು ವಿತಾನವು ಮಲಗಿತು.

ಮೋಹನ ಮುರಲಿ.

ಗೋಪಾಲಕೃಷ್ಣ ಅಡಿಗ.

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು?

ಹೂವು ಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ;
ಬಯಕೆ ತೋಟದ ಬೇಲಿಯೊಳಗೆ ಕರಣಗಣದೀ ರಿಂಗಣ;
ಒಲಿದ ಮಿದುವೆದೆ, ರಕ್ತಮಾಂಸದ ಬಿಗಿದುಮೊಂಕಿನ ಪಂಜರ;
ಇಷ್ಟೆ ಸಾಕೆಂದಿದ್ದೆಯಲ್ಲೋ! ಇಂದು ಏನಿದು ಬೇಸರ?
ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ?
ಯಾವ ಸುಮಧುರ ಯಾತನೆ? ಯಾವ ದಿವ್ಯದ ಯಾಚನೆ?
ಮರದೊಳಡಗಿದ ಬೆಂಕಿಯಂತೆ ಎಲ್ಲೋ ಮಲಗಿದೆ ಬೇಸರ;
ಏನೋ ತೀಡಲು ಏನೋ ತಾಗಲು ಹೊತ್ತಿ ಉರಿವುದು ಕಾತರ!
ಸಪ್ತಸಾಗರದಾಚೆಯೆಲ್ಲೋ ಸುಪ್ತ ಸಾಗರ ಕಾದಿದೆ,
ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗು ಹಾಯಿತೆ?
ವಿವಶವಾಯಿತು ಪ್ರಾಣ; ಹಾ! ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?

ಯಾವ ಮೋಹನ ಮುರಲಿ ಕರೆಯಿತು ಇದ್ದಕಿದ್ದಲೆ ನಿನ್ನನು?
ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು?

ಇದು ಬಾಳು!

ಅಡಿಗ.

ಅಳುವ ಕಡಲೊಳೂ ತೇಲಿ ಬರುತಲಿದೆ ನಗೆಯ ಹಾಯಿದೋಣಿ
ಬಾಳ ಗಂಗೆಯ ಮಹಾಪೂರದೊಳೂ ಸಾವಿನೊಂದು ವೇಣಿ
ನೆರೆತಿದೆ, ಬೆರೆತಿದೆ, ಕುಣಿವ ಮೊರೆವ ತೆರೆತೆರೆಗಳೊಳ್ಳಿಯುಳ್ಳ
ಜನನ ಮರಣಗಳ ಉಬ್ಬುತಗ್ಗು ಹೊರಳುರುಳು ವಾಹವಲ್ಲಿ!

ಆಶೆ ಬೂದಿ ತಳದಲ್ಲು ಕೆರಳುತಿವೆ ಕಿಡಿಗಳಲ್ಲಿ ನಿತ್ತೋ ಮರಳಿ,
ಮುರಿದು ಬಿದ್ದ ಮನಮರದ ಕೊರಡೊಳೂ ಹೂವು ಹೂವು ಅರ
ಕೂಡಲಾರದೆದೆಯಾಳದಲ್ಲು ಕಂಡೀತು ಏಕಸೂತ್ರ;
ಕಂಡುದುಂಡು ಬೆಸೆದೆದೆಗಳಲ್ಲು ಭಿನ್ನತೆಯ ವಿಕಟ ಹಾಸ್ಯ

ಎತ್ತರೆತ್ತರಕೆ ಏರುವ ಮನಕೂ ಕೆಸರ ಲೇಪ, ಲೇಪ;
ಕೊಳೆಯ ಕೊಳಕೆಯಲಿ ಮಲಗಿ ಕಂಡನೋ ಬಾನಿನೊಂದು ಪಂ
ತುಂಬುಗತ್ತಲಿನ ಬಸಿರನಾಳುತಿದೆ ಬೆಂದು ಅಗ್ನಿ ಪಿಂಡ;
ತಮದಗಾಧ ಘನದಲ್ಲು ಹೊಳೆಯುತಿದೆ ನಕ್ಷತ್ರವೊಂದು ಬಿಂ
ಇದನರಿತೆನೆಂದೆ; ಆ ಅಮೃತ ಕಿರಣವನೆ ನುಂಗಿತೊಂದು ಮೇ
ಆ ಮುಗಿಲ ಬಸಿರನೇ ಬಗೆದು ಬಂತು ನವಕಿರಣವೊಂದು ಮೋಕ್ಷ
ಇಂದಿನ ಹೊನ್ನೆ ಮಣ್ಣಹುದು! ಮಣ್ಣೊಳಗೆ ಹೊಳೆದುದುಂಟು ಹೊ
ಇದು ಬೀಜ ಎಂಬ ನಂಬುಗೆಯ ಊರೆಗೋಲಲ್ಲಿ ಇನ್ನು, ಮುನ

ಆ ಕೆಂಪು ತಳವನ್ನೊಡೆದ ದೋಣಿಯಿಂದಲಿ ದೂರತೀರದಿಂದಾನ
ಯಾರ ಆಲಿಸಿಗೋ ಯಾರೋ ಮನೆಯ ಗುಂಡಲಿರದೆ ಬಿಟ್ಟ ಬಾಣ
ಇದು ಬಾಳ್ಗು ನೋವು; ಇದ ತಿಳಿದೆನೆಂದರೂ ತಿಳಿದ ಧೀರನಿಲ್ಲ,
ಹಲವು ಜನದ ಮುಮುಕ್ಷು ಮಾಡಿದವು; ನಿಜವ ತೋರದಲ್ಲ
ಬೆಂಗಾಡು ನೋವು ಇದು; ಕಾಂಬ ಬಯಲು ದೊರೆಗಿಲ್ಲ ಆದಿ-ಅಂತ
ಅದ ಹುಡಿದೆನೆಂದ ಹಲವುಂಟು; ತಾಕಿದೆನೆಂದವರ ಕಾಣೆನಯ್ಯ.
ಅರಿವೆಲ್ಲದಿನಲ್ಲಿ ಬಾಳಲ್ಲಿ ಹುಟ್ಟಿ ನಾವೇಕೋ ಮಲೆತು, ಮರೆದು
ಕೊನೆಗೆ ಕರಗುವೆವು ಮರಣಾತೀರಕ್ಷನ ತಿಮಿರದಲ್ಲಿ ಬೆರೆತು.

ಎಂಥ ಕಣ್ಣು

ಅಡಿಗ.

ಎಂಥ ಕಣ್ಣು, ಎಂಥ ಕಣ್ಣು,
ಎಂಥ ಕಣ್ಣು ನಿನ್ನದೆ!
ಅದರ ಹೊಳಪಿನೆಳೆಗಳಲ್ಲಿ
ಜೋಲುತಿಹುದು ನನ್ನದೆ,
ಅದರ ಕಳ್ಳಿಂಪು ಕಡಲಿನಲ್ಲಿ
ತೇಲುತಿಹುದು ನನ್ನದೆ.

ಇರುಳ ಘನಪ್ಪ ತೆಂಪೊಳ್ಪು ತೊಳಗು-
ವೆರಸು ನೀಲಮುಗಿಲಗಳ್ಗೆ,
ಕಮಲಗರ್ಭದಿಂದಲಾಗು ಕು-
ತಿರುವ ತುಂಬಿ ಮರಿಗಳ್ಗೆ,
ಬಿಸಿಲ ಕದಿರದಿಂದ ಬಂದ
ಅಮೃತದೆರದ ಹನಿಗಳ್ಗೆ,
ಬಿಲಬಿನೊಳಗು ನುಡಿಗಳೆನಿತೊ
ತಳೆದ ಹೊನ್ನ ಗರಿಗಳ್ಗೆ?

ಎಂಥ ಕಣ್ಣು, ಎಂಥ ಕಣ್ಣು,
ಎಂಥ ಕಣ್ಣು ನಿನ್ನದೆ!
ಅದರ ನೆನಪುನಾಡಿನಲ್ಲಿ
ತಿರುಗುತಿಹುದು ನನ್ನದೆ!

ಬಾರೊ ಸಾಧನಕೇರಿಗೆ

ರಂಗಾವ.ಶರಣ

ಬೇ

ಬಾರೊ ಸಾಧನಕೇರಿಗೆ ।
ಮರಳಿ ನಿನ್ನೀ ಊರಿಗೆ ॥

ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಚಾಚಿದೆ ದಾರಿಗೆ
ಹಸಿರು ಹೇರಿದೆ ಊರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ ?
॥ ಬಾರೋ...

ಮಲೆಯ ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಜೇನುಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿ ತಾಯಿಯ ಒಡಮುರಿದು ಎದ್ದಳೊ
ಶ್ರಾವಣದ ಸಿರಿ ಬರಲಿದೆ
॥ ಬಾರೋ...

ಮೋಡಗಳ ನೆರಳಾಟವು
ಅರಳಿ ಹೂಗಳ ಕೂಟವು
ಕೋಟಿ ಜೇನ್ನೊಣ ಕೂಟವು
ಯುಕ್ತಿ ಮಾಡಿದ ಮಾಟವು
ನೋಡು ಬಾ ಸುಂದರಾಂಗಿ ಪಾತರ-
ಗಿತ್ತಿ ಕುಣಿಯುವ ತೋಟವು
॥ಬಾರೋ...

ಮರವು ಮುಗಿಲಿಗೆ ಏರಿದೆ
ಗಿಡದ ಹೊಂದರೊಳು ಹಾಡಿದೆ
ಗಾಳಿ ಎಲ್ಲೂ ಆಡಿದೆ
ಸುಗುಣ ಇಲ್ಲಿಂದೋಡಿದೆ
ಹೇಳು ಗೆಳೆಯಾ ಬೇರೆ ಎಲ್ಲೀ
ತೆರದ ನೋಟವ ನೋಡಿದೆ ?
॥ಬಾರೋ...

ಒಲೆಯ ಗುಡಾಣ

ಬೇಂದ್ರೆ

ಳು ಚಿನ್ನ, ಬೆಳಗಾಯಿತು ಅಣ್ಣ, ಮೂಡಲಿನವು ತೆರೆಯಿತು ಕಣ್ಣಾ
ಕ್ಷತ್ರ ಜಾರಿ ತಮವೆಲ್ಲ ಸೋರಿ, ಮಿಗಿಲಾದುದು ಬಾನ ಬಣ್ಣ.
ಲೆನ್ನೋದ ಹೆಸರಿಗೆ ಹೂ ಬಾಣ ಹೂಡಿ ಘುಂ ಎಂದು ಬಿಟ್ಟ ಮಾರ
ತಿಹೋಯ್ತು ರಕ್ಕ ಬೆಳೆ ಬೀಸಿ ಬಂದ ಅಗೋ ಬೆಳ್ಳಕ್ಕಿ - ಬೇಟೆಗಾರ.

ಗೆಯಲ್ಲಿದ ಲಿಪಿಯ ಎಲ್ಲ ನಗೆಯ ಬಗೆಗೆ ಸೋಲುತಿರಲು ಜಗವು ಸವಿಗೆ
ಕ್ಕೆದಿರು ಬಿಡು ಕಟ್ಟಿತ್ತು ಕನಸು, ಕೂಗೊಂದು ಬಂತು ಕಿವಿಗೆ:
ದುಕ್ಕುಳಿರ ಕೇಳಿ. ರಸ ಕುಡಿಯಲೆಳ್ಳಿ, ಹುಸಿ ನಿದ್ದೆ ನಿದ್ದೆ ಸಾಕು.
ತುಂಬಿ ಬಾಳ್ಗ ತುಂಬಿರುವ ತನಕ ತುಂತುಂಬಿ ಕುಡಿಯ ಬೇಕು.

ಮಾಡಿಗೆ ಕೋಳಿ ಕೂಗಿದುದು ವಳ್ಳ, ತಡವೇಕೆ ವಾನ ಕೇಳಿ.
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ.
ಜೀವನದ ನದಿಗೆ ಸೆಳೆಬಿದ್ದುದು. ಮರಳಿ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕೆ ಇಲ್ಲ ಮರಳಿ.

ಾನ್ ತೂಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ುಳ್ಳುನಿರಲಿ ಮುಪ್ಪು ಚಿಂತನದಿ ತಾನು ರಕ್ಷಿಯುಕ್ಕೆ ಬೇಕೆ ಜೊತೆ?

ಭಾವ ಗೀತ

ಬೇಂದ್ರೆ

"ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ"
ಮಸೆದ ಗಾಳಿ ಪಕ್ಷ ಪಡೆಯುತಿತ್ತು ಸುರಜ ಪ್ರಾಸಾ
ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸಾ...
ಏನು ಏನು? ಜೇನು ಜೇನು? ಎನೆ ಗುಂಗುಂ ಗಾನಾ
ಓಂಕಾರದ ಶಂಖನಾದ ತುಂತ ತುಂಬಿ ದಾನಾ
ಕವಿಯ ಏಕತಾನ ಕವನದಂತೆ ನಾದಲೀನಾ...
ಒಡಲ ಗೂಡಿನಿಂದ ನೇಯುವಂತೆ ಜೇಡ ಜಾಲಾ
ತನ್ನ ಸ್ವಪ್ನದೊಳಗೆ ಬೆಳೆಯುವಂತೆ ತಾನೆ ಕಾಲಾ
ಬಿಸಿಲಿನಿಂದೆ ಕುಡುಕುವಂತೆ ತನ್ನ ಬಾಳ ಮೇಲಾ...
ತಿರುಗುತಿತ್ತು ತನ್ನ ಸುತ್ತು ಮೂಕಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಮಿಡಿಮಿಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೊಳಗುವೊಲು ಸ್ವತಂತ್ರಾ.
ಎಲ್ಲೆಲ್ಲೂ ಸ್ಫೂರ್ತಿದೇವಿಗಿಷ್ಟ ಧೂಪ ಧೂಮಾ
ಲಹರಿ ಲಹರಿ ತಂಪುಬೆಳ್ಳಿ; ಚಿತ್ರರಂಗ ಭೂಮಾ
ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು, ಪ್ರೇಮಾ...

ವಜ್ರಮುಖವ ಚಾಚಿ ಮುತ್ತುತಿತ್ತು ಹೂವ ರೂಪಾ
ನೀರ ಬೀರಿ ಹಾರುತಿತ್ತು ನೀರಹಾವಾ ಪಾಪಾ
ಅಂತ್ಯ ನೋವೆ! ಆಹಾ ಸಾವೆ! ವಿಫಲ ಸಫಲ ಜೀವಾ…
ಗಾಳಿಯೊಡನೆ ತೇಲಿಯಾಡುತಾಡುತದರ ಭಾವಾ
ದಿಕ್ತಟಗಳ ದಾಂಟುತಿತ್ತು; ಅದರ ಬದಿಗೆ ನೋಟಾ
ನಕ್ಕ ನಗುವ ಚಿಕ್ಕೆಯೊಡನೆ ಬಳ್ಕಿಸುತಿತ್ತು ಕೂಟಾ…
ಂತು ಇಂತು ಪ್ರಾಣತಂತು ಹೆಣೆಯುತಿತ್ತು ಬಾಳಾ
ಲ್ಲಿ ಇಲ್ಲಿ ಚೆಲುವು ನಿಂತು ಹಾಕುತಿತ್ತು ತಾಳಾ
ದೆಂತೆಲ್ಲಗೆ?' ಕೇಳುತಿದ್ದನೀಯನಂತ ಕಾಲಾ …
ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ…

ಮೊಸರಿನ ಹುಡುಗಿ.

ಮೊಸರಿನಂತ ಮನೋಹರ ಅವಳ ಕೂಗು;
'ಮೊಸರು ಬೇಕೆ ಮೊಸರು' ಎಂಬ ದನಿಯು ಬಾಗು!
'ಮೊಸರು ಬೇಡ' ಎಂಬರುಂಟೆ? ಕಲೆ, ಕೇಳು:
ಕೊಳ್ಳ ನುಡಿಗೆ ಮೊಸರು ಕೊಂಡು ಧನ್ಯನಾಗು!

ಮು ಶಾರ್ಕ್ವರ'

— ಕುವೆಂಪು

ಅನಂತ ಪ್ರಣಯ

ಬೇಂದ್ರೆ

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ.
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಜಿಸಿ ನಗೆಯನು ಸೂಸುತಿದೆ.
ಭೂರಂಗಕೆ ಅಭಿಸಾರಕೆ ಕರೆಯುತ
ತಿಂಗಳು ತಿಂಗಳು ನವೆಯುತಿದೆ.
ತುಂಬುತ ತುಳುಕುತ ತೀರುತ ತನ್ನೊಳು
ತಾನೇ ಸವಿಯನು ಸವಿಯುತಿದೆ.
ಭೂವನ ಕುಸುಮಿಸಿ ಪುಲಕಿಸಿ ಮರಳಿಸಿ
ಕೋಟಿ ಕೋಟಿ ಸಲ ಹೊಸೆಯಿಸಿತು.
ಮಿತ್ರನ ಮೈತ್ರಿಯು ಒಸಗೆ ಮಸಗದಿದೆ
ಮರುಕದ ಧಾರೆಯ ಮರೆಯಿಸಿತು.
ಅಕ್ಷಿನಿಮೀಲನ ಮಾಡದೆ ನಕ್ಷ-
ತ್ರದ ಗಣ ಗಗನದಿ ಹಾರದಿದೆ.
ಬಿದಿಗೆಯ ಬಿಂಬಾಧರದಲಿ ಇಂದಿಗು
ಮಿಲನದ ಚಿಹ್ನವು ತೋರದಿದೆ.

ಅಲ್ಲಿ - ಇಲ್ಲಿ.

ಕುಸುಮಗಾನ. ಜಿ. ಎಸ್. ಶಿವರುದ್ರಪ್ಪ

ಉಡುಗಣಾವೇಷ್ಟಿತ
ಚಂದ್ರ ಸುಶೋಭಿತ
ದಿವ್ಯಾಂಬರ ಸಂಚಾರಿ.
ಕಣ್ಣ ನೀಲಿನಲಿ
ಮಣ್ಣ ಧೂಳಿನಲಿ
ಹೊರಳುತ್ತಿರುವರ ಸಹಚಾರಿ !
ಕೋಟಿ ಸೂರ್ಯಸಕರ
ತೇಜಃಪುಂಜತರ
ವಿದ್ಯುದ್ರಾಜಿತ ರಥಗಾಮಿ
ಉಳುತಿಹ ಕೃಷಿಕನ
ನೇಗಿಲ ಸಾಲಿನ
ಮಣ್ಣಿನ ರೇಖಾಪಥಗಾಮಿ !
ಬಾಂದಳ ಚುಂಬಿತ
ಶುಭ್ರ ಹಿಮಾವೃತ
ತುಂಗಶೃಂಗದಲಿ ಗೃಹವಾಸಿ
ದೀನ ಅನಾಥರ
ದುಃಖ ದರಿದ್ರರ
ಮುರುಕು ಗುಡಿಸಿಲಲಿ ಉಪವಾಸಿ !

ನೆಲದ ಕರೆ

ನಾಮಸೂಚಕ ಜಿ. ಎಸ್. ಶಿ.

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ.
ದಿನ ದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ.
ನನ್ನೆದೆಯ ಹಸಿರ ಉಸಿರು ಕುಗ್ಗಿದರು
ಬರಲಿಲ್ಲ ನಿಮಗೆ ಕರುಣೆ.
ನನ್ನ ಹೃದಯದಲಿ ನೋವು ಮಿಡಿಯುತಿದೆ
ನಾನು ನಿಮಗೆ ಶರಣು.
ಬರಡಾದ ನನ್ನ ಬಡತನದ ನೋವು
ನಿಮಗರಿವು ಆಗಲಿಲ್ಲವೆ ?
ನೀಲಗಗನದಲಿ ತೇಲಿ ಹೋಗುತಿಹ
ನಿಮ್ಮನೆಳೆಯುವುದೆ ?
ಬಾಯ್ತುಂಬ ನನಗೆ, ಕುಡಿಯಲಿಕ್ಕೆ ನಾ
ನಿಮ್ಮೆದೆಯ ಪ್ರೇಮವನ್ನು –
ನೀವು ಕರುಣಿಸಲು ನನ್ನ ಹಸಿರೆದೆಯು
ಉಸಿರುವುದು ತೋಷವನ್ನು.
ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ
ನನ್ನೆದೆಗೆ ತಂಪು ತನ್ನಿ.
ನೊಂದ ಜೀವರಿಗೆ ತಂಪನೀಯುವುದೆ
ಪರಮ ಪುಣ್ಯವೆನ್ನಿ !

ಬೆಳಗು ಬಾ.

ರಾಮರಾವ — ಜಿ. ಎಸ್. ಶಿ.

ಬೆಳಗು ಬಾ ಹಣತೆಯನು
ನನ್ನೆದೆಯ ಗುಡಿಯಲ್ಲಿ
ದಿವ್ಯ ದೀಪಾವಳಿಯ ಶುಭ ಘಳಿಗೆಯಲ್ಲಿ ;
ಬೆಳಗು ಬಾ ಓ ಗೆಳತಿ
ನಿನ್ನ ಒಲುಮೆಯ ಪ್ರಣತಿ
ಶತಮಾನಗಳ ತಿಮಿರ ಮುಸುಕಿರುವ ಮಂದಿರದ
ಎದೆಯೊಳದಲ್ಲಿ.

ಬೆಳಗು ಬಾ ದೀವಿಗೆಯ
ನನ್ನೆದೆಯ ಗುಡಿಯಲ್ಲಿ
ದಿವ್ಯ ದೀಪಾವಳಿಯ ಶುಭಲಗ್ನದಲ್ಲಿ ;
ಎದೆಯ ಕಸವನು ಗುಡಿಸಿ
ರಂಗವಲ್ಲಿಯನಿರಿಸಿ
ಸಿಂಗರಿಸು ನನ್ನೆದೆಯ ನಿನ್ನ ಪ್ರೇಮದ ಅಮೃತ
ಸಂಪತ್ತಿನಲ್ಲಿ.

ಬೆಳಗು ಬಾ ಜ್ಯೋತಿಯನು
ಎದೆಯ ಮಂದಿರದಲ್ಲಿ

ಜಗಕೆ ಬೆಳಕಾಗುತಿಹ ಸುಪ್ರಭಾತದಲ್ಲಿ
ಇನಿತು ದಿನ ಬಡ ನಾನು;
ಬಂದೆ ಚೇತನ ನೀನು.
ನಿನ್ನ ಶಕ್ತಿಯಿಂದ ಬಾಳಿ ವ್ಯಕ್ತಿಯಾದೆನು ನಾನು
ಈ ಲೋಕದಲ್ಲಿ.

ಬೆಳಗು ಬಾ ಹಣತೆಯನು
ನನ್ನದೆಯ ಗುಡಿಯಲ್ಲಿ
ಚಿರಕಾಲ ಪ್ರಜ್ವಲಿಸಿ ಬೆಳಗುವಂತೆ;
ನೀನು ಬಂದುದರಿಂದ
ನನ್ನದೆಯ ಆನಂದ
ನರ್ತಿಸುತ ಶೋಭಿಸಿದೆ ಮತ್ತೆ ಬಂದ ಮಧುದಿನದ
ಮುಂಬೆಳಗಿನಂತೆ.

ರಾಗಾನ್ವೇಷಣೆ.

ನವ್ಯಗಾನ ಜಿ. ಎಸ್. ಶಿ.

ಯಾವ ರಾಗಕೋ ಏನೋ ನನ್ನೆದೆ ವೀಣೆ ಮಿಡಿಯುತ ನರಳಿದೆ
ಮಿಡಿಯುತಿರುವಾ ರಾಗವೊಂದೂ ಬೇರೆ ನಾದಗಳಲ್ಲಿಲ್ಲವೆ.

ಬಿಸಿಯ ಬಿಸ್ಸಿಗಳೆಡೆಯ ಬೆಳಕಿಗೆ ಮುಗಿಲಿನ ಹುಡುಕಿತು ರಾಗದ
ಚಿಗುರು ಬೇಗೆಗೆ ತಣಿಲು ತಂಪಿಗೆ ನುಸುಳಿ ಸೋಲುತ ಬಳಲಿತು
ಬಿಳಿ ಬಿಳಿ ಬಗೆಬಗೆಯ ಬೃಂದದೆಡೆಗೆ ತಂತಿಯು ಜೋಡಿಸಿ
ಬಿಡದ ರಾಗವ ತನ್ನ ಎದೆಯಲಿ ಹಿಡಿಯಲೆಳಸುತ ಬಳಲಿತು.

ಮುಗಿಲ ತಾರೆಯ ರಜತ ನಂದನವಲ್ಲಿ ದನಿಯನು ಹುಡುಕಿತು
ಸರ್ವಋತುಗಳ ಕೋಶಕೋಶಕೆ ನುಗ್ಗಿ ತೃಪ್ತಿಯನರಸಿತು.
ಏನು ಹುಡುಕು ದೊರೆಯದಾದುದು ಮನದ ಬಯಕೆಯ ರಾಗವು
ಬರಿಯ ವೇದನೆ ಎದೆಯ ತುಂಬಿದೆ, ಮೂಕವಾಗಿದೆ ಹೃದಯವು —

ಮತ್ತೆ ದಿನವೂ ಎಂದಿನಂತೆಯೆ ಮೂಕಗೀತೆಯ ಮಿಡಿದಿದೆ!
ಯಾವ ರಾಗವ ನುಡಿಸಿದರೆ ಜಗವೆಲ್ಲ ರಾಗವು ಎನುವುದೋ,
ಅಂಥ ರಾಗವನರಸಿ ತೊಳಲುತ ದಿನವು ಕಳೆವೆನು ಸೈರಿಸೆ.
ಶೂನ್ಯ ನೀಲಾಕಾಶವಿಸ್ತರದೆಡೆಗೆ ಮೊರೆಯನು ದನಿಸಿದೆ —

ಸಂಧ್ಯಾರಾಗ

ನಾ.ಮ.ಗಾ.ನ. ಜಿ.ಎಸ್.ಶಿ.

ಕಣ್ಗಳ ತೊಳೆ ಈ ಕೆಂಪಿನಲಿ
ಸುಂದರ ಸಂಧ್ಯಾರಾಗದಲಿ.

ನೆರಳೊಳಗಿಹ ನಾನಾವೃಕ್ಷದ ನೋಡಿ
ಕೊಳ್ಳೆಂದಿರುವೀ ಕಣ್ಗಳ ಜೋಡಿ
ನಿಮಿರಲವಾಗಲಿ, ತೊಳೆಯಲ್ಲಿ
ಸುಂದರ ಮಂಗಳ ರಾಗದಲಿ.

ಜಗದ ಕುಹಕಗಳ ಮುಚ್ಚುವ ತೆರದಿ
ಬರು ಮುನ್ನವೆ ಆ ಕತ್ತಲ ಸರದಿ
ಕಣ್ಗಳ ತೊಳೆ ಈ ಕೆಂಪಿನಲಿ
ಮಂಗಳಕರವಹ ಸಂಗೀತದಲಿ.

ಕೆಂಪನು ಕತ್ತಲೆ ನುಂಗುವ ಮುನ್ನ.
ನಿಮಿರಲು ತಾರೆಯು ಬೆಳಗುವ ಮುನ್ನ
ಕಣ್ಗಳ ತೊಳೆ ಈ ಕೆಂಪಿನಲಿ
ಸುಂದರ ಸಂಧ್ಯಾರಾಗದಲಿ.

ನೆನಪಿದೆಯೆ ನಿನಗೆ?

ಮಗಾದ ಜಿ.ಎಸ್. ಶಿ.

ನಾವಿಬ್ಬರೂ ಅಂದು
ಹೊಳೆಯ ದಡದಲಿ ನಿಂದು
ಮರಳು ಮನೆಗಳ ಕಟ್ಟಿ
ಆಟವಾಡಿದ ದಿವಸ ನೆನಪಿದೆಯೆ ನಿನಗೆ?
ಮುಂಗಾರು ಮಳೆ ಹೊಯ್ಯಲು
ನಾವಿಬ್ಬರೂ ತೊಯ್ಯಲು —
ನಿಂತಾಗ ಮರಳು ಮನೆ
ಕೊಚ್ಚಿ ಹೋದಾ ದಿವಸ ನೆನಪಿದೆಯೆ ನಿನಗೆ?
ಈ ಮರಳು ನನಗೆಂದು
ಆ ಮರಳು ತನಗೆಂದು
ಹೊಡೆದಾಡಿ 'ಜತೆ' ಬಿಟ್ಟು
ಆಟವಾಡಿದ ದಿವಸ ನೆನಪಿದೆಯೆ ನಿನಗೆ?
ಮರುದಿವಸ ಒಂದಾಗಿ
ಮರಳು ಮನೆಗಳ ಕಟ್ಟಿ
ಕೈಯನ್ನು ಚಪ್ಪಾಳೆ ತಟ್ಟಿ
ಹಾಡಿ ಕುಣಿದಾ ದಿವಸ ನೆನಪಿದೆಯೆ ನಿನಗೆ?
ಅಂದು ಹರಿದಾ ಹೊಳೆಯು
ಇಂದಿಗೂ ಹರಿಯುತಿದೆ;
ಬಾ ಗೆಳೆಯ ಮತ್ತೊಮ್ಮೆ ಆಟವಾಡೋಣಾ,
ಬಾಲ್ಯದುದ್ಯಾನವನು ಮರಳಿ ಕಟ್ಟೋಣ!

ತೃಪ್ತಿ

ಸಾಮಗಾನ ಜಿ.ಎಸ್.ಶಿ.

ಎದೆ ತುಂಬಿ ಹಾಡಿದೆನು ಅಂದು ನಾನು,
ಮನವಿಟ್ಟು ಕೇಳಿದಿರಿ ಅಲ್ಲಿ ನೀವು.
ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ.
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ,
ಹಾಡುವುದು ಅನಿವಾರ್ಯ ಕರ್ಮ ನನಗೆ.
ಕೇಳುವವರಿಹರೆಂದು ನಾ ಬಲ್ಲೆನದರಿಂದ
ಹಾಡುವೆನು ಮೈದುಂಬಿ ಎಂದಿನಂತೆ.
ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ.

—

ಹಳೆಯ ಹಾಡು.

ಮನನ. ಜಿ.ಎಸ್.ಶಿ.

ಹಾಡು ಹಳೆಯದಾದರೇನು
ಭಾವ ನವನವೀನ
ಎದೆಯ ಭಾವ ಹೊಮ್ಮುವನಕ
ಭಾಷೆ ಬರಡು ಎನಿಸದು.
ಹಳೆಯ ಹಾದಿ ಹಾಡು ಮತ್ತೆ
ಇದನೆ ಕೇಳಿ ತಣಿಯುವೆ
ಹಳೆಯ ಹಾಡಿನಿಂದ ಹೊಸತು
ಜೀವನವನೆ ಕಟ್ಟುವೆ.
ಹಾಡನೊಂದು ಕೇಳುವನಿತು
ಸುಹೃದಯತೆ ನನಗಿದೆ
ಅನಿತೆ ಸಾಕು; ಹಾಡು ನೀನು
ಇದನೆ ಕೇಳಿ ಸುಖಿಸುವೆ.
ಹಮ್ಮು ಬಿಮ್ಮು ಒಂದು ಇಲ್ಲ
ಹಾಡು, ಹೃದಯ ತೆರೆದಿದೆ
ಹಾಡಿನಲ್ಲಿ ಲೀನವಾಗ -
ಲೆನ್ನ ಮನವು ಕಾದಿದೆ.

ಸಂದೇಶ.

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible] !

ರತ್ನನ್ ಪರ್ಪಂಚ

'ರತ್ನ'

ಏಳ್ಕೊಳ್ಳಾಕ್ ಒಂದ್ ಊರು
ತಲೆಮೇಗ್ ಒಂದ್ ಸೂರು
ಮಲಗಾಕೆ ಭೂಮ್ತಾಯಿ ಮಂಚ.
ಕೈ ಇಡದೋಳ್ ಪುಟ್ನಂಜಿ
ನಗನಗತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ!
ಅಗಲೆಲ್ಲ ಬೆವರ್ ಅರಿಸಿ
ತಂದದ್ರಲ್ ಒಸಿ ಮುರಿಸಿ
ಸಂಜೇಲಿ ಪುಟ್ಟಿ ಒಂದ ಕೊಂಚ
ಏರ್ಸ್ತ ಮೈ ಜುಂ ಅಂದ್ರೆ
ಯಾಕ್ಲೆ ಜುಂ ಜುಂ ಅಂದ್ರೆ
ತುಂಬೋಯ್ತು ರತ್ನನ್ ಪರ್ಪಂಚ!
ಏನೋ ಕುಸಿಯಾದಾಗ
ಮತ್ತೆ ಎಚ್ಚಿ ಓದಾಗ
ಅಂಗೇನೆ ಪರಪಂಚದ್ ಅಂಚ
ದಾಟ್ಕೊಂಡಿ ಓಗಾದ್ರು
ಕನ್ನಡದಲೆ ಪದವಾಡ್ತ
ಇಗ್ಗೋದು ರತ್ನನ್ ಪರ್ಪಂಚ!

ಮುಕ್ಕಿಲ್ಲ ಮೂಲಿಲ್ಲ
ನಮಗ ಉಪಾಯಾಗ ಪಾಲಿಲ್ಲ
ನಾವ ಕಂಡಿಲ್ಲ ಆ ತಂಟ ಪಂಚ;
ನಮ್ಮಷ್ಟಕ್ಕ ನಾವಾಗಿ
ಇದ್ದಿದ್ರಲ್ಲೆ ಒಂದಾಗಿ
ಬಾಳೋದು ನಮ್ಮನ್ನ ಪ್ರಪಂಚ!
'ಬಡತನ ಸಿರಿತನ
ಏನಿದ್ರೇನ? ನಡತೇನ
ಚೆಂದಾಗ ಇಟ್ಕೊಳ್ಳೋದೆ ಹೆಚ್ಚು!'
ಹಂಚ್ಕೊಂಡು ಸುಖವಾಗಿ
ಕಷ್ಟಕ್ಕೆ ನಗಮೊಗವಾಗಿ
ನಗಿಯೋದೆ ನಮ್ಮನ್ನ ಪ್ರಪಂಚ!
ದೇವ್ರು ಏನ್ರು ಕೊಡಲ್ಲ
ಕೊಡದಿದ್ರೆ ಬಿಡಲ್ಲ
ನಾವೆಲ್ಲ ಅವನೊಳಗೆ ಬೆಚ್ಚು!
ಅವನ ಆಟದ ತಾಳ್ದಂಗೆ
ಕಣ್ಣ್ ಮುಚ್ಕೊಂಡ ಎಳ್ದಂಗೆ
ಕುಣಿಯೋದೆ ನಮ್ಮನ್ನ ಪ್ರಪಂಚ!

ಪ್ರಾರ್ತನೆ.

'ರತ್ನ'

ಬ್ರಮ್ಮ! ನಿಂಗೆ ಜೋಡಿಸ್ತೀನಿ
ಯೆಂಡ ಮುಟ್ಟಿದ್ ಕೈನ!
ಬೂಮಿ ಉದ್ದ ಬಗ್ಗಿಸ್ತೀನಿ
ಯೆಂಡ ತುಂಬ್ಕೊಂಡ್ ಮೈನ!
ಬುರ ಬುರ ನೊರೆ ಬಸಿಯೋವಂತ
ಬೆಳ್ಳಿ ಪುಳ್ಳಿ ಯೆಂಡ
ಕೊಟ್ಟೀನ್ ನನ್ನ ಪ್ರಾರ್ತ್ನೆ ಕೇಳು
ಪುರಸೋತಮ್ನ ಗಂಡ!
ಪುರಸೋತಮ್ಮ ಮುನಿಸ್ಕೊಂಡಾಳೆ
ನೀನಾರೆ ಬುದ್ದಿ ಯೋಳು;
ಕುಡದ್ಬುಟ್ ಅದ್ರ ತೇಲಾಡ್ತದನ್ನ
ನಾಲ್ಗೆ — ಬಾಳ್ಗ ಗೋಳ್ಳು!
ಅಪ್ಪನ್ನೆಲ್ಲಾ ಪುರಸೋತಮ್ಮ
ತುಪ್ಪಾಗ್ ಇಡ್ಕೊಂಬುಟ್ಟ
ಮುನಿಯು ಎಂಡ ಬುಡೋವಂಗೇನೆ
ಬುಡತಾಳೆ — ಬೋಳ್ ಕೈ ಗಟ್ಟ!
ಮುನಿಯುಂಗಾಲ ಕಾಸ್ ಉಗ್ರತ್ತೆ
ಯೆಚ್ಗೆ ಯೆಂಡ ಬುಟ್ರೆ;

ಪುರುಷೋತ್ತಮ್ಮಂಗೆ ಎಷ್ಟೋಟ್ ಸತ್ತೆ
ಮಾತ್ ಸುಳ್ಳಾಗ್ ಹೋಯ್ತ್ರೆ?

ನಂಗೆ ನೀನು ಬಾಳ್ವೆ ಮಗಾ
ನನ್ ಕೇಸ್ ಗೆದ್ ಗಿದ್ ಹೋಯ್ತ್ರೆ
ಮಾತ್ತೀನಲ್ಲ ನಿನ್ ಪ್ರಸ್ತೀನ
ಪುಳ್ಳೆ ಎಂತಕ್ ಹೋಯ್ತ್ರೆ!
ಕಮಲದ ಬಾವಿನ ಕುರ್ತ ಮಗ್ಳಿಗೆ
ಜೋರಾಗ್ ಕುಂತ್ಕೊ ನೀನು!
ನಾಕು ಬಾಯ್ಯಾಗ್ ನಾಕು ಬುಂಡೆ
ಎಂಡ ತತ್ತ್ರಿನ್ ನಾನು!
ಪುರುಷೋತ್ತಮಂಗೆ ಎಲ್ಲಾ ಕಿಲ್ಲ —
ನೀನೇನ್ ಎದಕೊಳ್ಬೇಡ;
ಕೇಳ್ದ ವರಾನ್ ಹೊಂಬಿನ್ಸ್ಕೊಟ್ರೆ —
ತಕ್ಕೊ! ಎಂದದ ಹೇಡ!

ನಂಜಿ ರತ್ನ ತ್ಯಾಟ್ಕ ಓಗಿದ್ರು.

'ರತ್ನ'

ನಂಜಿ ರತ್ನ ತ್ಯಾಟ್ಕ ಓಗಿದ್ರು
ಒಂದಾರ್ ಮಾತಾಡ್ಲಿಲ್ಲ ;
ಬೈಗೊಳ್ಳ್ ಮಾತಾಡ್ಲಿಲ್ಲಾಂತಲ್ಲ —
ಆಡೋಕ್ಕೆ ಮನಸಾಗ್ಲಿಲ್ಲ.

ನಂಜಿ ರತ್ನಂಗ್ ತೋಳಿಡ್ಕೊಂಡು
ದುಂಬಿ ತಬ್ಬಿದ್ ಊವ!
ರತ್ನನ್ ಮನಸಿನ್ ಅಡಗ್ ಸೇರಿತ್ತು
ನಂಜಿ ಮನಸಿನ್ ರೇವ!

ಮನಸಿನ್ ಜೋಡಿ ಯಾಗೆ ಮುಂದೆ
ಬಾಯಿನ್ ಬುಡುಬುಡುಕೇನ!
ಮಾತೆ ಇಲ್ದೇನೆ ಅರ್ಥ ಆಗ್ತಿದ್ರೆ
ಆಡೋನ್ ಮನಸ್ನ? ಶ್ಯಾಣ!

- 29.09.21

ದೂರ ದೂರ ದೂರ ಗಗನಕೆ
ದೂರ ದೂರ ದೂರ ಕ್ಷಿತಿಜಕೆ
ಹಾರೋಣ ಬಾ, ಹಾರೋಣ ಬಾ...
ಗಿರಿಗಳ ಕೆದರಿ ಒತುಂಬಿನ ಬಾಚಿ
ಬೆಟ್ಟ ತಪ್ಪಲು ಅಡವಿ ಬಯಲು
ದಾಟಿ ದಾಟಿ ದೂರ
ಹಾರೋಣ ಬಾ, ಹಾರೋಣ ಬಾ...
ಕೆರೆ ಕೊಳ ಸರೋವರ ನದಿ ನದ ಸಾಗರ
ಮೂಡಲು ಪಡುವಲು ತೆಂಕು ಬಡಗು
ತಿರುಗಿ ತಿರುಗಿ ದೂರ
ಹಾರೋಣ ಬಾ, ಹಾರೋಣ ಬಾ...
ಗಿಡದಲಿ ಹಣ್ಣನು ತಿಂದು
ತೊರೆಯಲಿ ನೀರನು ಕುಡಿದು
ಆಕಾಶ ಛತ್ರಿ ಗಾಳಿ ತೇರು
ಏರಿ ಏರಿ ದೂರ
ಹಾರೋಣ ಬಾ, ಹಾರೋಣ ಬಾ...

ಯಾರಿಗೂ ಹೇಳೋಣು ಬ್ಯಾಡಾ.

ಯಾರಿಗೂ ಹೇಳೋಣು ಬ್ಯಾಡಾ — ಯಾರಿಗೂ ||
ಹಾರಗುಡತೀ ಚೆನ್ನ ಎಂತ
ನ್ಯಾರವಾಗಿ ಕೂತು ಹಾಂಗ
ದೂರ ದೂರಾ ಹೋಗೋಣಾಂತ್ಯ | ಯಾರಿಗೂ
ಹಣ್ಣು ಹೂವು ತುಂಬಿದಂಥ
ನಿನ್ನ ತೋಟದ ಸೇರಿ ಬಂದ್ಯ
ತಿನ್ನೋಣಾಂತ್ಯ ಅದರ ಹೆಸರು | ಯಾರಿಗೂ
ಕುಣಿಯೋಣಾಂತ್ಯ ಕೂಡಿ ಕೂಡಿ
ಮಣಿಯೋಣಾಂತ್ಯ ಜಿಗಿದು ಹಾರಿ
ದಣಿಯುದ್ಯಾಸ ಆಡೋಣಾಂತ | ಯಾರಿಗೂ
ಮಲ್ಲಿಗೀ ಮಂಟಪದಾಗ
ಗಲ್ಲ ಗಲ್ಲ ಹಚ್ಚಿ ಕೂತು
ಮೆಲ್ಲ ದನಿಲೆ ಹಾಡೋಣಾಂತ್ಯ | ಯಾರಿಗೂ
ಹಾದಿಗಾ ಮರೆಯಾಗಿ ಇಲ್ಲಿ
ನಾವಿನೂ ಹಿಡಿಯಾಡಿನೋಣು
ಹೂವ ಹೂವು ಹುಡುಕಿ ಹುಡುಕು | ಯಾರಿಗೂ
ನಿದ್ದಿ ಮಾಡಿ, ಎದ್ದೆಯು ಬಿಡದ್ಯ,
ಮುದ್ದು ಮಾತಿನ ಕನಸು ನೋಡಿಗೆ
ಸುದ್ದಿ ಮಾಡದೆ ನಾಗೋಣಾಂತ್ಯ | ಯಾರಿಗೂ

ರಾಗರತಿ.

ಗತಿ — ಬೇಂದ್ರೆ

ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ
— ಆಗ - ಸಂಜೀಯಾಗಿತ್ತ ;
ನೆಲದ ಅಂಚಿಗೆ ಮಂಜಿನ ಮುಸುಕು ಜಾರಿಕೊಂಡು ಬಿದ್ದಿತ್ತ
ಗಾಳಿಗೆ ಮೈಲಿಗಿ ಹತ್ತಿತ್ತ.
ಬಿದಿಗಿ ಚಂದ್ರನಾ ಚಕೋರಿಕೆ - ನಗಿ - ಹೂ ಮಲ್ಲಿಗಿ ಮಾರಿತ್ತ
ಮ್ಯಾಲಕ ಚಿಕ್ಕಿಯ ಹೂ ಇತ್ತ ;
ಇರುಳ ಹೆರಳಿನಾ ಅರಳ ಮಲ್ಲಿಗಿ ಜಾಳಿಗಿ ಹಾಂಗಿತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ.

ಹೊಂಗನಸಿನಾ ಬಯಕೆಯು ಹೆಣ್ಣಾ ಎದಿಗೆ ಹೊಕ್ಕಿತ್ತ
ತಿರುಗಿ ಮನಸಿಗೆ ನಾಟಿತ್ತ ;
ಕಾಮಿ ಚಿಕ್ಕಿನಾಂಗ ಭಾವಕಿ ಹಾದಿ ಕಾಯುತ ನಿಂತಿತ್ತ
ಎದಿ ಡಂಡುಕುಟ್ಟುತಿತ್ತ.
ಮುಳ್ಳುಗಾಳಿ - ಹುಲ್ಲು ಕಲ್ಲು ತೆರೆ ಸೆರಗನು ಹಿಡಿತಿತ್ತ
ಮುತ ಮುತ ಬೆರಗಿಲೆ ಬಿಡತಿತ್ತ ;
ಬೆಂದ ಮನಸಿನ ಬಿಸಿ ಬಿಂದ ನೆಲ್ಲಿಗೆ ಬಿಸಿಲೆ ಬಡತಿತ್ತ
ತನ್ನ ಮೈಮರೆ ಮರೆತಿತ್ತ.

ನೀ ಹೀಂಗ ನೋಡಬ್ಯಾಡ ನನ್ನ.

ನೀ ಹೀಂಗ ನೋಡಬ್ಯಾಡ ನನ್ನ
ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ?

ಸಂಸಾರ ಸಾಗರದಾಗ, ಲೆಕ್ಕವಿರದಷ್ಟು ದುಃಖ ಬಂದ
ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿಂದೋ ಬಂದ
ಮುಳುಗಿಸುವ ಸುಳಿಯು ಮುಳುಗಿಸಲು ಇಲ್ಲ, ಮುಂದಿನದು ದೇವರ ಚಿತ್ತ
ನಾ ತಿಳಿದಿರೆ ಇದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ?

ಕಂಬಲ್ಯ ಹಾಸ್ಯ ತುಂಬ ಕೆಂಪು ಗಿಳಿಗಡಕ ಹಣ್ಣಿನ ಹಾಂಗ
ಇದ್ದಂಥ ತುಟಿಯ ಬಣ್ಣೆತ್ತ ಹಾರಿತು? ಯಾವ ಗಾಳಿಗೆ, ಹೀಂಗ
ಈ ಗದ್ದ, ಗಲ್ಲ, ಹಣಿ, ಕಣ್ಣು, ಕಂಡು ಮಾರಿಗೆ ಮಾರಿಯು ಬೇರೆ
ಹಾವಸ್ಯ ತನ್ನ ಕೈ ಸವರಿತಿಲ್ಲಿ, ಬಂತೆನಗ ಇಲ್ಲದ ಭೀತಿ.

ನಾಡಿಲೆ ನೆನೆದ ಕೈ ಹಿಡಿದ ನೀನು, ತಣ್ಣಗ ಕಂತನ ತಿಳಿದು
ಬಿಡದಿಲ್ಲ ಇನ್ನೂನು, ಬಾಡಿ ಮುಚ್ಚಿದ ಕೆಂಡ ಇದ್ದಂತೆ ಹ್ಯಾಂಗೋ
ಮುಗಿಲ್ಯಾನ ಕಪ್ಪೊಡೆದು ನೆಲಕ ಬಿದ್ದಾಂಗ ನೆಲಕ ನೀಲ ಎಲ್ಲಿನ್ನ
ಆ ಗಾದಿಮಾತು ನಂಬಿ, ನಾನು ದೇವರಂತ ತಿಳಿದಿದ್ದೆ ನೀ ನನ್ನ

[illegible] [illegible] ಹಾಲು [illegible] [illegible] [illegible]
[illegible] [illegible] [illegible] [illegible], [illegible] [illegible]
[illegible] [illegible] [illegible] ನಿನ್ನ [illegible] [illegible] [illegible]
[illegible] [illegible] [illegible] [illegible] [illegible] ತೇಲುತ ಹಗಲ !

ನಿನ್ನ [illegible] [illegible] [illegible], [illegible] [illegible] ಯಾಕೆ?
[illegible] [illegible] [illegible] [illegible] [illegible] [illegible] [illegible]
[illegible] [illegible], [illegible] [illegible], [illegible] [illegible] [illegible]?
[illegible] [illegible], [illegible] [illegible], [illegible] [illegible] ಕನ್ನಡಿ

ಸ್ವಾತಂತ್ರ್ಯದ ಹಣತೆ.

ನಿಸಾರ್

ಸದಾ ಉರಿಯುತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ಮುಡಿಪು ತೈಲವೆರೆಯುತಿರಲು ಬಿಡುವಿಲ್ಲದ ಜನತೆ
ಎಂತು ಕುಂದಬಹುದು ನಮ್ಮ ತಾಯ್ನಾಡಿನ ಘನತೆ.?

ಮುಳ್ಳಿನಿಂದ ಅರಳಿ ಬಿರಿದಿಹಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ,
ಹಡೆಯಿತದನು ಜನತೆ- ಬಾಳ ಬೆಸೆಯೆ ನಾಡಭಕ್ತಿ..

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲ ಗಳಿಕೆ,
ವ್ಯಕ್ತಿ ವ್ಯಕ್ತಿ ಜೀವದ ಬೇರಿ, ಮರವಾಗಿದೆ ಮೊಳಕೆ;
ಮೇಲೇರಿದ ಹಾಗೆ ಭದ್ರವಾಯುವುಂಟು ಸ್ಥಳಕೆ.

ಸಾಗಿದಂತೆ ಸಲ್ಲುತಿರಲಿ ಸಾಧನೆಂಬುದೆ ಗಮನ,
ಪ್ರಾಣವನ್ನೆ ತೆಗೆಯುತಿಹವರಿಗೆಮ್ಮ ನಮನ;
ತಾಯಮುಡಿಗೆ ದಿನವೂ ಏರುತಿರಲಿ ಹೂವು, ಪವನ.

ನನ್ನ ಕೈಯನು ಹಿಡಿದಾಕೆ!

೧೮ ಬೇಂದ್ರೆ

ನನ ಕೈಯ ಹಿಡಿದಾಕೆ ಕಿರು ನುಂಗಿ ನಗು ಒಮ್ಮೆ
ನಾಚಿ ನಸು ನಕ್ಕೀನ್ಯ
ಇಲ್ಲದಿರಲು ನೀನ ಕಿರುವ ಕುಚ್ಚಿ ಹಳ್ಳದ ಕಲ್ಲ
ಹುಡುಗಾಗಿ ಸಿಕ್ಕೀನ್ಯ
ಜಗದಾಗ ಎಲ್ಲಾದ ನೆರಳು ಬೆಳಕಿನಾಗ
ಹಗಲಿರುಳು ಇದ್ದಾವ
ಎದ್ದೇನ್ಯ ಬಿದ್ದೇನ್ಯ ಕಡಲು ಬಿದ್ದೇನ್ಯ
ನಕ್ಕೋಣ ಗೆದ್ದಾವ!

ಕುಣಿನಗುತ ಬಂದೇವ ನಸುನಗುತ ಬಾಳ್ಯೋಣ
ತುಡುನಗುತ ತೆರಳ್ಯೋಣ
ಬಿಡ ನಗುವು ಮರುವಾಗ ಕುರುಹಾದಿ ಕಳ್ಕೊಳೋಣ
ಎತ್ತಾರೆ ಕೆರಳ್ಯೋಣ!
ಬಡತನ ಒಡೆತನ ಕಡೆತನ ಕುಳ್ಳಿರಾಳೇನ
ಎದೆಕಿಗ್ಗಿ ಕೈಹಿಡುವಿಗ್ಗ
ಬಾಳಿನ ಕಡಲಾಗ ಕಿಡನ ಮುಳ್ಗುದಿಬ್ಯಾಡ
ಕಡೆಗೊಳ್ಳು ಹಿಡಿದು ಕೊಟ್ಟ!

—

ಕಾರಿಹೆಗ್ಗಡೆಯ ಮಗಳು.

ಪಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು
ತಡೆಯದೀಗಲೆ ಹಡವ ಹಾಯಿಸು
ಕೊಡುವೆ ಕೇಳಿದ ಹೊನ್ನನು.
ಆರು ನೀವೀ ಕೆರಳಿ ಮೊರೆಯುವ
ನೀರ ಕಾಯಲ ಹಾಯುವವರು ?
ಪಡುವ ದಿಬ್ಬದ ಗೌಡ ನಾನೀ
ಮಡದಿ ಕಾರಿಯ ಕುವರಿಯು.
ಓಡಿ ಬಂದೆವು ಮೂರು ದಿವಸ
ಜಾಡ ಹಿಡಿದು ಹಿಂದೆ ಬಂದರು
ನಮ್ಮನೀ ಕಣಿವೆಯಲಿ ಕಂಡರೆ
ಚಿಮ್ಮಿ ಹರಿವುದು ನೆತ್ತರು.
ಹತ್ತಿ ಕುದುರೆಯ ತರುಬಿ ಬರುವರು
ಮುತ್ತಿಕೊಂಡರೆ ನನ್ನ ಕೊಲುವರು
ಘೋರದುಃಖದ ನಾರಿಯನು ಬಳಿ-
ಕಾರು ನಗಿಸಲು ಬಲ್ಲರು ?

ಆಗ ಅಂಬಿಗ ತೊರೆಯನೆಂದನು
ಬೇಗ ಬೀಡು, ಓಡ ತರುವೆನು
ಸುತ್ತಲಿ ಜೊನ್ನ, ಬೆಳಗಿ ನಿನ್ನೀ
ಮಡದಿಗೋಸುಗ ಬರುವೆನು.
ಆದುದಾಗಲಿ ಮುದ್ದಿನರಗಿಣಿ-
ಗಾದ ಗಂಡವ ಕಾದು ಕೊಡುವೆನು
ಕಡಲು ನೊರೆಗರೆದೆದ್ದು ಕುದಿಯಲಿ
ಗಡುವ ಹಾಯಿಸಿ ಬಿಡುವೆನು.
ತೂರುಗಾಳಿಗೆ ಕಡಲು ಕುದಿಯಿತು,
ನೀರ ದೆವ್ವಗಳರಚಿಕೊಂಡವು
ಕಪ್ಪು ಮೋಡದ ಹುಬ್ಬುಗಂಟಿಗೆ
ಕಪ್ಪಗಾದುವು ಮುಖಗಳು.
ಕೆರಳಿ ಕೆರಳಿ ಗಾಳಿ ಬಿಕ್ಕಿತು
ಇರುಳ ಕತ್ತಲೆ ಕವಿದು ಕೊಂಡಿತು
ಕಣಿವೆಯುಳ್ಳವರ ಕುದುರೆ ಕತ್ತಿಯ
ಖಣಿಖಣಿ ಧ್ವನಿ ಕೇಳ್ವತು.
ಏಳು, ಬೇಗೇಳಣ್ಣಾ ಎಂದಳು
ಹೂಳಿಕೊಳ್ಳಲಿ ನನ್ನ ಕಡಲು.
ಮುಳಿದ ಮುಗಿಲ ತಡೆಯಬಲ್ಲೆ
ಮುಳಿದ ತಂದೆಯ ತಡೆಯೆನು.

ಇತ್ತ ಕರೆಮೊರೆ ರಿಂದಕಾಯಿತು
ಅತ್ತ ತೆರೆಮೊರೆ ಸುತ್ತಿಕೊಂಡಿತು
ಆಳ ಕೈಯಲಿ ತಾಳಬಲ್ಲುದೇ
ಎಳು ಬಿಲ್ಲಿನ ಕಡಲದು !
ಅಲೆಗಳಬ್ಬರದಲ್ಲಿ ಅಂಬಿ
ಮುಳುಗುತಿಹುದು, ಏಳುತಿಹುದು
ಕರೆಗೆ ಬಂದ ಕಾಂತಿಹೆಗ್ಗಡೆ
ಕರಗಿ ಮುಳಿಸು , ಅತ್ತನು.
ತೊಂದುತೆರೆಗಳ ಮುಸುಕಿನಲ್ಲಿ,
ಕಂಡು ಮಗಳ ಕರಗಿ ಹೋದ —
ಒಂದು ಕೈ ನೀಡಿದಳು ನೆರವಿಗೆ ,
ಒಂದು ತಬ್ಬಿತು ನಲ್ಲನ !
ಮರಳು, ಮರಳು, ಮಗಳೆ ಎಂದ
ಮೊರೆವ ಕಾಯಲ ಗಂಟಲಿಂದ :
ಮರೆತೆ, ಒಪ್ಪಿದೆ ನಿನ್ನ ನಲ್ಲನ ,
ಮರಳು ಕಂದಾ ಎಂದನು.
ಮರಳಬಲ್ಲುದೆ ! ಹೋಗಬಲ್ಲುದೆ ?
ಕರೆಯ ತೆರೆಯುಪ್ಪಳಿಸಿ ಹೊಯ್ಯುಂ
ಹೊರಳಿ ಹೋದುವು ಮಗಳ ಮೇಲೆ
ಕೊರಗಿನಲಿ ಅವನುಳಿದನು.

ನಗೀ ನವಿಲು

ಗತಿ ಬೇಂದ್ರೆ

ನಾರೀ ನಿನ್ನ ಮಾರೀ ಮ್ಯಾಗ
ನಗೀ ನವಿಲು ಆಡುತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ.

ಮಿನಮಿನ ಮಿನ ಮಿಂಚತಿತ್ತ
ಮೂಡತಿತ್ತ ಮುಳುಗತಿತ್ತ
ಮುಳುಗುತಿತ್ತ ತೊಳಗತಿತ್ತ
ನೆಲಾ ಜಲಾ ಬೆಳಗತಿತ್ತ.

ಕಣ್ಣಿನ್ಯಾಗ ಬಣ್ಣದ ನೋಟ
ತಕ್ಕ ತಕ ಕುಣಿದಾಡತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ಒನದಾಡತಿತ್ತ.

ಮನದ ಮಾಮರದ ಕೊನೆಗೆ
ಕೋಕಿಲೊಂದು ಕೂಡುತಿತ್ತ
ಕೂಡತಿತ್ತ ಹಾಡ ಬಿಚ್ಚಿ
ಬರೇ ನಿನ್ನ ನೋಡತಿತ್ತ.

ಒಂದು ಜೀವಾ ನೊಂದುಕೊಂಡು
ಹಗಲಿರುಳು ಮಿಡುಕಾಡುತಿತ್ತ

ಮಿಡುಕತಿತ್ತ ತೊಡಕತಿತ್ತ
ಏನೋ ಒಂದು ಹುಡಕತಿತ್ತ.
ಕಣ್ಣೀರಿನ ಮಳೆಯು ಕೂಡ
ತನ್ನ ದುಃಖ ತೋಡತಿತ್ತ
ತೋಡತಿತ್ತ ಬೇಡತಿತ್ತ,
ದೊರಕದ್ದಕ್ಕ ಜಾಡತಿತ್ತ.

ಗೆಜ್ಜೆ ಘಲ್ ಘಲ್ ಎಂದು ಹೆಜ್ಜೆ ಹಾಕಿ.
ಸದ್ದುಗದ್ದು ಶೃಂಗಾರವು ಲಜ್ಜೆ ಇನ್ನು ಯಾಕೆ.
ಬಳುಕಿ ಬಳುಕಿ ತುಳುಕಿ ನಡೆವ ರಂಗುರಂಗು ಎಂತೆ
ಆಕಾಶದಲ್ಲಿ ಹೊಳೆವ ಕಾಮನ ಬಿಲ್ಲಿನಂತೆ.
ಮೋಡ ಕವಿದು ಮಿಂಚು ಹರಿದು ಗುಡುಗುತಿರಲು ಎಲ್ಲೆ
ಕೇಳಬಹುದು ಕೇಕೆಯುಲಿಯು, ಕುಣಿವ ನವಿಲಿನ ನಲಿವು
ಕುಣಿವ ಕುಣಿತ ಮಣಿವ ಮಣಿತ ಹೊಳೆವ ಹವಳದಂತೆ
ಕಣ್ಣು ತುಂಬಿಕೊಳ್ಳುವದಾಗ| ಸ್ವರ್ಗಲೋಕದಂತೆ ||ಹೆಣ್ಣೆ

ಅಂಥಿಂಥ ಹೆಣ್ಣು ನೀನಲ್ಲ!

ಕೆ.ಎಸ್.ನ.

ಅಂಥಿಂಥ ಹೆಣ್ಣು ನೀನಲ್ಲ,
ನಿನ್ನಂಥ ಹೆಣ್ಣು ಇನ್ನಿಲ್ಲ.

ಜಡೆಜಡೆಯ ಸಾಲು ತುರುಬೆಲ್ಲ,
ಗುಡಿ ನಿಂದ ಹೂವು ಮೇಲೆಲ್ಲ,
ತೆರೆತೆರೆಯ ಹೊರಳು ಕುರುಳೆಲ್ಲ,
ಸುಳಿಯುಂಬ ಕಣ್ಣ ಹೊರಳೆಲ್ಲ!
ಅಂಥಿಂಥ ಹೆಣ್ಣು...
ಮಣಿಮಾಲೆ ಕೊರಳ ದನಿಯೆಲ್ಲ
ಹೊಂಬಾಳೆ ಆಸೆ ಒಬ್ಬಗೆಲ್ಲ
ಒತ್ತಾಯವಿಲ್ಲ: ಒಲವೆಲ್ಲ!
ನಿನ್ನಂಥ ಹೆಣ್ಣು ಹಲವಿಲ್ಲ.
ಅಂಥಿಂಥ ಹೆಣ್ಣು...
ಎದೆ ಮುಚ್ಚ ನಿಂತ ಹೂಬಳ್ಳಿ
ಎಷ್ಟೊಂದು ಹೂವು ಅದರಲ್ಲಿ!
ಉಸಿರುಸಿರು ಮೊಗ್ಗು ಹೂವೆಲ್ಲ:
ನೀ ಬಳ್ಳಿ ಬೆಳಕು ಬದುಕೆಲ್ಲ!
ಅಂಥಿಂಥ ಹೆಣ್ಣು...

ನಡು ಬೆಟ್ಟದಲ್ಲಿ ನಿನ್ನೂರು ;
ಅಲ್ಲಿರುವ ನವಿಲು ಮುನ್ನೂರು
ಮುನ್ನೂರು ನವಿಲು ಬಂದಂತೆ
ನೀ ಬಂದರೆನಗೆ ; ಸಿರಿವಂತೆ
ಅಂಥಿಂಥ ಹೆಣ್ಣು...
ನಡುದಾರಿಯಲ್ಲಿ ನನ್ನೂರು
ಕುಡಿಮಿಂಚಿನೂರು ಹೊನ್ನೂರು
ಮುನ್ನೂರು ಮಿಂಚು ಹೊಳೆದಂತೆ
ನೀ ಬಂದರೆನಗೆ ಸಿರಿವಂತೆ
ಅಂಥಿಂಥ ಹೆಣ್ಣು...
ಬಲುದೂರ ದೂರ ನೀನಾಗಿ,
ಹೊಂಗನಸು ನಡುವೆ ದನಿತೂಗಿ ,
ಕಾದಿರಲು ನಾನು ನಿನಗಾಗಿ
ನೀ ಬರುವೆ ಚೆಲುವೆ ಹೊಳೆಯಾಗಿ
ಅಂಥಿಂಥ ಹೆಣ್ಣು...
ಎನಂಥ ಚೆಲುವೆ ನೀನಲ್ಲ
ನೀನಲ್ಲ! ಚೆಲುವೆ ಇನ್ನಿಲ್ಲ!
ಹಾಡಲ್ಲ ನೀನು ಕನಸಲ್ಲ
ನಿನ್ನಿಂದ ಹಾಡು ಕನಸೆಲ್ಲ.
ಅಂತಿಂಥ ಹೆಣ್ಣು...

೪೭.ಎಸ್.೮

ಹೋದೇನೇ ಉಮಾ ಹೋದೇನೇ
ಜನರೆನ್ನುವುದಿದು ನಿಜವೇನೇ?
ಹೊಟ್ಟೆ ಬಟ್ಟೆಗೂ ಗತಿಯಿಲ್ಲದವಳೆ
ಊರೂರು ತಿರಿದುಂಬುವನಂತೆ!
ಮಸಣದ ಬೂದಿಯ ಮೈಗೆ ಬಳಿದು
ಶಿವ ಎಲ್ಲೆಲ್ಲೂ ತಿರುಗುವನಂತೆ
ನೀನು ಕೂಡ ಬಂಗಾರದ ಮೈಯವಳ
ಆ ಬೂದಿಯನ್ನೇ ಬಳಿಯುವೆಯಂತೆ!
ನಿನ್ನ ತಾಯಿ ನಾನಾಗಿಹ ತಪ್ಪಿಗೆ
ಸಹಿಸಬೇಕೇ ಅವಮಾನವನು
ಮತ್ತೆ ಶಿವ ನಿನ್ನ ಕರೆಯಲು ಬರಲಿ
ಮನೆಯೊಳಗಿಲ್ಲ ಉಮೆ ಎನ್ನುವೆನು!

ನೀಲಾಕಾಶದ ತಾರೆಯು ನೀನು
ನಿನ್ನನೆ ನೋಡುತ ಬೆಕ್ಕಾಗಿ ಇರುವ
ಮರ್ತ್ಯದ ಮಣ್ಣಿನ ಶಿಶು ನಾನು.

ದಿವ್ಯ ಬೃಹತ್ ವೈಣಿಕ ನೀನು
ನಿನ್ನಯ ವಿಪಂಚಿ ಇಂಚರವಾಲಿಸಿ
ಮೈಮರೆಯುವ ಹರಿಣಿಯು ನಾನು.

ಬಂಧುರ ಮಂದಾನಿಲ ನೀನು
ನಿನ್ನಯ ಸ್ಪರ್ಶಕೆ ಹೊಯ್ಯುತ ತೂಗುವ
ಲಾಸ್ಯವನಾಡುವ ಲತೆ ನಾನು.

ತಗ್ಗದ ಹೊಂಬಿಸಿಲಿನ ಕೃಪೆ ನೀನು
ನಿನ್ನಯ ಸ್ಪರ್ಶಕೆ ಎದೆಯನು ತೆರೆಯುವ
ಸುಂದರ ಹೊಂದಾವರೆ ನಾನು.

ಭುವನಾಕರ್ಷಣಾ ಶಕ್ತಿಯು ನೀನು
ನಿನ್ನಯ ಸುತ್ತಲು ದಿನ ದಿನ ಸುತ್ತುವ
ಅಗಣಿತ ಹಣತೆಯೊಳೊಂದಾನು.

ಧ್ವಜ ವಂದನೆ

ಕೇಳಲಿ. ಕೆ. ಎಸ್. ನ.

ತ್ಯಾಗಜೀವನದ ಸಂಧ್ಯಾರಾಗವೇ, ಧ್ವಜವಂದನೆ ನಿನ
ಆಸೇತು ಹಿಮಾಚಲ ಧವಳಕಾಂತಿಯೇ, ಧ್ವಜವಂದನೆ ನಿನಗೆ
ಮುಡಿವ ನಾಡ ಮೈತ್ರಿ ತುಂಬಿದ ಉಸಿರೇ, ಧ್ವಜವಂದನೆ ನಿನಗೆ
ಯುಗಯುಗ ಭಾಗ್ಯದ ಚಿರಂಜೀವಿಯೆ, ಧ್ವಜವಂದನೆ ನಿನಗೆ
ಭೂತ ಭವಿಷ್ಯತ್ ವರ್ತಮಾನ ಶಿವ ಸಂಧ್ಯಾ ~~[illegible]~~ ಗೋಪುರವೇ
ನೀಲಗಗನತಲ ನೀರದ ವಿತಾನದ ತಾರಾ ಮಣಿ ಪದ ನೂಪುರವೇ
ಅಹೋರಾತ್ರಿಗಳ ಅನಂತ ಯೋಗದ ನಾದನಾದ ಚಕ್ರಧ್ವನಿಯೆ
ಸತ್ಯಾಗ್ರಹಿಗಳ ವೀರ ಸ್ವರ್ಗದ ಮುಂದಾಳು ಮುಂದಾಕೃತಿಯೆ
ಸಕಲಲೋಕ ಸದಾಜೀವನ ಶಾಂತಿಯ ಪ್ರಧಾನಿ ಜವಹರ ದರ್ಶನವೆ,
ರಾಜ್ಯಧರ್ಮಗಳ ಉನ್ನತ ಕೀರ್ತಿಯೇ, ಧ್ವಜವಂದನೆ ನಿನಗೆ,
~~ಯುಗಯುಗ ಭಾಗ್ಯದ ಚಿರಂಜೀವಿಯೇ, ಧ್ವಜವಂದನೆ ನಿನಗೆ~~
ಬುದ್ಧ ಗಾಂಧಿಗಳ ಕರುಣಾಮೂರ್ತಿಯೇ, ಧ್ವಜವಂದನೆ ನಿನಗೆ
ಪ್ರಬುದ್ಧ ಭಾರತ ರಚನೋತ್ಸಾಹದ ಸಹಸ್ರ ಬಾಹು ಸುದರ್ಶನವೇ,

ಜಯ ಜಯ ಜಯ ರಘುವೀರ್
ಹರ ಹರ ಹರ ಮಹದೇವ್.
ಪಡುಗಡಲಿನ ತೆರೆ ಪದಗಳ ಬಡಿದು
ಕರೆಯುತ್ತಿಹ ಜಯಭೇರಿಯ ಹೊಡೆದು
ಹಾಡುತಲಿರುವುದು ನಾವಾಲಿಸುವಾ
ಎಲ್ಲರ ಕಂಠವ ಜತೆಗೂಡಿಸುವಾ.
ಗಡಗಳ ನಡುವಿನ ಹೆಗ್ಗಾಡಿನಲಿ
ಮೊರೆಯುವ ಬಿರುಗಾಳಿಯ ಸುಯ್ಲಿನಲಿ
ಕಗ್ಗಲ್ಲಿನ ನೀರವ ಸುಯ್ಲಿನಲಿ
ಏನಿದು ಕೇಳ್ವುದು ಪ್ರತಿದನಿಗಳಲಿ.
ಶಿವನಶ್ವದ ರಣ ಕುಣಿತದ ಗೀತ
ಸ್ವಾಮಿ ಸಮರ್ಥರ ಸುರ ಸಂಗೀತ
ರಣವಾದ್ಯಂಗಳ ವೀರೋದ್ಘೋಷ
ಸಂನ್ಯಾಸಿಯ ಒಲವಿನ ಹೃದ್ಘೋಷ.
ಹಿಂದೂ ಸ್ವಾತಂತ್ರ್ಯದ ಕ್ರಾಂತಿಪಥ
ಪರಿಕೆಯ ನುಡಿ ಜಾಗೃತ ಭಾರತದ
ಘೋಷದಲಿ. ನಿರಾಶೆಯ ಅಡಗಿಸುತ
ವೈರಿಯ ಎದೆ ಗಡಗಡ ನಡುಗಿಸುತ.

ದೇಹ ದೇಶ ವಿಶ್ವ ಜಯಕೆ
ಸ್ವಾಭಿಮಾನ ಭಾರತ ಹೃದಯಕೆ.

ಸ್ವತಂತ್ರ ಜನತೆಯದೆಂದು ಬೆಂಕಿ ಆರದೆಂದು ಆರದು
ಮಾತೃಭೂಮಿಯೊಳಿಪ್ಪ ದಾಸ್ಯ ಬಾರದೆಂದು ಬಾರದು.
ಹಸಿರು ಕ್ಷೇತ್ರ ಹಿಮದ ಬೆಟ್ಟ ಜಲಧಿ ಗಗನ ನಮ್ಮದು
ಮುಕ್ತತನದ ಮೆಟ್ಟಿ ನಿಲುವ ನ್ಯಾಯ ನೀತಿ ನಮ್ಮದು
ಪ್ರಿಯ ಸ್ವದೇಶ ರಕ್ಷಣಾರ್ಥ ಹೋರಾಟವಿದೆಯೋ ಹೋರಾಟ
ಕಡೆಯತನಕ ಗೆಲ್ಲುವನಕ ನಿಲ್ಲೆವೆಲ್ಲ ನಿಲ್ಲೆವು.

ನೀತಿಯುಳ್ಳ ಸ್ಪರ್ಧೆ ಬೆಳೆದು ಬದುಕು ಸಾಧಿಸಾಗಲಿ
ಜಗದ ಜೀವ ತಣಿಸುತಿರಲು ಭೂಮಿಸುತರ ಸಂತಸ
ಉಸಿರಾಗಿಸಲಿ ಕ್ರಿಯಾಶಕ್ತಿ ಬರಲು ದಿನದಿನ ಹಿರಿಯ
ವಿಶ್ವಸಂತತೆಲ್ಲ ಕರೆದೆ ಸೌಂದರ್ಯ ತಿಳಿದು ಸ್ವಾಗತ.

ರಾಷ್ಟ್ರಯಜ್ಞ ಯಜ್ಞದ ಬಾಳ ಸಮಿಧೆ ಆಗಲಿ
ಸ್ವಾತಂತ್ರ್ಯ ಪ್ರಣತಿಯಲಿಗೆ ರುಧಿರ ಆಜ್ಯವೆರೆಯಲಿ
ಭೂಮಿಯಾದಿ ತಳೆದಲೆಂದು ಮುಗಿಲ ಮುಗಿಲ ಬೀಳಲಿ
ಹೊಸತು ಬಾಳ್ವ ವರ ವಿಶಾಲ ನಾಡು ನಾಡ ಕೇಳಲಿ.

ನಾನು ಬಡವಿ.

ಬೇಂದ್ರೆ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣು ಕಟ್ಟುವಂಥ ಮೂರ್ತಿ
ಕಿವಿಗೆ ಮೆಚ್ಚಿನೋಲೆ.

ಬಿಕ್ಕಳಿಗೆ ಬಾಸಿಲಂಗೊಂಡೆ ಹದನ
ಅವನ ಪ್ರೇಮಯ ಮುಟ್ಟನ
ಅದೇ ಗಳಿಗೆ ಮುತ್ರಯ ತುಂಬಿ
ನನಗೆ ನವಿರು ಬಟ್ಟನ.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು.

ಕುಂದು ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವಫಲವ
ತುಟಿಗೆ ಹಾಲು ಜೇನು.

ಬೆಳಗು

ಗತಿ:

ಮೂಡಲ ಮನೆಯಾ ಮುತ್ತಿನ ನೀರಿನ
ಎರಕ್ಕವ ಹೊಯ್ದಾ
ನುಣ್ಣ-ನ್ನೆರಕ್ಕವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದು
ಜಗವೆಲ್ಲಾ ತೊಯ್ದಾ
ಹೊಯ್ದೋ — ಜಗವೆಲ್ಲಾ ತೊಯ್ದಾ.

ರತ್ನದ ರಸದಾ ಕಾರಂಜಿಯು
ಪುಟಪುಟನೇ ಪುಟಿದು
ತಾನೇ — ಪುಟಪುಟನೇ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೆ
ಪತಪತನೇ ಒಡೆದು
ತಾನೇ — ಪತಪತನೇ ಒಡೆದು.

ಎಲೆಗಳ ಮೇಲೆ ಹೂಗಳ ಒಳಗೆ
ಅಮೃತದ ಬಿಂದು
ಕಂಡವು — ಅಮೃತದ ಬಿಂದು

ಯಾರಿರಿಸಿರುವರು ಮುಗಿಲ್ಕ ಮೇಲಿಂ-
ದಿಲ್ಲಗೇ ತಂದು
ಕೀಲ — ಇಲ್ಲಿಗೇ ತಂದು.

ತಂಗಾಳಿಯನು ಕೆಂದಾವರೆಗಳಿಗಿಳಿ
ಎಸಳೀನಾ ಬಿತವರಿ
ಹೂವಿನ — ಎಸಳೀನಾ ಬಿತವರಿ
ನಾರಿಕಿಬಿಟ್ಟರು ತುಂಬಿಯು ಬಂದು
ಮೆಲ್ಲಂಯೆಲ್ಲಾ ಸುವರಿ
ಗಂಧಾ — ಮೆಲ್ಲಂಯೆಲ್ಲಾ ಸುವರಿ.

ಗಿಡಗಂಟಿಯನು ಜೋಕ್ಕುಳ್ಗಳಿಂದ
ಹಕ್ಕಿಗಳಾ ಹಾಡು
ಕೇಂಗಿಯಿತು — ಹಕ್ಕಿಗಳಾ ಹಾಡು
ಗಂಧರ್ವರಾ ಗೀತೆಯಂಯಿತು
ಕಾಡಿನಾ ನಾಡು
ಕ್ಷಣಾದೊಳು — ಕಾಡಿನಾ ನಾಡು.

ಕಂಡಿತು ಕಣ್ಣು ನುಡಿದಿತು ನಾಲಗೆ
ತುಡಿದೀತೇ ದೇಹ
ಸ್ಪರ್ಶ — ತುಡಿದೀತೇ ದೇಹ.
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವಾದೀ ಗೇಹ
ದೇವರ - ದೀ ಮನಸಿನ ಗೇಹ.

ಅರಿಯುವ ಅಕ್ಷಿಪ್ತ ತಿಳಿಯುವ ಮನವು
ಕಾಣ್ಕೆ ಹೂರ ಬಣ್ಣಾ
ಕಲ್ಪನೆ — ಕಾಣ್ಕೆ ಹೂರ ಬಣ್ಣಾ —
ಕಂಡೀರದುದೇ ತ್ರಿಲೋಕಯಾನಾ
ಮೃದುಲೀಲೆ ತಣ್ಣಾ
ಇದು ಬರಿ — ಚಿತ್ರಗಳೆಲ್ಲಾ ಬಣ್ಣಾ.

ಅನಿಬಂಧ

ಬಾರವ್ವ ಬೆಳ್ಗುದಿಂಗಳೇ । ನಮ್ಮೂರ ಹನಿಬಂಧ

ಹೊಂಗೇದತ್ತಿ ಬಂದ್ಯವತ್ತ ಬೆಳ್ಳಕೆರ ನಾಡಿ ನಿಂದ್ಯವತ್ತ
ಕಾಮನೂರ ಹೊಳೆಯಿಂದ ಕುಂತು ನಿಂತು ಬರುತಿದ್ದ
ಕಾಮನ್ಯಾರೇ ಕಾಣಾದೋರು ತಿಂಗಳ್ನ್ಯಾರೇ ಕಾಣಾದೋರು

ತಿಂಗಳು ತಿಂಗಳೀಗೆ ತಿಂಗಳು ಮಾವನ ಪೂಜೆ
ಗರುಡ್ಯನ ಪೂಜೆ ಘನಪೂಜೆ । ಕೋಲು ಮುಲ್ಲಗೆ ಕೋ
ಗರುಡನ್ಯ ಪೂಜೆ ಘನಪೂಜೆ ತಿಂಗಳ ಮಾವ
ನಿನ ಪೂಜೆ ಗಂಗೆ ದಿನದಾಗೆ । ಕೋಲು ಮುಲ್ಲಗೆ ಕೋ
ತಿಂಗಳು ಮಾವನ
ತುಂಬೆ ಹೂವಿನ ಗುಡಾಳ್ಗಿ । ಕೋಲು ಮುಲ್ಲಗೆ ಕೋ
ತುಂಬೆ ಹೂವಿನ ಗುಡಾಳ್ಗಿ. ತಿಂಗಳ ಮಾವ
ಮೀವ ನೆಂದರೆ ತಾವಿಲ್ಲ । ಕೋಲು ಮುಲ್ಲಗೆ ಕೋ
ಮೀವ ನೆಂದರೆ ತಾವಿಲ್ಲ ತಿಂಗಳ ಮಾವ
ಹೋಗವ್ವ ಮುಗಿಲ ತೆರೆದಾಗ ಕೋಲು ಮುಲ್ಲಗೆ ಕೋ
ಮೀವನೆಂದರೆ ತಾವಿಲ್ಲ ತಿಂಗಳ ಮಾವ
ಹೋಗವ್ವ ಮುಗಿಲ ತೆರೆವಾಗ.

ಅತ್ತಿಂದು ಮರದ ಕಿತ್ತು ನೆಡುವ್ಯೋರುಂಟೆ
ಅತ್ತಿಲ್ಲದ ಮನೆಗೆ ಗೌರಿಯ । ಕೊಟ್ಟರೆ
ಮುತ್ತೈ ಇನ್ನಾರು ಕಳ್ಕೋರು.
ಅತ್ತೆಯು ನಾನೆ ಮಾವನು ನಾನೆ
ಮುತ್ತೈ ಸೋಬಲಕ್ಕೆ ಗೌರಿಗೆ ನಾನೇ
ಗೌರಿಯು ನಮ್ಮೇಗೆ ಕೊಡಬೇಕು.
ಬಿಲದ ಮರದ ಬಿಲ್ಲ ನೆಡುವ್ಯೋರುಂಟೆ
ಮಾವಿಲ್ಲದ ಮನೆಗೆ ಗೌರಿಯ । ಕೊಟ್ಟರೆ
ಬಂದು ಇನ್ನಾರು ಕಳುಸೋರು.
ಮಾವನು ನಾನೆ ಭಾವನು ನಾನೇ
ಮುತ್ತೈ ಸೋಬಲಕ್ಕೆ ಗೌರಿಗೆ ನಾನೇ
ಗೌರಿಯು ನಮ್ಮೇಗೆ ಕೊಡಬೇಕು.
ಹತ್ತು ವರುಷದ ಬಾಲೆ. ಚಿಕ್ಕವಳು ನಮ್ಮ ಗೌರಿ
ದೀವಾಗ ಬೆಳಗೋದ ಹಿರಿಯವ್ಳು । ನಮ್ಮ ಗೌರಿ
ನೆಂಗೆ ಗೌರಿಯ ಕೊಡಬೇಕು.
ಹತ್ತು ವರುಷದ ಬಾಲೆ ಚಿಕ್ಕವಳಾದರೆ
ದೀವಾಗ ಬೆಳಗೋದ ಕಲುಸುವೆ ನಾನೇ
ಗೌರಿಯ ನಮ್ಮೀಗೆ ಕೊಡಬೇಕು.
ಭೂಕುಂಬಕೊ ಆಕಾಶ ಕುಂಬಕೊ, ದಾಕ್ಷ್ಯರೋ ಚಪ್ಪರದ

ದೇವನವೆಂಥ ಹೊಡ್ಡಸ್ತ್ರೀಕೆ ಬಿಟ್ಟ ನನ್ನ ಕೊಂಡ ಮ್ಯಾಲ
ನನ್ನ ಹೊರತು ಇನ್ನೆನ್ನಂದು ಹೆಣ್ಣ ಮ್ಯಾಲಿಲ್ಲ ಇವನ ಖ್ಯಾಲ ||
ರಾಮರಾಮನಂತೆ ಹೊಗಳಿ ಹೊಗಳುತಾರೆ ರಾಮನೇನು ಶುದ್ಧ
ಅಗಸ ಮಾತ ಕೇಳಿ ತನ್ನ ಸತಿಯನು ಅಡವಿಗೆ ಅಟ್ಟಿದ್ದ ||
ಬ್ರಹ್ಮದೇವನಂತೆ ಭಾಳ ಅರಿಯನಂತೆ ಬುದ್ಧಿ ಹಿತ ಅವಗ
ಮಗಳಿಗೆ ಹೆಂಡತಿ ಮಾಡ್ಯಾನ ಪ್ರೀತಿಂದು ಬಗಿ ಮಾಡ್ಯಾಂಗ ||
ಹೇಳಬ್ಯಾಡ ಶಿವನೇಳಿಗೆ ಗೌರಿಯು ಹೋಳು ಗೋಳಾಡಿ ಬಿಟ್ಟ
ಹೇಳದೆ ಕೇಳದೆ ತನ್ನ ಜಟೆಯೊಳು ಗಂಗೆಯ ತಂದಿಟ್ಟ ||
ಕೃಷ್ಣನವಂತು ಬಲೋದಿತನವ ನೋಡಬೇಕು ಹೆಂಡಿರವಗ
ಒಬ್ಬರಿಗಿಂತ ಹೆಚ್ಚು ಜನ ಅತಿದೀಕ್ಷ ಹ್ಯಾಗಂತು ಹಾಗ ||

ಅಪ್ಪಾದಿಲ್ಲುಂಬೋರು ಬೀದಿಲ್ಲಿ ಬಿದ್ದೋರು
ತಾಯ್ಗೆ ದೇವೆ ಇಡದು ತಿರುಕ್ಕೊಳ್ಳಿ
ತಾಯ್ಗೆ ದೇವೆ ಇಡದು ತಿರುಕ್ಕೊಳ್ಳಿ ಜಂಗಮಗೆ
ಹೆಂಗೆ ಕಿಂಕಾರ ಮನಸಾಗ.

ಜಿಕ್ಕನಾಕ್ಕನಾಕ್ಕ ಜಿಕ್ಕ ಜಿಕ್ಕನಾಕ್ಕನಾಕ್ಕ ಜಿಕ್ಕ
ಜಿಕ್ಕನಾಕ್ಕನಾಕ್ಕ ಜಿಕ್ಕ ಜಿಕ್ಕನಾಕ್ಕನಾ ....
ಬಿಲ್ಲುಬಾಣ ಹೂಡಿಕೊಂಡು, ಬಿಳ್ಳಿಂತು ಕುದುರೆನೇರಿಕೊಂಡು
ಹೋರಾಡಿ ಬರುತಾನೆ ರಣಧೀರ | ಮೋಜುಗಾರ
ಮೊಗದಿಂತು ರಂಗನಾಥ ಬೇಟೆಗಾರ ...
ಸಾಗರ ತೋಳ್ಳ ಕೆಂಪಡಂತೆ, ರಾಮರು ಬಿಟ್ಟ ಬಾಣದಂತೆ
ಹೋರಾಡಿ ಬರುತಾನೆ ರಣಧೀರ | ಮೋಜುಗಾರ
ಮೊಗದಿಂತು ರಂಗನಾಥ, ಬೇಟೆಗಾರ ....
ಮುತ್ತಿನ ಹಟ್ಟ ಬಿಚ್ಚು ಬಾಳ ಹೆಂಡಕತ್ತಿ ಹಿಡಿದುಂಡಿ
ನಿಂದಂಥ ಬಾಜಿ ಮೊಗ್ಗ ಅರಳ್ಯಾವೆ | ಹಿಡಿದುಂಡಿ
ಮೊಗದಿಂತು ರಂಗನಾಥ ಬರುವಾಗ ...
ಮಂದಹ್ಯಾಸ/ನಗ್ಗಿಯು ಬರುವಾಗ ಮಾತೆಲ್ಲ ಹುಮ್ಮಿಂದು
ದಿಲ್ಲೆ ಹರು ಹುಲ್ಲೆ ಮರಿ ಜೋಕೆಯಾಗಿ | ಬರುವಾಗ
ಮಂದಹ್ಯಾಸ ಮರೆ ರಂಗನಾಥ ...
ಜೀವನವೆಲ್ಲಾ ಬೇವು ಬೆಲ್ಲ ಬಲ್ಲವರೆಲ್ಲ ನಂಬಿದವರಲ್ಲ
ಕಷ್ಟ ಸುಖ ನಿಂಕರಿ ನಾಮವೆಲ್ಲ | ಬೆಕ್ಕದಿಂದು
ಮಲ್ಲಿಯನ್ನ ದಂಡವಿದ್ರೆ ಭಯವಿಲ್ಲ

ಸುವ್ವನಾರೀ,......... ಸುವ್ವಾರೀ.........
ಆಷಾಢಮಾಸ ಬಂದಿತವ್ವ
ಖಾಸಾ ಅಣ್ಣಾ ಬರಲಿಲ್ಲ
ಎಷ್ಟು ಕಾಂಯಲಿ ಅಣ್ಣನ ದಾರಿ
ಖಾಸಾ ಅಣ್ಣಾ ಬರಲಿಲ್ಲ...
ಹೊತ್ತು ಮುಳುಗೋ ವ್ಯಾಳ್ಯಾನಾಗ
ದೀಪ ಹಚ್ಚೋ ಮನೀ ಒಳಗ
ಅಣ್ಣಾ ಕರೆಯಾಕ ಬರಲಿಲ್ಲ ನಾರೀ,
... ಸುವ್ವನಾರೀ,.. ಸುವ್ವಾರೀ...
ರೊಟ್ಟಿ ಬುತ್ತಿ ಕಟ್ಟಿಕೊಂಡು
ಕುಕ್ಷೀ ಒಳಗ ಇಟ್ಟುಕೊಂಡು
ಹೊಂಟಿನ್ನಿ ನಾನು ತವರೀಗೆ ಇಂದು,
...ಸುವ್ವನಾರೀ,... ಸುವ್ವಾರೀ....

ಕುದುರೆಯು ತಂದಿದ್ವಿ, ಜೀನಾವ ಬಿಗಿದಿವಿ
ಬರಬೇಕು ತಂಗಿ ಮದುವೇಗೆ ॥

ಅಂಗಳ್ಳ ಗುಡಿಸೋಕಿಲ್ಲ, ಗಂಗಳ್ಳ ತೊಳ್ಯಂವರೋಕಿ
ಹೆಂಗೆ ಬರಲಣ್ಣಾ ಮದುವೇಗೆ ?
ಅಂಗಳ್ಳಕ್ಕೆ ಆಳ್ಳಿಡುವಿ ಗಂಗಳ್ಳಕ್ಕೆ ತೊತ್ತಿಡುವಿ
ಬರಬೇಕು ತಂಗಿ ಮದುವೇಗೆ.

ಬೇಸಿಗೆ ಬಿಸಿಲಣ್ಣಾ, ಕೂಸಿನ ತಾಯಣ್ಣಾ
ಹೆಂಗೆ ಬರಲಣ್ಣಾ ಮದುವೇಗೆ ?
ಕೂಸಿನ ತಾಯಿಗೆ ಪಲ್ಲಕ್ಕಿ ತರಿಸುವೆ
ಬರಬೇಕು ತಂಗಿ ಮದುವೇಗೆ.

ಮಳೆಯಂಕ ಬಂದೀತು, ಹೊಳೆಯಂಕ ತುಂಬಿ
ಹೆಂಗೆ ಬರಲಣ್ಣಾ ಮದುವೇಗೆ ?
ಚಿನ್ನದ ಹರಿಗೋಲ್ಗೆ, ರನ್ನದ ಹುಟ್ಟಾ
ಜೋಕಾಗಿ ನಿನ್ನ ಕರೆದೊಯ್ತೆ.

ರಚ್ಚೆಯನ ಮಗುವಣ್ಣಾ, ರಗಳೆಂಯು ಮಾಡೀತು
ಹೊಂಗೆ ಬರಲಣ್ಣ ಮುಡುವೇನೆ ?
ರಚ್ಚೆಯನ ಮಗುವಿಗೆ ರನ್ನದ ಕಾಲ್ಗಡಗ
ತೊಡಿಸುವೆ ತಂಗಿ ಬಾರಬೇಕು.

ಅಪ್ಪ ಇದ್ದರೆ ಎನ್ನ ಒಪ್ಪಾಗಿ ಕರೆದೊಯ್ಯ
ಅಪ್ಪ ಇಲ್ಲದ ಮನೆಂತೊಳ್ಳ
ಅಪ್ಪನ ಜಾಗ್ವಲ್ಲಿ ನಾನಿಲ್ಲವೇನವ್ವ
ಅಣ್ಣನ ಮನೆಗೆ ಬರಬೇಕು

ಅವ್ವ ಇದ್ದರೆ ಎನ್ನ ಸುಮ್ಮನೆ ಕಳುಹೋಳ್ಳ
ಅವ್ವ ಇಲ್ಲದ ಮನೆಂತೊಳ್ಳ
ಅವ್ವನ ಜಾಗ್ವಲ್ಲಿ ನೀನಿಲ್ಲವೇನವ್ವ
ಬರಬೇಕು ತಂಗಿ ಬರಬೇಕು.

ಹುತ್ತರಾಯು ಬಂದಾನು ಹೋದಾನ ಮಂದಾಳ್ಯನು
ಅವನಿಗ ನನ್ನನ್ನು ಬಿಡಲಾರ ;
ಬಂದಾರ ಬಂದೇನು ಅಂಗಳದಾಗ ನಿಂದೇನು
ಕಣ್ಣಾಗೆ ನೀರೆ ಸುರಿದೇನು

ಕೆಂಪು ಕಾಳಿಂಗನ ಮೇಲೆ ನಿಂತುಕೊಂಡನು ಮ
ಹೊತ್ತುಕೊಂಡು ಕೊಡವ । ಗೊಲ್ಲರ ಬಾಲೆ ||

ಕಬ್ಬಿನ ಓಲೆ ಮೊಗದೋಲೆ ಮುತ್ತಿನ ಸೆರಗಾ ಬಿಡ
ಸುಮ್ಮನೆ ಸೆರಗಾ ಬಿಡೋ । ರಂಗಯ್ಯ ರಂಗ

ಎತ್ತು ಎಮ್ಮೆಗೂ ಸುಂಕ · ಎಲೆ ಅಡಕೇಗೂ ಸುಂಕ
ತುಪ್ಪಕ್ಕೆ ಸುಂಕವೇನೇ ? ಗೊಲ್ಲರ ಬಾಲೆ ||

ಅಣ್ಣನೆ ಸೆರಗಾ ಬಿಡೋ ಅಣ್ಣಂದ್ರೆ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ । ರಂಗಯ್ಯ ರಂಗ ||
ಅಣ್ಣನೂ ನಾನಲ್ಲ , ಅಣ್ಣಂದ್ರೂ ನಾನಲ್ಲ
ಅಣ್ಣನ ಮೈದುನ ಕಣೇ । ಗೊಲ್ಲರ ಬಾಲೆ ||

ತಮ್ಮನೆ ಸೆರಗಾ ಬಿಡೋ ತಮ್ಮಂದ್ರೆ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ । ರಂಗಯ್ಯ ರಂಗ
ತಮ್ಮನೂ ನಾನಲ್ಲ , ತಮ್ಮಂದ್ರೂ ನಾನಲ್ಲ
ತಮ್ಮನ ಭಾವ ಕಣೇ । ಗೊಲ್ಲರ ಬಾಲೆ ||

ಗಂಡನೇ ಸೆರಗಾ ಬಿಡೋ,
ಭಂಡನೇ ಸೆರಗಾ ಬಿಡೋ!
ಸುಮ್ಮನೆ ಸೆರಗಾ ಬಿಡೋ,
ರಂಗಯ್ಯ ರಂಗ ॥
ಗಂಡನೂ ನಾನಲ್ಲ, ಭಂಡನೂ ನಾನಲ್ಲ
ಭಂಡರ ಗಂಡ ಕಣೋ, ಗೊಲ್ಲರ ಬಾಲ ॥

ಗಂಡನೇ ಸೆರಗಾ ಬಿಡೋ,
ಗಂಡಯ್ಯ ಸೆರಗಾ ಬಿಡೋ
ಸುಮ್ಮನೆ ಸೆರಗಾ ಬಿಡೋ, ಜಾಣರ ಜಾಣ ॥
ಹಾದಿಲ್ಲಿಲ್ಲಿ ನನಾಡ್ಸಗೆ, ಬೀದಿಲ್ಲಿಲ್ಲಿ ನನಾಡ್ಸಗೋ
ನಾನೇ ನಿನ್ನಂಡ ಕಣೋ, ಜಾಣೆಯರ ಜಾಣೆ ॥

ಕಬ್ಬಿನ ಬಿಲ್ಲ ಮಾಗದೋನೇ,
ಮುತ್ತಿನ ಸೆರಗಾ ಹಿಡಿದೋನೇ
ನೀನೇ ನನ್ನಂಡ ಕಣೋ
ರಂಗಯ್ಯ ರಂಗ ॥

ಅದು ಬೇಕ್ವ ಇದು ಬೇಕ್ವವ್ರೋ ನಂಜುಂಡ
ನಂದ್ಯಾಲ ಗಿರಿ ಬೇಕ್ವವ್ರೋ
ನಂದ್ಯಾಲ ಗಿರಿ ಬೆಟ್ಟಕೆ ನಂಜುಂಡ ದಾಸ್ವಾಳ್ದ ಗಿಡ ಹುಟ್ಟೈತೋ
ದಾಸ್ವಾಳ ಹೂವ ತಂದು ದಾದ್ಯಾಗೆ ಪೂಜೆ ಮಾಡಿ
ಹೂ ಬಾಡಿ ಹೋಯ್ತಲ್ಲೋ ಎಷ್ಟು ಬಾರಯ್ಯ ಮನೆಗೆ
ಕರನಾಡ ಸೀಮೆಯವನೇ ಕಪ್ಪೂರ ವೀಳ್ಯದವನೇ
ನಿನ ಕಡೆಗೆ ತಪ್ಪಿದ್ಯಾಗೇ ಪರದೇಶಿ ನಾನಾದೆನೋ
ಪರದೇಶಿ ನಾನಾದೆನೋ ಪರಪುಂಚ ನನಗ್ಯಾತಕೋ
ಪರಪುಂಚ ನನಗ್ಯಾತಕೋ ನನ ಚಿಂತೆ ನಿನಗ್ಯಾತಕೋ
ಸ್ವಾತಿಯಂಥ ಮುತ್ತ ಹುಯ್ಯ್ತೋ ಸುಂಪಂಗಿ ಕೆರೆ ತುಂಬಿತೋ
ಸುಂಪುಂಗಿ ಕೆರೆಯ ಕೆಳಗೆ ಕೆಂಬಚ್ಚಿ ನೆಲ್ಲು ಬತ್ತ್ಹಿ.
ಕಾಲದಿದು ಕಬ್ಬನೆತ್ತು ಬೆಂಬಿಡಿದು ನೀರ ಹೊತ್ತು
ಕೊಳ್ಳ ನೋಡಿ ಬಾವಿ ತೆಗೆಂಯೋ ಗಿಡ ನೋಡಿ ಎಣ್ಣೆ ತೆಗೆಂಯೋ
ಮೊದಲ ಸೀಮೆಯವನೇ ಮುತ್ತಿನ ದಾರದವನೇ
ಬೆಳಗಲ ಸೀಮೆದವನೇ ಬಂಗಲಾದ ಹುಡುದವನೇ
ತಾಯಿತಂಗೀನ ಮರ ಮೇಲೆ ನಂದ್ಯಾಳನ ಗುಡಿಯೋ
ಹದಿನಾಲ್ಕು ಮರ ಬೆಟ್ಟನಾ ಹದಿನಾಲ್ಕು ಗಿರಿ ಬೆಟ್ಟನಾ ||

ಮೂಡಲ ಕುಣಿಗಲ ಕೆರೆ ನೋಡೋಕೊಂದೈಭೋಗ
ಮೂಡಿ ಬರ್ತಾನೆ ಚಂದಿರ್ಮ | ತಾನಂದನೋ
ಅಂತಿಂತ್ಹರಿಯ ನೋಡೋಕೆ ಎಂಥಾ ಕುಣಿಗಲ ಕೆರೆ
ಸಂತೆ ಹಾದೀಲಿ ಕಲುಕಟ್ಟೆ | ತಾನಂದನೋ.
ಬಾಳೆಯ ಹಣ್ಣಿನಂತೆ ಬಾಗಿದೆ ಕುಣಿಗಲ ಕೆರೆ
ಬಾವ ತಂದಾನೆ ಬಣ್ಣದ ಸೀರೆ | ತಾನಂದನೋ..
ನಿಂಬೆಯ ಹಣ್ಣಿನಂತೆ ತುಂಬಿದೆ ಕುಣಿಗಲ ಕೆರೆ
ಅಂದಾ ನೋಡಲು ಶಿವ ಬಂದ್ರು | ತಾನಂದನೋ...
ಅಂದಾನೆ ನೋಡಲು ಶಿವ ಬಂದ್ರು ಶಿವನಿಗೆ
ಕಬ್ಬಕ್ಕಿ ಬಾಯ ಬಿಡುತಾವೆ
ಹಾಕೋಕೊಂಡಾರು ಗೋಲು ನೂಕೋಕೊಂಡಾರು ಗೋಲು
ಜೊಬ್ಬೆ ಹೊಡೆದಾವು ಬಾಳೆಮೀನು
ಜೊಬ್ಬೇನೆ ಹೊಡೆದಾವು ಬಾಳೆಮೀನು ಕೆರೆಯಾಗೆ
ಗುಬ್ಬಿ ಸಾರಂಗ ನಗುತಾವೆ.

ನಾವ್ ಕೈಲಾಸಕ್ ಹೋಗ್ತೇವ್ರೀ
ನೀವ್ ಬೇಕಾದ್ರೀಗ ಹೊರಟ್ಬಹುದ್ರೀ
ಹೇಳ್ಲಿಲ್ಲ ಕೇಳ್ಲಿಲ್ಲ ಅಂತ ನಿಂದೀರಿ
ಮುಂದಕ್ಕಿಂತಾ ಸಮಯ ನಿಮ್ಗೆ ದೊರಕೋದಿಲ್ರೀ ||

ಹಿಂದಕ್ಕೊಬ್ಬ ತುಕಾರಾಂ ಸಾಧು ಕರೆಕರೆದ್ಹೋದಾನ್ರೀ
ಮಂದಜನಮನಕ್ಕದು ತಿಳಿಯದ್ಹೋಯಿತ್ರೀ |
ಮುಂದಾ ಜೀವರೆಂದೀಗಾದ್ರೂ ಹಿಂಗೇ ಸ್ವೈರೀ
ಕುಂದು ಕೊರತೆ ಸಂಸಾರಕ್ಕೆಳಗೆ ಬಿದ್ದ್ಬಿಟ್ಟ್ಯಾರಂತ್ರೀ ||
ಪುರಾಣಶಾಸ್ತ್ರವೆಂಬೋ ಕುತ್ರ ಕುಣಿಯುತ್ತಾವಲ್ರೀ
ವರವೇದಾಗಮ ಪಾಲ್ಕಿ ಮೇಲೆ ನೆಗೆನೆಗೆದ್ಹತ್ತ್ಯಾರ್ರೀ
ತರ್ಕಮೀಮಾಂಸೆಂಬೋ ಛತ್ರಚಾಮರ ಧರಿಸೀರಿ
ಭಕ್ತರು ಮುಕ್ತರು ಎಂಬೋ ಹೆಚ್ಚಿನ ಫೌಜನ ಮೆರೆಯೀರಿ ||

ಶುದ್ಧಜ್ಞಾನವೆಂಬೀ ಭಕ್ತದೇಶ ನೋಡಿರಿ
ಶುದ್ಧಜ್ಞಾನವೆಂಬೋ ಅಮರ ಬ್ರಹ್ಮನ ಬರೆಯಿರಿ
ಇದ್ದದ್ರೊಳಗೆ ನಿಮ್ಮ ಬುದ್ಧಿ ಈಗಾತ್ತಿದ್ದೀರಿ
ಕಡ್ಡ ಗುಣದ ಮೋಕ್ಷ ಪಡೆದರೆ ಸಿಕ್ಕೀತೆಂದೀರಿ ||

ಕೋಡಿಹಾಕುರಿಗೀಪುರಿ ಭಾಗ್ಯ ಬಂದೀತ್ವ್ಯಂಗ್ರೀ
ಬಂದವ್ರೆಲ್ಲ ಬರದವರೊಂದಿಗೆ ಸಾಂಜೀದಾವ್ಯಂಗ್ರೀ
ಸದ್ಯರ್ ತೊಂದರೆ ನಮಗೂ ನಿಮಗೂ ಇದರಿಂದ್ ಬಂದಿತ್ತಿ
ಎಂಥ ತೊಂದ್ರೆ ಬಂದ್ರೂ ನಾವು ಬಿಡ್ಯೋರಲ್ರೀ . ||
ರೊಟ್ಟಿನ ರೊಕ್ಕ ಇದ್ದವ್ರೆಲ್ಲಾ ಅತ್ಲಾಗ್ಹೋಗೀಗೀರಿ
ಕಟ್ಟಾ ವೆಟ್ಟ ಧನಗಳಗೆಲ್ಲ ಕಿಟ್ಟ್ಯ ಹುಟ್ಟೀರಿ
ಶಿವಾರೂಢ ವೆಂಬೋ ಮೋಚರೆ ಹತ್ತ್ಯೋರೆ ಹತ್ತೀರಿ
ಸದ್ಯಕ ಪ್ರೈವರ್ ಚೆನ್ನವೀರನ ಮಜಿಕ್ ಕಾಯಿರಿ. ||

ಅಕ್ರೆಗಣ್ಣಾ ಮುಕ್ರುಮುದ್ದೆ ಮೂಗ ಸುಟ್ಟೆ ಮುರೀತಿದ್ದೆ
ಗೀರ ಸುಟ್ಟೆ ಗಿರೀತಿದ್ದೆ ಗಿಲಗಿಲ ಗೆಜ್ಜೆ ಸಪ್ಪಳದಾಂಗೆ
ತಾ ಧಿಮ್ಮಿ ತಾ ಧಿಮ್ಮಿ ತಕ ತಾಳ ಮೃದಂಗದ ಗೆಳತಿ, ಗೆಳತಿ...
ವಿಶ್ವಕ್ಕೆ, ವಿಸ್ಮಿಳ್ಳ ಕೊಕ್ಕನ್ಹಂಗೆ ಕೆಂಗೊಕ್ಕ ಹಾರುತೀನಿ
ತಾನ ಮಾನ ಬರೀತೀನಿ ಊಗಲಬತ್ತಿ ಹುಟ್ಟಿದ್ದಾಂಗೆ
ಚೆಟ್ಟಾಲ ಚೆಂದದಾಂಗೆ ಚೆಟಕ್ಷೇಂತ ಬೆಳ್ಳಿ ಬೆಳ್ಳಕ್ಕಿ ಆಗಿ ನೀ
ಎಲ್ಲಿಗೆ ಹೊಂಟಿರುವೆ ನಡಿಂತೀ ನಡಿಯೇ....
ನೀ ಕುಕುಮಿರೆ ಗೊಂಬೆ ಹಾಂಗ ನೀ ಂಮಕ ನಿಂತಿರುವೆ
ನಾಂಬ್ಬುಬ್ಬ ಮಾತಾಡೇ ಮನಸ್ಸು ಮುರಿಬ್ಯಾಡೇ
ಊಗಲಬತ್ತಿ ಹುಟ್ಟಿದಾಂಗೆ

ಕೆ.ಎಸ್. ನಿಸಾರ್ ಅಹಮದ್

ಸುಗ್ಗದ ಸಿರಿ ಬಂತು ನಮ್ಮೂರಿಗೆ
ಸುಗ್ಗಿಯು ಸೊಬಗಿಂದ ನಮ್ಮೂರಿಗೆ.

ಎತ್ತೆತ್ತಲೆತ್ತಲೂ ತೆನೆ ಚೆಲ್ಲಿ ಹಾಲ
ಚಿಲಿಪಿಲಿಗುಟ್ಟ್ಯಾವೋ ಹಕ್ಕಿಯು ಮೇಳ
ಕಣ ಕಣದಲ್ಲೂ ಬಂಗಾರ ಜಾಲ
ಬೆರಗಾಗಿ ನಿಂತಿತೋ ಚಲಿಸದೆ ಕಾಲ.

ಅರಿಶಿನ ಕುಂಕುಮ ಮೈಗೆಲ್ಲ ಮೆತ್ತಿ
ಹಸಿರುಟ್ಟ ನೆಲದವ್ವ ಮದುವಣಗಿತ್ತಿ
ತೊಟ್ಟರೆ ಜರತಾರಿ ಮರಗಳ ನೆತ್ತಿ—
ದಿಬ್ಬಣ ಹೊರಟ್ಯಾವೋ ಪಾತರಗಿತ್ತಿ.

ಕೊಟ್ಟಿಗೆ ತುಂಬಾ ಕರುಗಳ ಅಂಬಾ
ಆಕಳ ಕೆಚ್ಚಲು ಅಮೃತದ ಕುಂಭ!
ಹಟ್ಟಿಯು ಬೆಳಗಿದೆ ತುಂಬಿದ ಚೀಲ
ತೀರಿತೋ ಶಿವನೇ, ಬಡವರ ಸಾಲ.

ಒತ್ತಾವಡಿ ಮುಂದಿಗೆ ಒಕ್ಕಪ್ಪರವೆದ್ದು
ಕೇಳಿತೋ ಊರೆಲ್ಲಾ-ಗುಜುಗುಜು ಸದ್ದು;
ಬೆಳದಿಂಗಳಿರುಳೆಲ್ಲ ಬಂತುಲಾಟವಿದ್ದು—
ಗೌಡರೇ ನೋಡೋಕೆ ಬಂದಾರೋ ಖುದ್ದು.

ಹೂ ಕಾಯಿ ನೀಡೇವು ಬೀಕುವನುಳಿಸಿ
ಬಾರಮ್ಮ ಮಾರಮ್ಮ, ಬಾ ಗೌರಿ ಹೊರಸಿ;
ಊರಾಚೆ ದನುವು; ಬಾ ನಮ್ಮ ಹರಸಿ —
ಶರಣು ಶರಣೆಂಬೆವು ತುಂಗೆಯ ನಮಿಸಿ.

ಇನ್ನೆಲ್ಲಿ ನೋಡಲಿಂಥ ಬಳ್ಳಿಯು ಬಳ್ಳಿಗಾರ ನೆಟ್ಟ
ಹೋಗಿಹಂತಲ್ಲ ನನ್ನ ತವರೀಗೆ ॥

ನಿನ್ನ ತವರೂರಾ ನಾನೇನು ಬಲ್ಲೆನು
ನೆತ್ತಿಲ್ಲಿ ಹವಳ ಗುಂಡಿಲ್ಲಿ ಎಲೆ ಬಾಲೆ
ತೋರಿಸು ತವರೂರ ದಾರಿಯ.

ಬಾಳೆಯು ಬಲಕಟ್ಟು ಸೀಗೆಯು ಎಡಕಟ್ಟು
ನಾಗಸಂಪಿಗಿ ನಡುವೆಯು ನಡೆದಾಳೆ
ಅದೆ ಕಾಣೋ ನನ್ನ ತವರೂರು.

ಆನೆ ಆಡುತಾವೆ, ಕಾಳಿ ತಿರುಗುತಾವೆ
ನವಿಲು ಸಾರಂಗ ನಗುತಾವೆ ಬಳ್ಳಿಗಾರ
ಅದೆ ಕಾಣೋ ನನ್ನ ತವರೂರು.

ಹಕ್ಕಿ ಹಾಡುತಾವೆ,
ಕೊಳದಲ್ಲಿ ತಾವರೆ ಗರಿ ಬಿಚ್ಚು ನಗುತಾವೆ
ಅದೆ ಕಾಣೋ ನನ್ನ ತವರೂರು.

ಕುಂಬಾರನ ಮನೆ ಕಾಣೋ ಕಂಬಾರನ ಕಪ ಕಾಣೋ
ಇಂತಾ ಹೋಲೆವರದು ಗಿಳಿ ಕಾಣೋ ಬಳೆಗಾರ
ಅದೆ ಕಾಣೋ ನನ್ನ ತವರೂರು.

ಮುತ್ತೈದೆ ಹುಬ್ಬೆಲಿ ಮುತ್ತಿನ ಚಪ್ಪರ ಹೂಡಿ
ನಚ್ಚನಡುವೆ ತುಗಡೆಂಯನಾಡ್ಯೆ ಬಳೆಗಾರ
ಅವಳೇ ಕಾಣಿಂಯ್ಯ ನನ್ನ ಹಡೆದವ್ವ.

ಅಚ್ಚ ಕೆಂಪು ಬಳೆ ಕರಿಯ ಪಚ್ಚ ಬಳೆ
ನನ್ನ ಹಡೆದವ್ವಗೆ ಬಲು ಆಸೆ ಬಳೆಗಾರ
ಕೊಂಡೊಯ್ಯೊ ನನ್ನ ತವರೀಗೆ.

ಬಾಣಂತಿ ಅಪ್ಪಣ್ಣ ಬಾಗಿಲಯ ಚಪ್ಪರ ಹೂಡಿ
ಬಾಗಿ ಬಾರಯ್ಯ ಬಳೆಗಾರ ನಮ್ಮ ನೆಂಟ
ಬಾಣಂತಿಗೆ ಬಳೆಯ ತೊಡು ಬಾರೋ.

ಯವ್ವ ಯವ್ವ ನಾ ಹೆಂಗೆ ಮಾಡಲೆ,
ಇಂಥಾವ್ನ ಕೂಡೆ ನಾ ಹೆಂಗೆ ಬಾಳುವೆ ಮಾಡಲೆ...
ಉಣ್ಣೋಂದ್ರೆ ನನ ಗಂಡ ಸಿಟ್ಟುತಾನೆ ಸೀನುತಾನೆ,
ತೊಂಡೆಕಾಯಿನ್ಹಂಗೆ ಉಂಡೆ ಮಾಡಿ ನುಂಗುತಾನೆ...
ಬಾನಾಂದ್ರೆ ನನ ಗಂಡ ಬಾಗುತಾನೆ ಬಳುಕುತಾನೆ,
ಬಾಳೆಕಾಯಿನ್ಹಂಗೆ ಗುಕ್ಕ ಮಾಡಿ ನುಂಗುತಾನೆ...
ಹಿತ್ತಲೀಗೆ ಹೋಗಲಾರ, ಹಿಡಿ ಹುಲ್ಲ ತರಲಾರ,
ಕೇರಿ ಕುಂಬಾರರ ಮನೆಗೆ ಕುಕ್ಕ ಹಾಕ್ಕೊಂಡು ಹೋಗುತಾನೆ..
ಹೊರೀಗೆ ಹೋಗಲಾರ, ಹೊರೆ ಹುಲ್ಲ ತರಲಾರ,
ಕುರಿ ಕುಂಬಾರರ ಮನೆಗೆ ಕುಂಟ್ಕೊಂಡ ಕುಂಟ್ಕೊಂಡ್ಹೋಗುತಾನೆ.
ಹೊಲದ್ಹತ್ರ ಹೋಗಲಾರ, ಬೇಲಿಗೀಲಿ ನೋಡಲಾರ,
ಕಡೆಯ ಮಜ್ಜಿಗೆನೆಲ್ಲಾ ನೀನೇ ಕುಡಿದೆ ಎನ್ನುತಾನೆ...
ಮೂರು ಮುದ್ದೆ ಉಣ್ಣುತಾನೆ, ಮೂಲೀಲಿ ಮುದುರುತಾನೆ,
ಊರ ಮುಂದ್ಕೆ ಹೋಗಂದ್ರೆ ಊರಗೋಲ ಬೇಡುತಾನೆ...
ಆರು ಮುದ್ದೆ ಮುಕ್ಕುತಾನೆ, ಅಲ್ಲಲ್ಲೆ ಕೂರುತಾನೆ,
ಆಡು ಹೊಡ್ಕೊಂಡು ಹೋಗಂದ್ರೆ ಗೋಳಾಡ್ಕೊಂಡಳುತಾನೆ.....
..., ಎಬ್ಬಂಥಸೆ, ಗದ್ದೆ ಗೋವೆ ಗೋಣಾ, ಯವ್ವ...
ಈ ಮುಕ್ಕನ ಮೂಳನ ಕಿವಿದೂಕಲಂತೆ ಕೆಪ್ಪಂಥ ಗಾನ,
ಎಬ್ಬಂಥಸೆ, ಗದ್ದೆ ಗೋವೆ ಗೋಣಾ.

ಶ್ರಾವಣಾ.

ಬೇಂದ್ರೆ

ಶ್ರಾವಣಾ ಬಂತು ಕಾಡಿಗೆ | ಬಂತು ನಾಡಿಗೆ.
ಬಂತು ಬೀಡಿಗೆ | ಶ್ರಾವಣಾ ಬಂತು |
ಕಡಲಿಗೆ ಬಂತು ಶ್ರಾವಣಾ | ಕುಣಿದ್ಹಾಂಗ ರಾವಣಾ
ಕುಣಿದಾವ ಗಾಳಿ | ಭೈರವನ ರೂಪತಾಳಿ |

ಶ್ರಾವಣಾ ಬಂತು ಘಟ್ಟಕ್ಕ | ರಾಜ್ಯದಘಟ್ಟಕ್ಕ
ಬಾನ ಮಟ್ಟಕ್ಕ
ಏರ್‍ಯಾವ ಮುಗಿಲು | ರವಿ ಕಾಣೆ ಹಾಡೆಹಗಲು

ಶ್ರಾವಣಾ ಬಂತು ಹೊಳಿಗಳಿಗೆ | ಅದೇ ಶುಭಗಳಿಗೆ
ಹೊಳಿಗೆ ಮತ್ತ ಮಳಿಗೆ
ಆಗ್ಯೇದ ಲಗ್ನ | ಅದರಾಗ ಭೂಮಿ ಮಗ್ನ

ಶ್ರಾವಣಾ ಬಂತು ಊರಿಗೆ | ಕೇರಿ ಕೇರಿಗೆ
ಹೊಡೆದ ಝೂರಿಗೆ
ಜೋಕಾಲಿ ಏರಿ | ಅದರ್‍ಯಾವ ಮರಕ ಹಾರಿ

ಶ್ರಾವಣಾ ಬಂತು ಮನಿಮನಿಗೆ । ಕೂಡಿ ದನಿದನಿಗೆ
ಮನದ ಮನಿ ಕೋಣಿಗೆ
ಬಿಡೆಯಾದ ಹಾಡು । ಕಲಿ ಬಿಕ್ಕಿದಾವ ನೋಡು
ಶ್ರಾವಣಾ ಬಂತು ||

ಬೆಟ್ಟ ತೊಟ್ಟ್ಯಾವ ಕುತನಿಯ ಅಂಗಿ
ಮುಗಿಲು ನೋಡ ತಂಗಿ
ಜೋರಯಾ ಮೆಲ್ಲ ಜಂಗಿ
ಜಾತ್ರಿಗೇನೋ । ನೆರಕ್ಯಾದ ಇಲ್ಲ ತಾನೋ ||

ಬನ ಬನ ನೋಡು ಹಸಿರ ಹ್ಯಾಂಗ
ಮದುವಿ ಮಗನ್ಹ್ಯಾಂಗ
ತಲಿಗೆ ಬಾಸಿಂಗ
ಕಟ್ಟಿಕೊಂಡೂ । ನಿಂತಾವ ಹರ್ಷಗೊಂಡು ||

ಹಸಿರುಟ್ಟ ಬಸುರಿಯು ಹಾಂಗ
ನೆಲಾ ಹೊಲಾ ಹ್ಯಾಂಗ
ಅಲ್ಲಿಗಾ ಬೆಳೆದಾಂಗ
ಹೊಮ್ಯಾದ । ಬಂಗಾರ ಚಿಮ್ಮ್ಯಾವ ||

ಗುಡ್ಡ ಗುಡ್ಡ ಸ್ಥಾವರಲಿಂಗ
ಅವಕ ಅಭ್ಯಂಗ
ಎರಿತಾವನ್ನೋ ಹಾಂಗ
ಕೂಡ್ಯಾವ ಮೋಡ | ಸುತ್ತೆಲ್ಲ ನೋಡ ನೋಡ

ನಾಡೆಲ್ಲ ಏರಿಯ ವಾರಿ
ಹರಿದಾವ ಝರಿ
ಹಾರ್ಯಾವ ತೆರಿ
ಹೀಗ ಯಾಕ | ನೆಲಕೆಲ್ಲ ಕುಡಿಕುಲಾಕ
ಶ್ರಾವಣಾ ಬಂತು ||೨

ಜಗದ್ಗುರು ಹುಟ್ಟಿದ ಮಾಸ
ಕಟ್ಟಿ ನೂರು ವೇಷ
ಕೊಟ್ಟ ಸಂತೋಷ
ಕುಣಿತದ | ತಾನ್ನ ದಣಿತದ |

ಶ್ರಾವಣಾ ಬಂತು ಕಾಡಿಗೆ | ಬಂತು ನಾಡಿಗೆ
ಬಂತು ಬೀಡಿಗೆ | ಶ್ರಾವಣಾ ಬಂತು.

ಮದುವೆ

ಪುಟ 70 ರಿಂದ...

ಕೆ.ಎಸ್. ನಿಸಾರ್ ಅಹ್ಮದ್

ಯಾರು ಯಾರಿಗೆ ಮಣಿಯೋ ?
ಅವಳಿಗಿವನೋ ? ಇಲ್ಲ ಇವನಿಗವಳೋ ?
ಯಾರಾದರೇನಂತೆ ! ಒಂದೆ ಗುರಿಗೆಸೆದಂಥ
ಎರಡು ಬಾಣಗಳಂತೆ ತಾಗಬೇಕು.
ಎರಡು ಗಾಲಿಯ ಬಂಡಿ ಸಾಗುತಿದ್ದರೆ ಸಾಕು
ಮಗು ಕಟ್ಟಿಕೊಂಡೇನು ಆಗಬೇಕು ?
ತಂತಿ ಮೇಲಿನ ನಡಿಗೆ ಪ್ರಾಯದಲಿ ಸಂಸಾರ
ತೂಕ ತಪ್ಪದೆ ಆತು ನಡೆಯಬೇಕು.
ಸೋತರೊಬ್ಬರು, ಎದ್ದು ಮತ್ತೊಬ್ಬರರಿವಿಂದ
ಸವ್ಯಸಾಚಿತ್ವದಲಿ ಕಾಯಬೇಕು.
ಬಾಳನನುಭವದ ದಡೆಂತೊಳಬ್ಬ ಹೋಳೆಗಳವರು
ಕಾವಿನಲಿ ಹುಳಿ ನೀಗಿ ಮಾಗಬೇಕು.
ಅಂಬೆಗಾಲಿನ ಕೇಕೆ, ತೊದಲು ನಗೆಯ ಪತಾಕೆ-
ಕರುಳ ತೆನೆಗಳ ಹೊತ್ತು ಬೀಗಬೇಕು.

═══

ದಾಸರು

ಗಿಳಿಯು ಪಂಜರದೊಳಿಲ್ಲ ।
ಬರಿ ಪಂಜರವಾಯಿತಲ್ಲ ॥

ಅಕ್ಕ ನಿನ್ನ ಮಾತ ಕೇಳಿ
ಚಿಕ್ಕದೊಂದು ಗಿಳಿಯ ಸಾಕಿದೆ ।
ಅಕ್ಕ ನಾನಿಲ್ಲದ ವೇಳೆಯಲ್ಲಿ
ಬೆಕ್ಕು ಕೊಂಡು ಹೋಯಿತಲ್ಲೋ ॥

ಒಂಬತ್ತು ಬಾಗಿಲ ಮನೆಯಲ್ಲಿ
ತುಂಬಿ ತುಂಬಿ ಮಂದಿಯಿರಲು ।
ಕಂಬ ಬಿದ್ದು ಡಿಂಬ ಮುರಿದು
ಅಂಬರಕ್ಕೆ ಹಾರಿತಲ್ಲೋ ॥

ರಾಮ ರಾಮ ಎಂಬುವ ಗಿಳಿ
ಕೋಮಲ ಕಾಯದ ಗಿಳಿ ।
ಪ್ರೇಮದಿ ಸಾಕಿದ ಗಿಳಿ
ಒಮ್ಮೆಗೆ ಸುಮ್ಮನಾಯಿತಲ್ಲೋ ॥

ಅಂಗೈ ಮೇಲೆ ಆಡೋ ಗಿಳಿ
ಮುಂಗೈ ಮೇಲೆ ಕೂರೋ ಗಿಳಿ
ರಂಗಪುರಂದರ ವಿಠಲನ
ಸಂಗವಿರಲು ಹೋಯಿತಲ್ಲೋ ॥

ತೊರೆದು ಜೀವಿಸಬಲ್ಲರೆ
ರತಿ ನಿನ್ನ ಒತ್ತರಣವನು
ಬರಿದೆ ಮಾತೇಕಿನ್ನು
ಅರಿತು ಪೇಳುವೆನಮ್ಮ.
ತಾಯಿ ತಂದೆಯ ಬಿಟ್ಟು ಜನಪದ ಮೋಹಲು ಬಹುದು
ದಾಯಾದಿ ಬಂಧುಗಳ ತ್ಯಜಿಸ ಬಹುದು
ರಾಯ ತಾ ಮುನಿದರೆ ರಾಜ್ಯವನೆ ಬಿಡಬಹುದು
ಕಾಯಬಾಧಿತ ನಿನ್ನ ಅಡಿಯ ಬಿಡಲಾಗದು.
ಒಡಲು ಹಸಿಯಲು ಅನ್ನವನೂ ಬಿಡಬಹುದು
ಪಡೆದ ಕ್ಷೇತ್ರಗಳನ್ನೆ ತೊರೆಯಬಹುದು
ಮಡದಿ ಮಕ್ಕಳ ಕಡೆಗೆ ತೊಲಗಿನಿಯ ಬಿಡಬಹುದು
ಕಡೆಗೊಡೆಯ ನಿನ್ನಡಿಯ ಘಳಿಗೆ ಬಿಡಲಾಗದು.
ಪ್ರಾಣವನು ಪರರು ಬೇಡಿದರೆ ಕೊಡಬಹುದು
ಮಾನಾಭಿಮಾನವನು ಬಿಡಲು ಬಹುದು
ಪ್ರಾಣಾಂತಕನಾದ ಆದಿಕೇಶವ ರಾಯ
ಜಾಣ ಶ್ರೀ ಕೃಷ್ಣ ನಿಮ್ಮ ಅಡಿಯ ಬಿಡಲಾಗದು.

ಕನಕದಾಸರು

ಎಲ್ಲವನು ಮಾಡುವುದು ಹೊಟ್ಟೆಗಾಗಿ,
ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ ||

ವೇದ ಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು — ಹೊಟ್ಟೆಗಾಗಿ....
ಖಂಡಾಬಟ್ಟೆಗಾಗಿ ಉಳಿಸು ಕತ್ತಿ ಕಾಸು ಕೈಲಿ ಹಿಡಿದು
ಖಂಡತುಂಡ ಮಾಡುವುದು — ಹೊಟ್ಟೆಗಾಗಿ....
ಅಂಗಡಿಗಳನ್ನು ಹೂಡಿ ವ್ಯಂಗ ಮಾತುಗಳಾಡಿ
ಭಂಗ ಬಟ್ಟು ಗಳಿಸುವುದು — ಹೊಟ್ಟೆಗಾಗಿ....
ಬೆಲ್ಲದಂತೆ ಮಾತನಾಡಿ ಎಲ್ಲರನು ಮರುಳು ಮಾಡಿ
ಸುಳ್ಳು ಬೊಗಳಿ ತಿಂಬುವುದು — ಹೊಟ್ಟೆಗಾಗಿ....
ಅಂದಣ ಪಲ್ಲಕ್ಕಿಯೇರಿ ಮಂದಿ ಮಾರ್ಬಲ ಕೂಡಿ
ಚಂದದಿಂದ ಮೆರೆಯುವುದು — ಹೊಟ್ಟೆಗಾಗಿ.

ಸನ್ನುತ ಕಾಗಿನೆಲೆಯಾದಿ ಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು, — ಮುಕ್ತಿಗಾಗಿ,
ಆನಂದಕ್ಕಾಗಿ,
ಕೈವಲ್ಯಕ್ಕಾಗಿ...

ದಾಸರ

ಕುರುಡು ನಾಯಿ ತಾ ಸಂತೇಗೆ ಬಂತಂತೆ
ಅದು ಏಕೆ ಬಂತು, ಅದು ಹೇಗೆ ಬಂತು.
ಂಡಾಬಟ್ಟೆ ತಿಂಬಲ್ಲವಂತೆ, ಎಲುಬು ಮೂಳೆ ಕಡಿದಿತ್ತಂತೆ
ಎಂಜಲು ಮಾತ್ರ ಮುಕ್ಕಿತಂತೆ ಕೊಂಡು ಹೋಗುವಾಗ ಯಾರಿಲ್ಲವಂತೆ.
ಚಪಡಿ ಅಂಗಿ ತೊಟ್ಟಿತಂತೆ, ತಿರುಗಿ ನೋಡ್ಕೊಂಡು ಬಿದ್ದಿತಂತೆ
ಂಕಿತ ಇಷ್ಟು ವ್ಯರ್ಥವಂತೆ, ನರಕ ಕೂಪದಿ ಬಿದ್ದಿತಂತೆ.
ಲೇಖ ಪಾಪ ಕೊಡಿತಂತೆ ಗಾಢ ಮೂಢ ಬಿಟ್ಟಿತಂತೆ
ಪಾದ ತಪ್ಪಿ ನಡೆದು ಯಮನ ಪಾದಕೆ ತಾ ಗುರಿಯಾಯಿತಂತೆ.
ನಾನಾ ಜನ್ಮವನೆತ್ತಿತಂತೆ ಮಾನವನಾಗಿ ಜನಿಸಿತಂತೆ
ತಾನೇ ತಾನಾ ತಿರುಗಿತಂತೆ ತಾನು ತನ್ನನು ಮರೆತಿತಂತೆ.
ಮಂಗನ ಕೈಲಿಂದು ಮಾಣಿಕ್ಯವಂತೆ ನಾಗನ ಬೀಳು ಹೊರಳಿತಂತೆ
ರಂಗಪುರಂಧರ ವಿಠಲನ ಮರೆತು ಭಂಗ ಬಾಳ್ಬಾಳ್ಗೆ ಪಟ್ಟಿತಂತೆ

ದಾಸರ

ಡೊಂಕು ಬಾಲದ ನಾಯಕರೆ,
ನೀವೇನೂಟವ ಮಾಡಿದಿರಿ?
ಕನಕವ ಕುಟ್ಟುವಲ್ಲಿಗೆ ಹೋಗಿ
ಹಣಿಕಿ ಇಣುಕಿ ನೋಡುತಿರಿ
ಕನಕವ ಕುಟ್ಟುವ ಒನಕೆಲಿ ಬಡಿದರೆ
ಕುಂಯ್ಕ ಕುಂಯ್ಕ ರಾಗವ ಮಾಡುತಿರಿ!
ಹುಗ್ಗಿ ಮಾಡುವಲ್ಲಿಗೆ ಹೋಗಿ
ತಗ್ಗಿ ಬಗ್ಗಿ ನೋಡುತಿರಿ
ಹುಗ್ಗಿ ಮಾಡುವ ಸೌಟಲಿ ಬಡಿದರೆ
ಕುಂಯ್ಕ ಕುಂಯ್ಕ ರಾಗವ ಮಾಡುತಿರಿ!
ಊರ ಬೀದಿಯಲಿ ಓಡುತಿರಿ
ಕೇರಿ ಬಾಗಿಲಲಿ ಹೊರಳುತಿರಿ
ಪುರಂದರ ವಿಠಲನ ರಾಯನ ಈ ಪರಿ
ಮರೆತು ಸದಾ ನೀವೆ ಬೊಗಳುತಿರಿ!

ಘಲ್ಲು ಘಲ್ಲೆನುತಾ ಗೆಜ್ಜೆ ಘಲ್ಲು ತಾಧಿಮಿತಾ
ಬಲ್ಲಿದ ರಂಗನ ಪಲ್ಲಿ ಮೇಲೆ ಚೆಲ್ಲಿದರೋಕುಳಿಯ.

ಅರಸರು ಅರಸಿಯರು ಅವರೆ ಒಲಿದಾರು ಕೃಷ್ಣನ
ರಂಗನ ಮೇಲೆ ಚೆಲ್ಲಿದರೋಕುಳಿಯ.
ಕಾಮನೋಕುಳಿಯು ಬಿಳಿಯ ನೀಲದೋಕುಳಿಯು
ಲೋಲನಾದ ರಂಗನ ಮೇಲೆ ಎರಚಿದರೋಕುಳಿಯ.
ತುಪ್ಪದೋಕುಳಿಯು ಬಿಳಿಯ ಒಪ್ಪದೋಕುಳಿಯು
ರಂಗನ ಮೇಲೆ ಚಿಮ್ಮಿದರೋಕುಳಿಯ.
ಗಂಧದೋಕುಳಿಯು ಬಿಳಿಯ ಚೆಂದದೋಕುಳಿಯು
ವಂದ್ಯನಾದ ರಂಗನ ಮೇಲೆ ಓಗಂದರೋಕುಳಿಯ.

ಬರ್ತೀರಾ ಇಲ್ಲೇ ಇರ್ತೀರಾ ನೀವು ಬರ್ತೀರಾ |
ಧರೆಯ ಭೋಗವ ನೀಗಿ ಪರಮೋಕ್ಷ ಪಡೆಯಲು ||
ಅಕ್ಕರದಿ ಸುತಸುತರು ಅಣ್ಣತಮ್ಮದಿರ ಬಿಟ್ಟು
ಸಕ್ಕರೆಯೊಳಿರಿಸಿದ ಸಂಬಂಧಗಳನು ಬಿಟ್ಟು |
ತಕ್ಕ ಗಾದಿಯ ಬಿಟ್ಟು ಸಿಕ್ಕ ಪದವಿಗಳ ಬಿಟ್ಟು
ರೊಕ್ಕದ ತಿಜೋರಿಯ ಕೀಲಿ ಕೈಯನು ಬಿಟ್ಟು ||
ತಂಟೆ ತಗಲವ ಮಾಡಿ ಗಳಿಸಿದ ಹೊಲಮನೆ
ಎಂಟು ಎತ್ತಿನ ಕಂತ ಎಲ್ಲ ಐಶ್ವರ್ಯ ಬಿಟ್ಟು |
ನೆಂಟರು ಬಂಧುಗಳ್ಯ ಕೂಡಿ ಗುದ್ದ್ಯಾಡಿ
ಗಂಟಲ ಹರಕೊಂಡು ಗಳಿಕೆ ಮಾಡುವುದ ಬಿಟ್ಟು ||
ಅಷ್ಟ ವೈಭವ ಬಿಟ್ಟು ಅಧಿಕಾರ ಮದ ಬಿಟ್ಟು
ದುಷ್ಟ ಚಟವ ಬಿಟ್ಟು ಇಷ್ಟಮಿತ್ರರ ಬಿಟ್ಟು |
ಕಟ್ಟಿದ ಕಲ್ಲಿನ ಕಂಬ ಕಟ್ಟಡ ಮನೆ ಬಿಟ್ಟು
ಕುಟಿಲ ಸಂಸಾರದ ಕಟಕಟೆಯನು ಬಿಟ್ಟು ||
ನೇಮ ನಿತ್ಯವ ಬಿಟ್ಟು ಕಾಮ ಕಾಂಚನವ ಬಿಟ್ಟು
ತಾಮಸ ಗುಣ ಬಿಟ್ಟು ಹೋಮ ಹವನ ಬಿಟ್ಟು
ಸ್ವಾಮಿಯ ಪುಣ್ಯ ಶ್ರೀರಾಮನ ನಾಮದ
ಪ್ರೇಮದಿ ಭಜಿಸಲು ನೇಮದಿಂದಲಿ ನೀವು ||

═

ಮೂಡು ಸಿಕ್ಕದಲ್ಲ ಮಾತಿನ
ಗೂಡು ಸಿಕ್ಕದಲ್ಲ ।
ಜೋಡು ಹೆಂಡಿರಂಜಿ ಓಡಿ ಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲ ॥
ಎಚ್ಚರಗೊಳ್ಳಲಿಲ್ಲ ಮನವೆ
ಹುಚ್ಚನಾದೆನಲ್ಲ ।
ಅಚ್ಚಿನೊಳಗೆ ಮಚ್ಚು ಮಚ್ಚಿನೊಳಗೆ ಅಚ್ಚು
ಕಿಚ್ಚಿದ್ದು ಹೋಯಿತಲ್ಲ ॥
ಮುಪ್ಪು ಬಂದಿತಲ್ಲ ಸಾಯುವ
ತಪ್ಪದೆ ಉಣಲಿಲ್ಲ ।
ತುಪ್ಪದ ಬಿಂದಿಗೆ ತಿಪ್ಪೆ ಮೇಲೆ
ಧೊಪ್ಪನೆ ಬಿತ್ತಲ್ಲ ॥
ಯೋಗವು ಬಂತಲ್ಲ ಬದುಕು ವಿ-
ಭಾಗವಾಯಿತಲ್ಲ ।
ಭೋಗಿಶಯನ ಶ್ರೀ ಪುರಂದರ ವಿಠಲನ
ಆಗ ನೆನೆಯಲಿಲ್ಲ ॥

ದಾಸರು

ಎನಗು ಆಣೆ ರಂಗ ನಿನಗು ಆಣೆ ।
ಎನಗು ನಿನಗು ಇಬ್ಬರಿಗೂ ಭಕ್ತರಾಣೆ ॥
ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ.
ತನು ಮನ ಧನದಲಿ ವಂಚಕನಾದರೆ ಎನಗೆ ಆಣೆ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ.
ಕಾಕು ಜನರ ಸಂಗವ ಮಾಡಿದರೆನಗೆ ಆಣೆ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ.
ಶಿಷ್ಟರ ಸಂಗ ಮಾಡದಿದ್ದರೆ ಎನಗೆ ಆಣೆ
ದುಷ್ಟರ ಸಂಗ ಬಿಡಿಸದಿದ್ದರೆ ನಿನಗೆ ಆಣೆ.
ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ
ಪುರಂದರವಿಠಲನೊಲಿಯದಿದ್ದರೆ ನಿನಗೆ ಆಣೆ.

ಜೋ ಅಚ್ಯುತಾನಂದ ಜೋ ಜೋ ಮುಕುಂದ
ಎನ್ನ ಪರಮಾನಂದ, ರಾಮ ಗೋವಿಂದ ಜೋ ಜೋ..
ತಂಗಾಳಿ ನಯವಾಗಿ ಬೀಸುತಿದೆ ನಿನಗಾಗಿ
ಚಂದಿರನ ಕಿರಣಗಳು ಮುತ್ತುತಿವೆ ಮೊಗಕಾಗಿ
ಊರೆಲ್ಲ ಮಲಗಿದರು ನಿನ್ಯಾಕೆ ಮಲಗಿಲ್ಲವೇ
ನಾನಿನ್ನು ಮಲಗಂತಿಲ್ಲ ಎನ್ನ ಮುದ್ದುರಂಗ ||
ತೊಟ್ಟಿಲಲಿ ಮಲಗಿರುವ ಕೌಸಲೆಯ ಹಂಬಲವೆ
ಅರಮನೆಯ ಕಣ್ಮಣಿಯೆ ಮುದ್ದು ಮರಿಯೆ
ನಿನ ನಿದ್ದೆ ಕದ್ದೊಯ್ದ ಕಳ್ಳ ನಾರಯ್ಯ
ಎನ್ನ ಮನದಾ ಚಕೋರ ಮೋಹನಾಕಾರ ||
ಅಂಗೈಯಲ್ಲೇನು ಸಿರಿ ಚೆಲ್ಲುತಿದೆ ಗುಟ್ಟಾಗಿ
ಶೃಂಗಾರರಚನೆಗಳಿಗಾಧಾರವೆಂದು ನಿನ್ನ ಹರಿ
ಲೋಕ ಸಂಪದಕೆಲ್ಲ ಬಿಂಕದ ದೊರೆಮರಿಯೆ
ಮಂಗಳಕೆ ನೀ ಧಾಮ ಕೋದಂಡರಾಮ ||

[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

ದೇವನಹೆಂಥ ಹೆಂಡ್ತಿಕ್ಕೆ ಬಿಟ್ಟ ನನ್ನ ಹೊರಿ ಹಾಳ್ಲು
ನನ್ನ ಹೊಂಡು ಇನ್ನೊಂದು ಹೆಣ್ಣ ಮಾಳ್ಲಿಲ್ಲ ಇವಗೆ ಬಾಳ್ಲು.
ರಾಮರಾಮನಂತ್ತ ಹೊಗಳು ಹೊಗಳ್ತಾರ ರಾಮನೇನು ಸುಖ್ಖಾನೆ
ಊರ ಮಾತ ಕೇಳ್ಳಿ ತನ್ನ ಸತಿಯು ಅಡವಿಗೆ ಅಟ್ಟಿದನು.
ಶ್ರೀಮನ್ನ ದೇವನಂತ್ತ ಬುಡ್ಡ ಹಿರಿಯನಂತ್ತ ಬುದ್ಧಿ ಹಿರ್ರಿ ಅವಗ
ಮೂರು ಜನ ಹೆಂಡಿರಾಗ್ತಕ್ಕ , ಪ್ರೀತಿಯು ಬಿಗಿ ಹಾಗಿಗ್ಗ.
ಹೇಳ್ಳಾಳ್ಳಿದ ಶಿವನೇಳ್ಳಿಗೆ ಗೌರಿಯು ಹೇಳ್ಳು ಕೊಳ್ಳಿಸಿಬಿಟ್ಟ
ಹೇಳದೆ ಕೇಳದೆ ತನ್ನ ಜಡೆಯೊಳ್ಗು ಗಂಗೆಯು ತಂದಿಟ್ಟ.
ಕೃಷ್ಣನ ಹೆಂತು ಇನ್ನೊಬ್ಬ ತನವ ನೋಡಲಿಲ್ಲ ಹೆಂಡಿರವಗ
ಒಬ್ಬರಿಗಿಂತ ಹೆಚ್ಚು ಜನ್ರ ಪಡಿದಿದ್ದ ಹದಿನಾರುಸಾವಿರ.

ಕುಂತ್ರೆ ನಿಂತ್ರೆ ಅವ್ನ ಧ್ಯಾನ, ಜೀವಕ್ಕಿಲ್ರೀ ಸಮಾಧಾನ,
ಅವ್ನಿಗೆ ಎಷ್ಟ್ರೀ ಬಹುಮಾನ, ಅವ್ನೆ ನನ್ನ ಗೆಣೆಕಾರ.
ಇಂದ್ರಲೋಕ್ದಾಗಿಲ್ಲ ಕಾಣ್ರಿ, ಚಂದ್ರಲೋಕ್ದಾಗಿಲ್ಲ ಕಾಣ್ರಿ
ಮೂರು ಲೋಕ್ದಾಗಿಲ್ಲ ಕಾಣ್ರಿ ಅವ್ನೆ ನನ್ನ
ರೂಪ್ದಲ್ಲೀನೂ ಕಮ್ಮಿಯಿಲ್ರೀ ಮಾತ್ನಲ್ಲವ್ನ ಸೋಲ್ಸೋರಿಲ್ರೀ
ಅವ್ನೆ ನಂಗೆ ತಕ್ಕೋನ್ಕಣ್ರೀ ಅವ್ನೆ ನನ್ನ ಗೆಣೆಕಾರ.
ಜಾತ್ರೇಲವ್ನ ನೋಡ್ದೆ ಕಣ್ರೀ ನೋಡಿ ನಾಚಿದೆ ಕಂಡು ತಾನೇ
ಪಕ್ಕಕ್ಬಂದು ನಿಂತ ಕಣ್ರೀ ಅವ್ನೆ ನನ್ನ
ಮಲ್ಲೆ ಹೂವ ತಂದ ಕಣ್ರೀ ತಂದು ತುರುಬಲ್ಲಿಟ್ಟ ಕಣ್ರೀ
ಅವನ್ಗೆ ನಂಗೂ ಮದ್ವೆ ಕಣ್ರೀ ಅವ್ನೆ ನನ್ನ ಸರದಾರ.

ಬುತ್ತಿ ತಕ್ಕೊಂಡು ಹೋಗ್ತೀನಿ ಹೊಲಕ್ಕ । ನಾ
ಬತ್ತೀನಿ ಹೊತ್ತು ಮುಳುಗೋದಕ್ಕ ॥

ಹೊಲದಂಡಿ ಮಧ್ಯಾಗ ನಮ್ಮ ಹೊಲ
ಬೆಳೆದು ನಿಂತೈತೆ ಬಿಳಿಜ್ವಾಳ ಕಲ್ಲ
ಅದರ ತೆನೆಸ್ಯಾಗ ಮುತ್ತಿನ ಗೊಂಚಲ
ಅದ್ನ ನೋಡ್ಲೆತಿ ಇಂದ್ರ ಹಾದಿಮ್ಯಾದಕ.
ಹೊಳಿ ಬದಿಯಾಗ ಅವರ್ಯಾದ ಸಾಲ
ಬದನೆ ಬಿಟ್ಟಿದಾವು ಭಾಳ
ಕಣ್ಣ ಸುಳಿದಾವು ಹಾದಿ ಹಾದಿ ಭಾಳ
ಕುಸುಬಿ ಹೂವಿನ ಕುಸುರೆಲ್ಲ ನಾಜೂಕು.

ದುಡಿಯೋ ಎರಡು ಹೋರಿ ಚಿನ್ನರನ್ನ
ಅವು ತಿನ್ನಾವೆ ಹೊಟ್ಟಿ ದಣಿರನ್ನ
ಅವು ತಿಂದಷ್ಟು ನಮಗೆಬ್ಬ ಅನ್ನ
ನಾನು ನೀಡಾಕ ನಿಲ್ಲ್ಯಾನು ಅವಕ್ಕ.
ಉಳ್ಳಿತೈತೆ ಹೊತ್ತು ಕೆಲ್ಸ ಮಾಡ
ಆಗ ನಾ ಬಡಿನಿ ಕೆಲ್ಸಯಾರ

ಕುಂತು ನಿಂತೀವಿ ನಾವ ಎದುರು ಬದುರಾ
ಮನ ಕುಟಿಯವ್ವ, ಬಳ್ಳಿ ಜ್ವಾಲ್ಯದ ಕಳಕ್ಯ ।
ಮಾಡ್ತೀವಿ ಬದುಕಿನ ಜೀತ
ನೋಡ್ತೀವಿ ಪ್ರೀತಿಯಿಂದ
ಆಡ್ತೀವಿ ಮನೋ ಮನೋ ಮಾತ
ನಾಚ್ಕೆ ಬಿಟ್ಟೈತೆ, ಮುಂದಿದೆಲ್ಲ ಹೇಳ್ಗಾಕ.

ಕಡಲಾ ತೀರದ ದಂಡೀಯ ಮ್ಯಾಗ
ತೆಂಗೀನ ಬನದಾಗ ss
ಗುಡಿಸಲ ಕಟ್ಟಿಕೊಂಡು ಇರುವೋರು ನಾವು
ಬೆಸ್ತರ ಮಂದಿಯೆಲ್ಲಾ ss
ಹಕ್ಕಿ ಕೂಗು ಕೇಳ್ದಾಗ ಕೋಳಿ ಕೂಗು ಹಾಕಿದಾಗ.
ಕಾಳ್ನಾದ ಕೇಳ್ದಾಗ ss ಜಗಮಾನು ತಿಕ್ಕಿತಾಗ ss
ಬಾನಿನಲಿ ಬೂಮಿಯಲಿ, ನೀಲಾಲ ಕಡಲಿನಲಿ
ಇದುವೆತ್ತ ಹಿಗ್ಗಿನ ಕಾಲಾ ss
ಹುಣ್ಣಿಮೆ ಚಂದಿರನು ಆಗಸದಿ ಬಂದಾಗ
ನಾವೆಲ್ಲ ನಲಿದಾಗ s ದೋಣಿಲಿ ಬಂದಾಗ ss
ಜಲದೇವಿ ಬಂದೆವ್ವ ಬೆಸ್ತರ ಕಾಂತವ್ವ
ನೀನೆವ್ವ ಸಲಹವ್ವ s ನಮಿಸುವೆವು ನೋಡವ್ವ ss

ಗೋಲೋಕಕಂದನ ದೊಡ್ಡಗಿಂದ ಗೋಪಾಲ ಮೂಡಿ ಬಂದ
ದ್ವಾರಕೆಯಿಂದ ಕಡಲಲಿ ಬಂದು ಉಡುಪಿ ಕ್ಷೇತ್ರದಿ ತಾ ನಿಂದ

ಯಶೋದೆ ತಾಯಿಯ ಒಲವಿನ ಕಂದ
ಯದುಕುಲ ತಿಲಕ ಗೋವಿಂದ
ಗೋವರ್ಧನಗಿರಿ ಕಿರುಬೆರಳಿಂದ
ಎತ್ತಿದ ಮುರಹರ ಶ್ರೀ ಮುಕುಂದ
ತುಂಟರ ಗುರುವೆನಿಸಿದ ಪೋರ
ಗೋಪೀ ಜನರ ಮನಸು ಚಕೋರ
ಮಾನವ ಕುಲಕೆ ಗೀತೆಯ ಬೋಧಿಸಿ
ಜ್ಞಾನವ ನೀಡಿದ ಗೀತಾಚಾರ್ಯ.

ನೀಲವರ್ಣದ ತಾವರೆಯಂಥ ಕಾಂತಿಯಿಂದ ಕಂಗೊಳಿಸುವ
ಕಮಲಸಂಭವ ಬಲಗೈಯಲ್ಲಿ ಕಡೆಗೋಲನ್ನು ಹಿಡಿದಿರುವ
ರತ್ನದ ಪೀಠದ ಎಡಗೈಯನ್ನು ಸೊಂಟದ ಮೇಲೆ ಇಟ್ಟ
ತೇಲಿಬಂದ ಶ್ರೀ ಕೃಷ್ಣ ಕಡಗ ಕಿರೀಟ ಕೊರಳ ಸರಗಳ ಸಂಭ್ರಮದ ಚೆಲುವ

ಯಾವಲ್ಲೂ ಅಡಗಿರುವೆ ಕೃಷ್ಣಯ್ಯ ನೀ
ಯಾವಲ್ಲೂ ಅಡಗಿರುವೆ, ಯಾವಲ್ಲೂ ಹುಡುಕಲಿ
ಭಾವದ ಮಾಲೆಯ ತಾವನ್ನೆ ಬಿಟ್ಟು ॥
ಕಣ್ಣು ಮುಚ್ಚಾಲೆ ಆಟ ಬೇಡಯ್ಯ ಈ
ಬಣ್ಣದ ನುಡಿಯ ನೋಟ
ಕಣ್ಣು ಮುಚ್ಚಲು ಕಟ್ಟು ತಣ್ಣನೆ ಜಿಗಿದೋಟ
ಅಣ್ಣ ಹುಡುಕಿ ಹುಡುಕಿ ಸಣ್ಣಗಿ ಹೋದೆನು.
ಕಡು ಕಷ್ಟ ಹುಡುಕುವುದು ಮನವಿದು ನಿನ್ನ
ಕಂಡಿಯಲು ಹುಡುಕುವುದು.
ಆಡಿದು ಕಾಡಿದು ತಂದು ಬಿಡಲಿಚ್ಛಿಸಲು ಮತ್ತೆ
ಬಿಡನೇನೋ ನುಡಿ ಕಂಡುಬಿಡಲೊಲ್ಲೆಯ ನೀ.
ಎಲ್ಲೆಲ್ಲೂ ತುಂಬಿರುವೆ ನೀ ಹುಡುಕಲು
ಎಲ್ಲೆಲ್ಲೂ ಸಿಗದಿರುವೆ
ಕ್ಷಣಕೆ ಎನ್ನನು ಚೆಲ್ಲವೆ ನಿನ್ನೆದುರು
ಚೆಲ್ವ ರೂಪದಿ ಬಂದು ನಿಲ್ಲುವುದನೆ ಬಿಟ್ಟು.

ಕೇಶವಾ, ಮಾಧವಾ, ತುಝ್ಯ ನಾಮಾಂತರೇ ಗೋಡವಾ ||

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ದಾಸರು

ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ ।
ಫುಲ್ಲನಾಭನೆ ನೀನಿದ್ದಲ್ಲಿ ಸೇರಿಸೆನ್ನ ॥
ಮರಣವನೊಲ್ಲೆ ಜನನವನೊಲ್ಲೆ
ದುರಿತಸಂಸಾರದ ಕೋಟಲೆಯೆಲ್ಲ ನಾನೊಲ್ಲೆ ।
ಕರುಣದಿ ಕರುಗಳ ಕಾಯ್ದ ಗೋವಳನ
ಚರಣಕಮಲದ ಸ್ಮರಣೆಯೊಳಿರಿಸೆನ್ನ ॥
ಬಂದ ಸಂಸಾರವೆಂಬೊ ಬೇನೆ ಮಧ್ಯದೊಳು
ನೊಂದೆನು ನಾ ಬಲು ಕಕಕಲೆಯಲ್ಲಿ ।
ನಂದಗೋತುಕಂದ ಬೃಂದಾವನ ಚಂದ
ಎಂದೆಂದು ನಿನ್ನ ಸ್ಮರಣೆಯೊಳಿರಿಸೆನ್ನ ॥
--- ಇಲ್ಲಿರಲಾರೆ, --- ಅಲ್ಲಿಗೆ ಹೋಗಲಾರೆ, ---

ಪ್ರಾ.ಪ

ಲೊಳಲೊಟ್ಟೆ, ಬದುಕು ಲೊಳಲೊಟ್ಟೆ ||

ಆನೆ ಕುದುರೆ ಒಂಟೆ ಎಲ್ಲ ಲೊಳಲೊಟ್ಟೆ
ಬಹು ಸೇನೆ ಭಂಡಾರವು ಲೊಳಲೊಟ್ಟೆ
ಮಾನಿನಿಯರ ಸಂಗ ಲೊಳಲೊಟ್ಟೆ
ಸೂಕ್ಷ್ಮ ಧರಣೀಶನೆಂಬುದು ಲೊಳಲೊಟ್ಟೆ.
ಮುತ್ತು ಮಾಣಿಕ ಎಲ್ಲ ಲೊಳಲೊಟ್ಟೆ
ಮತ್ತೆ ಛತ್ರ ಚಾಮರ ಧ್ವಜ ಲೊಳಲೊಟ್ಟೆ
ಸುತ್ತ ದಳ ಕೋಟೆ ಕೊತ್ತ ಲೊಳಲೊಟ್ಟೆ
ಮತ್ತೆ ಉತ್ತಮ ಪ್ರಭುತ್ವ ಲೊಳಲೊಟ್ಟೆ
ಸ್ವಂತ ಕಾಯದ ಮೇಲೆಲ್ಲ ಲೊಳಲೊಟ್ಟೆ
ನಿಸ್ಸ ನೆಂಟರು ಇಷ್ಟರು ಲೊಳಲೊಟ್ಟೆ
ಪುರಂದರವಿಠಲರಾಯನ
ಬಂಟನಾಗದವ ಲೊಳಲೊಟ್ಟೆ.

ನಾವು ಬಂದೇವ ಶ್ರೀ ಶೈಲ ನೋಡಲಿಕ್ಕ ,
ಸ್ವಾಮಿ ಸೇವಾ ಮಾಡಿ ಮುಕ್ತಿ ಹೊಂದಲಿಕ್ಕ ||
ಬೆಟ್ಟದ ಮೇಲೇರಿ ಶಿವ ಧ್ಯಾನ ಕುಂ
ಅಂಥಾ ಜನಗಳೇನ ಬಂತ ?... ಹೇಳ್ತಾ
ಕೆಟ್ಟ ಜನರ ಮೋರೆ ನೋಡ ಬಾರದಂತಾ !
ಹಣ್ಣು ಕಾಯಿ ಧೂಪ ದೀಪ ಇಡತಾರಂತ !.. ಯಾಕಂತ
ಪುಣ್ಯ ಬರಲಿ ಅಂತ !
ಸಾವಿರ ಲಕ್ಷ ಕೋಟಿ ಪುಣ್ಯ ಬರಲಿ ಅಂತಾ
ಭಿಕ್ಷುಕ ಬಂದರೆ ನಿಷ್ಠೂರವಾಗಿ ಹೇಳ್ತಾರಂತ !
ಏನಂತ ?... ಮುಂದಕ್ಕ ಹೋಗಂತ !
ಕೊಡಾಕೇನಿಲ್ಲ , ಮುಂದಕ್ಕ ಹೋಗಂತ..
ಬೆಟ್ಟ ಏರಿ ಬಂದರೂ ಕೆಟ್ಟ ಗುಣ ಹೋಗಲಿಲ್ಲ
ಹುಟ್ಟು ಗುಣ ಸುಟ್ಟರು ಹೋಗದಂತ. ||
ಬಾಯಿದ್ರು ಮೂಗನಾಗಿ ಕಿವಿಯಿದ್ರು ಕಿವುಡನಾಗಿ
ಶಿವ ಧ್ಯಾನ ಕುಂತ ?
-- ವರ ಕೇಳ್ತಾರಂತ !
ಶಿವನ ಒಲಿಸುದಕ್ಕ , ಏನು ಮಾಡ ಬೇಕ ?
ಭಕ್ತಿಯೊಂದೆ ಸಾಕ ; ನಮ್ಮಿಂದ ಶಿವನಿಗೇನು ಬೇಕ !?
..... ಜೀ ಜೀ ಸಾಮಿಂದು ಜೀ ಜೀ .....

ಗೋಕುಲ ನಿರ್ಗಮನ — ಪು.ತಿ.ನ.

ಕೊಳಲನೂದು ಗೋವಿಂದ
ಮುಕ್ತಿಗಾನಲಾನಂದ ||

ಮೈ ಮುಪ್ಪು ಕಾಡುವಂತೆ
ಮನಕೆ ಚಿಂತೆ ಸೇರದಂತೆ
ಹರೆಯದ ಹುರುಪಿಂದ ನಾವು
ಹಗುರು ಹೆಜ್ಜೆಯಿಡುವ ತೆರದಿ —
..ಕೊಳಲನೂದು...

ಕಣ್ಣ ಮಂಜು ಹರಿಯುವಂತೆ
ಕಿವಿಯು ಹರಿತವಾಗುವಂತೆ
ಬಾಳ್ಗೆ ಸುಳಿಯು ಸಾವು ದೂರ
ಎಂಬ ತೆರದ ನಂಬಿಕೆ ಬರೆ —
.. ಕೊಳಲನೂದು...

ದಿನದಿನಕೂ ಬೆಳೆವ ಘೋರ
ಕಾಲ ಬೆನ್ನು ಬಾಗೆ ಭಾರ
ನಿನ್ನ ಕೊಳಲ ಮಂತ್ರಕವನು
ಹೆಸರ ಹೆಗಲಲ್ಲಿಲ್ಲದ ತೆರದಿ —
.. ಕೊಳಲನೂದು ಗೋವಿಂದ
ಮುಕ್ತಿಗಾನಲಾನಂದ ||

ಪ್ರ.೩.ಸ

ಕೃಷ್ಣನ ಕೊಳಲಿನ ಕರೆ - ಆಲಿಸು
ಕೃಷ್ಣನ ಕೊಳಲಿನ ಕರೆ - ತ್ವರೆ ತ್ವರೆ.
ತೊಟ್ಟಿಲಿನ ಹಸುಗೂಸು ಮರೆ ಮರೆ
ಮಕ್ಕಳ ಗಂಡನ ತೊರೆ ತೊರೆ
ಬೃಂದಾವನಕೆ ತ್ವರೆ ತ್ವರೆ - ಕೃಷ್ಣನ ||
ಮುತ್ತಿನ ಕುಪ್ಪಸ ಹರಳೋಲೆ
ಮಲ್ಲಿಗೆ ಜಾಜಿ ಮುಡಿಮಾಲೆ
ಹೆಜ್ಜೆಯ ನೂಪುರ ಗೆಜ್ಜೆಯ ಇಲ್ಲಿ
ಮರೆತೇ ಬಂದೆವೆ ಮನೆಯಲ್ಲೇ ಸಖಿ - । ಕೃಷ್ಣನ
ಹೊತ್ತಾರೆ ಹೊರೆಗೆಲಸ ಬಿಕ್ಕರೆ ಬಿಗಲಿ
ಬಿಕ್ಕಾದ ನೆರೆಹೊರೆ ನಕ್ಕರೆ ನಗಲಿ
ಬೃಂದಾವನದೊಳಾಲಿಸಿಗೋ ಮುರಲೀ - ಕೃಷ್ಣ
ನೇಸರ ಕಿರಣ ಆಗಸದಿರುಳ್ಳ
ತೊರೆಯುವ ರೀತಿ
ಮುರಳೀಧರನ ಮುರಳೀ ಮಾಯೆಗೆ
ಮನ ಬಿಚ್ಚಿತೆ ಭೀತಿ
ಜನ್ಮಾಂತರ ಪ್ರೀತಿ - ಕೃಷ್ಣನ ||

ಪು.ತಿ.ನ

ನಿಲ್ಲಿಸದಿರು ವನಮಾಲೀ
ಕೊಳಲ ಗಾನವ ॥
ನಿಲ್ಲಿಸೆ ನೀ ಕಳೆವುದೆಂತೊ
ಭವಭೀತಿಯದು ಕೇಶವ ॥
ಕ್ರೂರ ದೈವ ಬಲೆಗೆ ಎಂತು
ಕಾಯುತಿಹುದೊ ದೂರ ನಿಂತು
ಅಂತೆ ನಮ್ಮ ತುತ್ತುಗೊಳ್ಳೆ
ಹೊಂಚುತಿಹುದು ಭೀತಿಯಂತು — ನಿಲ್ಲಿಸದಿರು
ಊರಿನಲ್ಲಿ ಹುಳುವು ಎಂಬ
ಹಗಲಿನಲ್ಲಿ ಇರುಳು ಎಂಬ
ಇಂತುಗೈದು ಹೊಳ್ಳತೇ ಎಂಬ
ಭಯವು ಮೆಟ್ಟಿದೆ ಬಗೆಯ ತುಂಬ — ನಿಲ್ಲಿಸದಿರು
ನಾನು ಸತಿ ಆತ ಪತಿ
ಅನ್ನ ಲಕ್ಷ್ಯ ವನು ಗತಿ
ಇಂತು ನಂಟತನವಿದೆಲ್ಲ
ಮರುಕೊಳಿಪುದೊ ಮನದಿ ನಲ್ಲ — ನಿಲ್ಲಿಸದಿರು

ಹರಿಯುತಿಪ್ಪ ನಂದದ ನದಿಯು
ಬಿರಿಹೊಂದ ತುಂಬಿರುವ ಭವವು
ನಿನ್ನ ಕೊಳಲು ನೀಡಲಿ ಭವವು
ನಕ್ಷತ್ರಗಳೊಳಗೆ ಬಂದೆವಯ್ಯ — ನಿಲ್ಲಿಸದಿರು

ನಮ್ಮ ಬಾಳಿನಾಳದಿಂದ
ಮತ್ಸ್ಯದಂತೆ ಮೇಲೆ ತಂದ
ಕೃಷ್ಣ ಈ ಚಿದಾನಂದ
ಮರಳಿ ಮುಳುಗಿ ಹೋಗದಯ್ಯ — ನಿಲ್ಲಿಸದಿರು

ನೀರು ನಿಂತು ಕೊಳೆಯುವಂತೆ
ನವಗಳುದೋ ನಾರು ಬಂತೆ
ಕೊಳಲುಲಿಸ ನೆರೆಯು ನುಗ್ಗಿ
ಜೀವ ಕೊರಿಯುತೆಂಥ ನುಗ್ಗಿ — ನಿಲ್ಲಿಸದಿರು

ಭವದ ಮಂಜು ಕರಗುವಂತೆ
ಅಹಂಕಾರ ಕರಗುವಂತೆ
ನಿನ್ನ ಗಾನದನುರಾಗವು
ಬದುಕ ತುಂಬಲನುಗಾಲವು —
ನಿಲ್ಲಿಸದಿರು ವನಮಾಲೀ
ಕೊಳಲ ಗಾನವ

ತೊರೆಗಳೆಲ್ಲ ಬರಲಿ ಬಿಡು!

ಕಲ್ಯಾಣಿ ರಾಗ. ಆದಿ ತಾ.

ತೊರೆಗಳೆಲ್ಲ ಬರಲಿ ಬಿಡು
ಎದೆಯ ಕಡಲಿಗೆ ;
ಜಗದ ಎಲ್ಲ ಬಳಲಿಕೆಗಳು
ಹೃದಯ ಮಡಿಲಿಗೆ
ಬಂದು ಇಲ್ಲಿ ಮಲಗಿ ಹಬ್ಬಿದ ತೊಳಲು ಹೋಗಲಿ !
ರೆಕ್ಕೆ ಮುರಿದ ಹಕ್ಕಿಗಳೇ ಇತ್ತ ಬನ್ನಿರಿ ;
ಈ ಎದೆ ಗೂಡಿನಲ್ಲಿ ಬಂದು ಮಲಗಿರಿ.
ಗಾಯವೆಲ್ಲ ಮಾಯ್ದು ಬಳಿಕ
ರೆಕ್ಕೆ ಪುಕ್ಕ ಬಲಿತ ಬಳಿಕ
ಮನ ಬಂದೆಡೆ ಸಾಗಿರಿ ;
ಅಲ್ಲಿತನಕ ಇಲ್ಲೆ ಇರಿ ; ಎಲಾ ಮುದ್ದು ಮರಿಗಳೇ !
ನಿನ್ನ ಮನದ ನೋವನೆಲ್ಲ
ಬೆಳಕಿನ ಹಾವಳಿಗೆ ;
ಬಿಸುಗಾಳಿಯು, ಬೇಂಗಾಳಿಯು ಹಾಡಿಗೆ
ಮೆಲ್ಲೆಲರಿನ, ತಂಗಾಳಿಯು ಕೇಳಿಗೆ ;
ಸುಡುವ ಬಿಸಿಲ, ತಂಪೆರೆಯುವ ಬೆಳುದಿಂಗಳ ಮಧುರ ನಾ
ಎಲ್ಲ ಎಲ್ಲ ಅನುಭವದ
ಮೂಸೆಯಲ್ಲಿ ಭವಭವದ

ಪುಟ 179 ಕ್ಕೆ

ಆ ಬಾರದನೆ.

ಸಾತ್ವಿಕ ಜಿ. ಎಸ್. ಶಿ.

ಎಲ್ಲೋ ದೂರದಿ ಜಿನುಗುವ ಹನಿಗಳೇ
ಬನ್ನಿ ಬನ್ನಿ ಬಿರು ಮಳೆಯಾಗಿ,
ತುಂಬಲಿ ತುಳುಕಲಿ ಬತ್ತಿದ ಹೊಳೆ ಕೆರೆ
ಹೊಸ ಹರುಷೆಲ್ಲಲಿ ನವ್ಯವಾಗಿ!
ಎಲ್ಲೋ ದೂರದಿ ಜಿನುಗುವ ದನಿಗಳೇ
ಬನ್ನಿ ಬನ್ನಿ ಸಂಗೀತಗಳಾಗಿ,
ಮನಸಿನ ಮಲಗಿದ ಭಾವ ವೃಂದಗಳ
ಮೇಲಾಡಿಸಿ ಚಿಕ್ಕೆಲು ಬೆರಳಾಗಿ.!
ಎಲ್ಲೋ ದೂರದಿ ಮಿನುಗುವ ಕಿಡಿಗಳೇ
ಬನ್ನಿ ಬನ್ನಿ ಹೊಂಬೆಳಗಾಗಿ,
ಹಣತೆ ಹಣತೆಗಳ ತುಂಬಿ ಎಲ್ಲು ಕುಡಿಸಲಿ
ಮಿಂಚಿಸಿ ಒಳ-ಹೊರಗನು ಬೆಳಗಿ.
ಎಲ್ಲೋ ದೂರದಿ ಚಿಕ್ಕ ಗೆಜ್ಜೆಗಳೇ
ಕಟ್ಟಿ ನರ್ತಿಸುವ ಹೆಜ್ಜೆಗಳೇ
ಬನ್ನಿ ನನ್ನೆಡೆಗೆ; ಲಾಸ್ಯವನಾಡಿಸಿ
ಚಿಮ್ಮಲಿ ನಲಿವಿನ ಬುಗ್ಗೆಗಳೇ.

ಸುಮಸುಂದರ ತರುಲತೆಗಳ ಬೃಂದಾವನ ಲೀಲೆ
ಸ್ವತಂತ್ರ ಬೆಳಕಿನ ಉತ್ಕರ್ಷದ ಕಾರ್ಖಾನೆಗಳ ಜಾಲೆ
ಗಿರಿಗಿರಿವನ ಸಂಚಾರಿಣಿ ತುಂಗಾಜಲ ಲೀಲೆ
ಜಲಜಲಜಲ ಮೃದು ಕಾಕಲಿ ಗಾನ ಸುಪ್ತ ಲೋಲೆ.

ಮಲೆನಾಡಿನ ಕೋಗಿಲೆಯೆ
ಬಯಲುನಾಡ ಮಲ್ಲಿಗೆಯೆ
ರಂಗವಿಟ್ಠಲನ ಭೃಂಗವೆ
ಧವಳಗಿರಿಯ ಶೃಂಗವೆ

ಕಾವೇರಿ ಗೋದಾವರಿ ಗಂಗೆ ಯಮುನೆ ಸಿಂಧುವೆ.
ಶತಶತ ಶತಮಾನಗಳ ಸಂಸ್ಕೃತಿಯ ಚೇತನವೆ
ಮಿರುಮಿರುಗುವ ಹೊನ್ನಿನ ಫಲವಾಗುವ ತನಿರಸವೆ
ಚಿಲಿಪಿಲಿಯೆಂದಾಡುವ ಸಾಲುಹಕ್ಕಿ ಕೂಜನವೆ
ಮಧುಕರ ಮಂದಾನಿಲ ಸೌಗಂಧದ ಸಿರಿ ಸಿರಿಮಳವೆ

ನಕ್ಕುನಲಿವಿನ ಹಿಮಮಣಿಯಂತೆ
ಎಳೆ ಬಿಸಿಲಿನ ಮಿಲುಕುವೆ
ಬಿರಿದ ಮುಗುಳ ಬಿಂಕವೆ
ತೆರೆದ ಸೋಗೆ ನರ್ತನವೆ

ವಿಭವದ ವಿಶ್ವರೂಪಿಯ ಜಲತಾತದ ಸಿರಿಗನ್ನಡವೆ

ಇನ್ನು ಇದೆ ಪುಟ 218 ರಲ್ಲಿ

ಭಾರತದ ಜನ ಭಾರತೀಯಂತು ಮನ ಎಲ್ಲಿದ್ದರೂ ಒಂದಂತೆ
ಬರಡಾಗದ ನೆಲ ಹರಿದಾಡುವ ಜಲ ಎಲ್ಲಿದ್ದರದೇನಂತೆ?
ಇವ ದಕ್ಷಿಣದವ ಅವ ಉತ್ತರದವ ಇವ ಸಿಖ್ಖನು ತಾನಂತೆ
ಇವ ಮುಸಲನು ಅವ ಕ್ರೈಸ್ತನು ಈ ರಂಗು ಬೇರಂತೆ!
ಆಡುವುದೇ ಒಂದಾಗಿರೆ ಮಾಡುವುದೇ ಬೇರೊಂದು
ನಡೆನುಡಿಯುಳ್ಳನ ಭೇದವು ಮೂರು ಮತ್ತೊಂದು!
ಹರಿದಾಡುವ ಜಲ ನಡೆದಾಡುವ ನೆಲ; ಎಲ್ಲವೂ ಒಂದರಂತೆ
ನಾವಾಡುವ ನುಡಿ ಬೆಳೆಸುವ ನಾವೆ ಭಾರತಿಗೆ ಚಿಂತೆ!

ಪುಟ 176 ರಿಂದ

ಕಿಲ್ಬಿಷಗಳು ಸುಟ್ಟುಹೋಗಲು ಕೆರಳಿಸಿದೆಯು ಕಾವುಗಳ;
ಬರಲು ಉತ್ತ ಬಂಗಾರ
ನಿನ್ನ ತನದ ಸಿಂಗಾರ;
ಅಹಮಾ ಬರಿ ಅಂಗಾರ
ಬೆಳಗಲಿ ನಿನ್ನ ಮಾತನೆಲ್ಲ ಮಹಿಮೆ ಭೂತಳ!

ಭಾರತೀಯರು ನಾವು ಎಂದೆಂದು ಒಂದೆ
ಭಾವೈಕ್ಯದಲಿ ಕೂಡಿ ನಡೆಯುವೆವು ಮುಂದೆ

ನೂರು ಮತ ನಮಗಿರಲಿ ನೂರು ಮಾತಾಗಿರಲಿ
ನಾಡಿನಾ ಜನಮನ ನಾವೆಲ್ಲ ಒಂದೆ.
ನಾಡ ರಕ್ಷಣೆಗಾಗಿ ನಡೆಯುವೆವು ಮುಂದೆ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗು
ಕಂಗೊಳಿಸು ತಾಯ್ನಾಡೆ ಪ್ರಾಣಕೂ ಮಿಗಿಲೆಮಗೆ
ಕುಲಭೇದ ಜಲಭೇದ ಜಾತಿಭೇದವ ತೊರೆದು
ಕಾಲಗತಿಗೆ ಒಂದಾಗಿ ನಡೆಯುವೆವು ಮುಂದೆ.
ಎಮ್ಮ ನೆಲದಿಂದ ಹಗೆ ದೂರ ಸರಿವನಕ
ಎಮ್ಮ ಧಮನಿಯಲಿ ಬಿಸಿ ನೆತ್ತರಿರುವನಕ
ಎಮ್ಮುಸಿರು ಎಮ್ಮಬಲ ನಗ ನಾಣ್ಯ ಧನ ಕನಕ
ಎಮಗೆ ಬೆಂಬಲವಾಗಿ ಎಮ್ಮವರಿರುವನಕ.

ಜಾಲಿ ಕಾಲಿ ಜಾಲಿ ಪತ್ರೆ ಉಪ್ಪಲ ಲವಂಗದೋಲೆ
ಕಬ್ಬಿ ಹೋಗೋ ಹೊಲಗೆ । ನಲ್ಲಂ ಜಾಣ ॥
ಚಿಲುಮಿ ಕಾಲೆ ಗಾಯಿಮಾಲೆ ಮುತ್ತಿನ ಬಿಚ್ಚೋಲಿಗೋಲೆ
ಹೋಗುವ ಕಣೆ ಜಾತ್ರೆಗೆ । ಶಿಂಗಾರ ಜಾಣೆ ।
ಬಾರೆ ನನ್ನ ಜೊತೆಯಾಗಿ । ಶಿಂಗಾರ ಜಾಣೆ ॥
ಮುತ್ತಿನ ಜುಂಕಿ ಮುಟ್ಟಿ ತೊಡುವೆ
ವಂಕಿ ಗಿಂಕಿ ತಬ್ಬಿ ತೊಡುವೆ
ಹೋಗುವ ಕಣೆ ಜಾತ್ರೆಗೆ । ಶಿಂಗಾರ ಜಾಣೆ ॥
ವಂಕಿ ಗಿಂಕಿ ಧರಿಸುವಳಲ್ಲ ಬಂಗಾರ ತೋಳಲಿ ತಿರುಗುವಳಲ್ಲ
ಬರುವಳಲ್ಲ ಜಾತ್ರೆಗೆ । ನಲ್ಲಂ ಜಾಣ
ಇರುವಳಲ್ಲ ಮನೆಯೊಳಗೆ । ನಲ್ಲಂ ಜಾಣ ॥
ವಾಲೆ ಗೀಲೆ ಮುಟ್ಟಿ ತೊಡುವೆ ಬೆಳ್ಳಿಗೆಜ್ಜೆ ತಬ್ಬಿ ತೊಡುವೆ
ಹೋಗುವ ಕಣೆ ಜಾತ್ರೆಗೆ । ಬಂಗಾರ ಜಾಣೆ ।
ಗೆಜ್ಜೆ ಗಿಜ್ಜೆ ತೊಡುವಳಲ್ಲ ಬರಿಯ ಕಾಲಲಿ ತಿರುಗುವಳಲ್ಲ
ಬರುವಳಲ್ಲ ಜಾತ್ರೆಗೆ । ನಲ್ಲಂ ಜಾಣ ॥
ಸರಬಳೆ ತೊಟ್ಟನಂತ ಜೋಡಿ ಬಳೆ ಬಿಟ್ಟಿದ್ದಳಲ್ಲ
ಕೈಯೊಳಗಿನ ಕಿತ್ತಿಲಲ್ಲ । ನಲ್ಲಂ ಜಾಣ ॥
ಸರಬಳೆ ತೊಟ್ಟನಂತ ಕೆಬ್ಬಿ ರುತ್ರ ತಪ ಹೋಲದ

ಹೊನ್ನ ಕೊಡ ಹೊತಲಿಲ್ಲ । ಶಿಂಗಾರ ಜಾಣೆ ।
ನೀರೆ ಹುಟ್ಟು ತವರಿನಂತ ಹಾಂಯ ಬಾವಿ ಹಿರಿಯವ್ವಳ್ಳ
ಕೈಯಬಾವಿ ಕಡಿಲಿಲ್ಲ । ಸಲ್ಲಾರ ಜಾಣ ।
ನೀರೆ ಹುಟ್ಟು ತವರಿನಂತ ಬಾಳೆ ಹಣ್ಣಿನ ಗೊನೆ
ಬಿಜ್ಜ ಬಾಳೆ ಹೊರಲಿಲ್ಲ । ಶಿಂಗಾರ ಜಾಣೆ ।।
ನಿಲಯಸಂತ ನೀಲಸು ಬಾರೆ ಕೇಳಸಂತ ನಾನು ಬರಲೆ
ಕುಂತು ನಿಂತು ಮಾತನಾಡಲಿಲ್ಲ । ಶಿಂಗಾರ ಜಾಣೆ ।
ಜಾತ್ರೆಸಂತ ನೀಲಸು ಬಾರೆ ಬಿಂದಿಗೆಸಂತ ನಾನು ಬರಲೆ
ಬಿಜ್ಜ ಕುಂತು ಮಾತನಾಡಲಿಲ್ಲ । ಶಿಂಗಾರ ಜಾಣೆ ।
ಜಾತ್ರೆಸಂತ ನಾ ಹೋಂತ ಜಾತ್ರೆ ನೀಲಸು ಬರಲಿಲ್ಲ
ನಮ್ಮ ಮನೆ ಬರಲಿಲ್ಲ । ಸಲ್ಲಾರ ಜಾಣ ।।

ಜಯದೇವ

ನಾಥ ಹರೇ ಜಗನ್ನಾಥ ಹರೇ
ಪಶ್ಯತಿ ದಿಶಿ ದಿಶಿ ರಹಸಿ ಭವಂತಂ
ತದಧರ ಮಧುರ ಮಧೂನಿ ಪಿಬಂತಂ
ನಾಥ ಹರೇ! ಸೀದತಿ ರಾಧಾ ವಾಸಗೃಹೇ ||
ತ್ವದಭಿಸರಣ ರಭಸೇನ ವಲಂತೀ
ಪತತಿ ಪದಾನಿ ಕಿಯಂತಿ ಚಲಂತೀ ||
ವಿಹಿತ ವಿಶದ ಕಿಸಲಯ ವಲಯಾ
ಜೀವತಿ ಪರಮಿಹ ತವ ರತಿ ಕಲಯಾ ||
ಮುಹುರವಲೋಕಿತ ಮಂಡನಲೀಲಾ
ಮಧುರಿಪುರಹಮಿತಿ ಭಾವನ ಶೀಲಾ ||
ತ್ವರಿತಮುಪೈತಿ ನ ಕಥಮಭಿಸಾರಂ
ಹರಿರಿತಿ ವದತಿ ಸಖೀಮನುವಾರಂ ||
ಶ್ಲಿಷ್ಯತಿ ಚುಂಬತಿ ಜಲಧರ ಕಲ್ಪಂ
ಹರಿರುಪಗತ ಇತಿ ತಿಮಿರಮನಲ್ಪಂ ||
ಭವತಿ ವಿಲಂಬಿನಿ ವಿಗಲಿತ ಲಜ್ಜಾ
ವಿಲಪತಿ ರೋದಿತಿ ವಾಸಕ ಸಜ್ಜಾ ||
ಶ್ರೀ ಜಯದೇವ ಕವೇರಿದಮುದಿತಂ
ರಸಿಕಜನಂ ತನುತಾಮತಿಮುದಿತಂ ||

ರತಿಸುಖಸಾರೇ ಗತಮಭಿಸಾರೇ ಮದನಮನೋಹರ ವೇಷಂ
ನ ಕುರು ನಿತಂಬಿನಿ! ಗಮನವಿಲಂಬನಮನುಸರ ತಂ ಹೃದಯೇಶಂ
ಧೀರಸಮೀರೇ ಯಮುನಾತೀರೇ ವಸತಿ ವನೇ ವನಮಾಲೀ
ಗೋಪೀ ಪೀನಪಯೋಧರ ಮರ್ದನ ಚಂಚಲ ಕರಯುಗ ಶಾಲೀ
ನಾಮಸಮೇತಂ ಕೃತಸಂಕೇತಂ ವಾದಯತೇ ಮೃದುವೇಣುಂ
ಬಹು ಮನುತೇ ತನು ತೇ ತನುಸಂಗತ ಪವನಚಲಿತಮಪಿ ರೇಣುಂ
ಪತತಿ ಪತತ್ರೇ ವಿಚಲತಿ ಪತ್ರೇ ಶಂಕಿತ ಭವದುಪಯಾನಂ
ರಚಯತಿ ಶಯನಂ ಸಚಕಿತನಯನಂ ಪಶ್ಯತಿ ತವ ಪಂಥಾನಂ
ಮುಖರಮಧೀರಂ ತ್ಯಜ ಮಂಜೀರಂ ರಿಪುಮಿವ ಕೇಲಿಸುಲೋಲಂ
ಚಲ ಸಖಿ! ಕುಂಜಂ ಸತಿಮಿರಪುಂಜಂ ಶೀಲಯ ನೀಲನಿಚೋಲಂ।
ಉರಸಿ ಮುರಾರೇರುಪಹಿತಹಾರೇ ಘನ ಇವ ತರಲಬಲಾಕೇ
ತಡಿದಿವ ಪೀತೇ! ರತಿವಿಪರೀತೇ ರಾಜಸಿ ಸುಕೃತವಿಪಾಕೇ ॥
ವಿಗಲಿತವಸನಂ ಪರಿಹೃತರಸನಂ ಘಟಯ ಜಘನಮಪಿಧಾನಂ
ಕಿಸಲಯಶಯನೇ ಪಂಕಜನಯನೇ ನಿಧಿಮಿವ ಹರ್ಷನಿದಾನಂ ॥
ಹರಿರಭಿಮಾನೀ ರಜನಿರಿದಾನೀಮಿಯಮಪಿ ಯಾತಿ ವಿರಾಮಂ
ಕುರು ಮಮ ವಚನಂ ಸತ್ವರರಚನಂ ಪೂರಯ ಮಧುರಿಪುಕಾಮಂ।
ಶ್ರೀಜಯದೇವೇ ಕೃತಹರಿಸೇವೇ ಭಣತಿ ಪರಮರಮಣೀಯಂ
ಪ್ರಮುದಿತಹೃದಯಂ ಹರಿಮತಿಸದಯಂ ನಮತ ಸುಕೃತಕಮನೀಯಂ

ಒಕ್ಕಲುವ

ಬೇಂದ್ರೆ

ಯಾರವ್ವಾ ಇವ ಒಕ್ಕಲುವಾ
ತನ್ನಷ್ಟಕ್ಕs
ತಾನs ನೋಡಿ ನಲಿವಾ!

೧

ನಗಿಂಯೊಂದು ಬಗಿಂಯಾದಾ
ಕಣ್ಣ ಹಿಗ್ಗಿನ ತೇಲದಾ
ಒಕ್ಕವತಿಲ ಒಕ್ಕಂದ್ರ ಮನೆಯೊಳಲುವಾ ;
ಒಕ್ಕವತಿಲ ಒಕ್ಕಂದ್ರಮ್ಯ ಕೆಳಗ
ಹುಣಿಶಿ ಹಾಲಿದ್ಯಾಂಗ
ಹೊಳಲುವಾ ಹುಣಿಯೊಳಲುವಾ
ನೋಡವ್ವಾ ಯಾರವ್ವಾ ಇವ ಒಕ್ಕಲುವಾ

೨

ಒಡೆದಿಲ್ಲs ಇನ್ನೂ ಮುಕವಾನಿ
ಒಡೆದಿಲ್ಲ;
ತೊಡೆದಿಲ್ಲs ಇನ್ನೂ ತುಂಬಿರಾಲು
ತೊಡೆದಿಲ್ಲ;
ಹಿಡಿದಿಲ್ಲs ಕಣ್ಣಿಗೆ ಹೊಸಬುಚ್ಕು
ಹಿಡಿದಿಲ್ಲ.

೨

ನೆಂಬಿಕೊಂಡಿರಲಾಕ
ತುಪ್ಪಳ ತಲೆದಿಂಬೋ
ಎಂಬೋ ತೋಳ್ಳದು ಬಲವಾ
ಕಂಡವರ ಕಣ್ಣಾನ್ನ
ಸೋತಾಗ ಸೆರೆಹಿಡಿದು
ಇರುವಂಥ ಎದೆ ಹರವಾ
ನೋಡಪ್ಪಾ
ನೋಡಪ್ಪಾ ನನನೆಣತಿ
ಮೊಲೆಗೂಸು ಇರುವಾಗಿನ
ಕಾಮಣ್ಣನೋಲು ಕಾಣುವಾ
ಯಾರಪ್ಪಾ ಇವ ಚೆಲುವಾ
ತನ್ನಪ್ಪಕ್ಕ
ತಾನ್ನ ನೋಡಿ ನಲವಾ!

—

ಸ್ತನವಿನಿಹಿತಮಪಿ ಹಾರಮುದಾರಂ
ಸಾ ಮನುತೇ ಕೃಶತನುರಿವ ಭಾರಂ
ರಾಧಿಕಾ ತವ ವಿರಹೇ ಕೇಶವ ॥
ಸರಸಮಸೃಣಮಪಿ ಮಲಯಜಪಂಕಂ
ಪಶ್ಯತಿ ವಿಷಮಿವ ವಪುಷಿ ಸಶಂಕಂ ॥
ಶ್ವಸಿತ ಪವನ ಮನುಪಮ ಪರಿಣಾಹಂ
ಮದನ ದಹನಮಿವ ವಹತಿ ಸದಾಹಂ ॥
ದಿಶಿ ದಿಶಿ ಕಿರತಿ ಸಜಲ ಕಣಜಾಲಂ
ನಯನನಲಿನಮಿವ ವಿಗಲಿತನಾಲಂ ॥
ತ್ಯಜತಿ ನ ಪಾಣಿತಲೇನ ಕಪೋಲಂ
ಬಾಲಶಶಿನಮಿವ ಸಾಯಮಲೋಲಂ ॥
ನಯನವಿಷಯಮಪಿ ಕಿಸಲಯತಲ್ಪಂ
ಕಲಯತಿ ವಿಹಿತ ಹುತಾಶ ವಿಕಲ್ಪಂ ॥
ಹರಿರಿತಿ ಹರಿರಿತಿ ಜಪತಿ ಸಕಾಮಂ
ವಿರಹ ವಿಹಿತ ಮರಣೇವ ನಿಕಾಮಂ ॥
ಶ್ರೀಜಯದೇವ ಭಣಿತಮಿತಿ ಗೀತಂ
ಸುಖಯತು ಕೇಶವಪದಮುಪನೀತಂ ॥

ಒಂದು ಸಣ್ಣ ಹಕ್ಕಿಗೆ.

ಪಲ್ಲವಿ

ಕುವೆಂಪು

“ನಿನಗೆ ನಾನು, ನನಗೆ ನೀನು,
ಸಣ್ಣ ಹಕ್ಕಿಯೆ ;
ಹಾಡು, ಕೇಳಿ ನಲಿವೆ ನಾನು,
ಬಣ್ಣ ಚುಕ್ಕಿಯೆ.
ಕೇಳ್ವರೇನು ಬಿಚ್ಚರೇನು
ಉಳಿದ ಲೋಕವು ?
ಉಲಿಯೆ ನೀನು, ನಲಿಯೆ ನಾನು,
ನಮಗೆ ನಾಕವು !”

ಆಗ ತಾನೆ ಮೂಡುತಿತ್ತು
ಪುಷ್ಯ ದಿನಮಣಿ.
ಕಟ್ಟುತಿದ್ದ ಮನೆಯ ಬಳಿ
ನೆಟ್ಟ ಬಿದಿರ ನೆತ್ತಿಯಲಿ
ಪುಟ್ಟದೊಂದು ಚಿಕ್ಕ ಹಕ್ಕಿ
(ಬಾನಿಗೆದುರು ಕರಿಯ ಚುಕ್ಕಿ !)
ನಲಿದು ಚಿಲಿಪಿಯನುಕ್ಕಿಯುಕ್ಕಿ
ತನ್ನ ಸುಖಕೆ ತಾನೆ ಉಕ್ಕಿ
ತನಗೆ ತಾನೆ ಹಾಡುತಿತ್ತು
ತನ್ನ ಮನದಣಿ !

ರಸ್ತೆಯಲ್ಲಿ ನಡೆವ ಮಂದಿ
(ಮುಕ್ತಿಗೆದುರು ಮುಂದೆ ಬಂದಿ!)
ಹಾಳು ಹರಟೆಗೊರೆಯ ಹೊತ್ತು
ಕೇಳ್ದ ಹದನು ಸಾಗುತಿತ್ತು.
ಜನರು ಕೇಳಲಿಲ್ಲವೆಂದು
ನಾಣ್ಚಲಿಲ್ಲ, ಮುಳಿಯಲಿಲ್ಲ,
ನಿಲಿಸಲಿಲ್ಲ ತನ್ನ ಸೊಲ್ಲ ;
ಕಿವಿಗೆ ಗಾನ ಸಖ್ಯವಾಯಿತ್ತು,
ಕವಿಗೆ ಹರಹ ತೀರ್ಥವಾಯಿತ್ತು
ತನಗೆ ತಾನೆ ಹಾಡುತಿತ್ತು
ಹಕ್ಕಿ ಮನದಣಿ !

“ನಿನಗೆ ನಾನು ನನಗೆ ನೀನು...
ಎಂದು ಹಾಡುತಿರಲು ನಾನು,
ಕೆಂಕವಾಗಿ ಮೂಡು ಬಾನು
ಆಗ ತಾನೆ ಮೂಡುತಿತ್ತು
ಪುಷ್ಯ ದಿನಮಣಿ !

೬. ೧. ೧೯೩೭.

ಜಯತು ಜಯತು ಜಯತು ರಘುವೀರ್
ಹರ ಹರ ಹರ ಮಹದೇವ
ಪಡುಗಡಲಿನ ತೆರೆ ದಡಗಳ ಬಡಿದು
ಕರೆಯುದ್ದಕು ಜಯಭೇರಿಯ ಹೊಡೆದು
ಹಾಡುತಲಿರುವುದ ನಾಮಾವಳಿಸುವಾ
ಎಲ್ಲರ ಕಂಠದ ಜತೆಗೂಡಿಸುವಾ
ಗಡಗಳ ನಡುವಿನ ಹೆದ್ದಾರಿನಲಿ
ಮೊರೆಯುವ ಬಿರುಗಾಳಿಯ ಹುಯ್ಲಿನಲಿ
ಕಗ್ಗಲ್ಲಿನ ನೀರವ ಸುಯ್ಲಿನಲಿ
ಏನನು ಕೇಳ್ವುದು ಏನದನಿಗಳಲಿ
ಶಿವನೃತ್ಯದ ರಣ ಕುಣಿತದ ಗೀತ
ಸ್ವಾಮಿ ಸಮರ್ಥರ ಸುರ ಸಂಗೀತ
ರಣವಾಣಿಯುದಿಲ ವೀರೋದ್ಘೋಷ
ಸಂನ್ಯಾಸಿಯ ಬಲುವಿನ ಹೃದ್ಘೋಷ
ಇಂದೂ ಸ್ವಾತಂತ್ರ್ಯದ ಕ್ರಾಂತಿ ಪದ
ಹಂಚಯ ನುಡಿ ಜಾಗೃತ ಭಾರತದ
ಭೋರಿಡುಲಿ ನಿರಾತಂಕ ಅಡಗಿಸುತ
ವೈರಿಯ ಎದೆ ಗಡ ಗಡ ನಡುಗಿಸುತ

ದಾಶ ಪಾಶ ದಿಗ್ವಿಜಯಕೆ
ಸ್ವಾಭಿಮಾನ ಭರಿತ ಹೃದಯಕೆ
ಸ್ವತಂತ್ರ ಜನತೆಯಿದೆಂದು ಬೆಂಕಿ ಆರದೆಂದು ಆರದು
ಮಾತೃಭೂಮಿಗಳಿವು ದಾಸ್ಯ ಬಾರದೆಂದು ಬಾರದು ॥
ಹಸಿರು ಘಟ್ಟ ಹಿಮದ ಬೆಟ್ಟ ಜಲಧಿ ಗಗನ ನಮ್ಮದು
ದುಷ್ಟತನದ ಮೆಟ್ಟಿ ನಿಲುವ ನ್ಯಾಯ ನಿತ್ಯ ನಮ್ಮದು
ಪ್ರಿಯ ಸ್ವದೇಶ ರಕ್ಷಣಾರ್ಥ ಹೋರಾಟವಿದೋ ಹೋರಾಟವು
ಕಡೆಯತನಕ ಗೆಲ್ಲುವನಕ ನಿಲ್ಲೆವೆಲ್ಲ ನಿಲ್ಲೆವು ॥
ನೀತಿಯುಳ್ಳ ಸ್ಪರ್ಧೆ ಬೆಳೆದು ಬರುತ್ತು ಕಾವಿನಿಂತಲಿ
ಜಗದ ಜೀವ ತಣಿಸುತಿರಲು ಅಮರ ನಿರುತರ ಪಂಕ್ತಲಿ
ಅಣುವಿನಸ್ತ್ರ ಕ್ಷಿಪಣಿ ಶಸ್ತ್ರವಿರಲು ದಿನವು ದಿಟವಿದುತ
ದಿಗ್ದಿಗಂತದೆಲ್ಲ ಕಡೆಗೆ ಶಾಂತಿಯನ್ನು ಹರಡುವ ಸ್ವಾಗತ
ರಾಷ್ಟ್ರಯಜ್ಞದಗ್ನಿಯೊಡನೆ ಬಾಳ ಸಮಿಧೆ ಬೆಳೆಯಲಿ
ಸ್ವಾತಂತ್ರ್ಯ ಕ್ರಾಂತಿಯಂಗೆ ರುಧಿರದಾಜ್ಯವೆರೆಯಲಿ
ಭೂಮಿ ನಾದಿ ತಳದಲಿಂದು ಮೂಳೆ ಮೂಳೆ ಬೀಳಲಿ
ಹೊಸತು ಬಾಳ್ವ ವರವಿಶಾಲ ನಾಡ ಸೌಧವೇಳಲಿ. ॥

ಬೇಕು.

ದಂತು ಸಮುದ್ರ — ಬೇಂದ್ರೆ.

ಮೈಯಿಗೆ ಅನ್ನವು ಸಿಕ್ಕುವ ಹಾಗೆ
ಉಳಬೇಕು, ನೆಲ ಉಳಬೇಕು.
ನವಬೀಜದ ಹೊಸ ಬಿತ್ತಿಗೆಗಾಗಿ
ಬಿಡಬೇಕು, ಹೊಲ ಬಿಡಬೇಕು.
ಬಂದ ಬೆಳೆಯೆಂಬುದು ಹುಳು ಕಳೆಯುವದ ಹಾಗೆ
ಇಡಬೇಕು, ಕಾಯಿಡಬೇಕು.
ಒಬ್ಬಗೆ ಬಂದುದು ಎಲ್ಲರಿಗುಂಟು
ಕೊಡಬೇಕು, ಹಂಚಿ ಕೊಡಬೇಕು.
ಕೊಟ್ಟ ದೇವನಿಗೆ ಕೊಡುವೆನು ಎಂದು
ತೊಡಬೇಕು, ಹಣ ತೊಡಬೇಕು.
ಜೀವ ಜೀವಗಳ ಗೆಳೆಯನು ಆಗಿ
ಪಡಬೇಕು, ಸುಖಪಡಬೇಕು.
ದೇವದೇವನಿಗೆ ವಾಹನವಾಗಿ
ನೆಡಬೇಕು, ಗುಡಿ ನೆಡಬೇಕು
ಅರವಿಂದರ ಮಕರಂದದ ಕುಡಿದಾ
ನುಡಿ ಬೇಕು, ಬೆಳ್ನುಡಿ ಬೇಕು.

ಇಕ್ಕಟ್ಟು.

ಶಿಲಾಲತೆ. ಕೆ. ಎಸ್. ನ.

ಚಳಿಗಾಲ ಬಂದಾಗ, 'ಎಷ್ಟು ಚಳಿ?' ಎಂದರು;
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆ'ಂದರು;
ಮಳೆ ಬಿತ್ತೊ, 'ಬಿಡದಲ್ಲ ಶನಿ!' ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲವಲ್ಲ, ಜೋಕೆ!
ಚಿಗುರ ಚಿನ್ನದ ನಡುವೆ ಹೂವ ಬಯಸುವವರು;
ಹೂಗಳ ಕಾಲದಲ್ಲಿ ಹಣ್ಣ ಹೊಗಳುವವರು;
'ಹಣ್ಣಿನ ಗಾತ್ರ ಕಿರಿದು' ಎಂದಿವರ ಟೀಕೆ.
ಇವರು ಮೆಚ್ಚುವ ವಸ್ತು ಇಲ್ಲವಲ್ಲ, ಜೋಕೆ!

ನಿಂತವರ ಕೇಳುವರು: ನೀನೇಕೆ ನಿಂತೆ?
ಮಲಗಿದರೆ ಗೊಣಗುವರು: ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಂದು ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲವಲ್ಲ, ಜೋಕೆ
ಓದಿದರೆ ಹೇಳುವರು: ಮತ್ತೆಷ್ಟು ಬೆರಗು!
ಬೆಳೆದಿರಲು ಬೆದರುವವರು: ಬರವೆನಗೆ ಹೆಂತು!
ಇವರ ಬಯಕೆಗಳೇನೋ! ಇವರದೇ ಟೀಕೆ.
ಇವರು ಮೆಚ್ಚುವ ವಸ್ತು ಇಲ್ಲವಲ್ಲ, ಜೋಕೆ.

ತವರೂರ ಮನೆ ನೋಡ ಬಂದೆ
ತಾಯಿ ನೆನಪಾಗಿ ಕಣ್ಣೀರ ತಂದೆ ||
ಹುಟ್ಟಿ ಹದಿನಾರು ವರುಷಗಳೆಲ್ಲಾ
ಹೆತ್ತ ತಂದೆ ತಾಯಿಯ ಪ್ರೀತಿಯಲ್ಲಿ
ಹೇಗೆ ಮರೆಯಲಿ ಈ ಮನದಿನೆಲ್ಲಾ
ಮರೆತು ಹೋಗದು ಈ ಬಾಳಿನೆಲ್ಲಾ ||
ನಮ್ಮ ಅಣ್ಣನ ಹೆಂಡತಿಯು ನೋಡಿ
ಕಣ್ಸನ್ನೆಯ ಮಾಡಿದಳು ಕೂಡಿ
ಅಣ್ಣ ಮಾತನಾಡಿಸದೆ ಒಳ ಓಡಿದಾ
ತನ್ನ ನಿರಂತೊಳಗೆ ತಾನೇ ಕುಳಿತಾ ||
ಎತ್ತಿ ಆಡಿಸಿದ ತಂಗಿಯನೇ ಮರೆತ
ಕಣ್ಣೆತ್ತಿಯೂ ನೋಡದೆ ಕುಳಿತ

||

ಎಷ್ಟು ಕಷ್ಟವೆ ಇರಲಮ್ಮ ನಮಗೆ
ಕೊಟ್ಟ ಗಂಡನ ಮನೆ ಶ್ರೇಷ್ಠ ನಾರಿಗೆ
ಹುಟ್ಟಿ ಬೆಳೆದೆನ್ನ ಈ ಮನೆಯ ಬಾಗಿಲಿಗೆ
ಕೈ ಮುಗಿದು ಶರಣೆಂಬೆ ಎಂದೆಂದಿಗೂ ||

ಸೀತಾ ಕಲ್ಯಾಣ ವೈಭೋಗಮೇ ॥
ಪವನಜ ಸ್ತುತಿಪಾತ್ರ ಪಾವನ ಚರಿತ್ರ
ರವಿ ಸೋಮ ವರನೇತ್ರ ರಮಣೀಯ ಗಾತ್ರ ।
ಭಕ್ತ ಜನ ಪರಿಪಾಲ ಭರಿತ ಶರ ಜಾಲ
ಭುಕ್ತಿ ಮುಕ್ತಿದ ಲೀಲ ಭೂದೇವ ಪಾಲ ।
ಪಾಮರಾಸುರ ಭೀಮ ಪರಿಪೂರ್ಣ ಕಾಮ
ಶ್ಯಾಮ ಜಗದಭಿರಾಮ ಸಾಕೇತ ಧಾಮ ।
ಸರ್ವ ಲೋಕಾಧಾರ ಸಮರೈಕ ಧೀರ
ಗರ್ವ ಮಾನಸ ದೂರ ಕನಕಾಗ ಧೀರ ।
ನಿಗಮಾಗಮ ವಿಹಾರ ನಿರುಪಮ ಶರೀರ
ನಗಧರಾಘ ವಿದಾರ ನತ ಲೋಕಾಧಾರ ।
ಪರಮೇಶ ನುತ ಗೀತ ಭವ ಜಲಧಿ ಪೋತ
ತರಣಿ ಕುಲ ಸಂಜಾತ ತ್ಯಾಗರಾಜ ನುತ ॥

ನನ್ ಲಚ್ಚಿ

ತಿರುಮಂತಿಗೆ. ಕೆ. ಎಸ್. ನ

ಯಾರೇ ನೋಡ್ದ್ರು ಯೇನೇ ಹೇಳ್ದ್ರು
ನನ ಲಚ್ಚೀನೇ ಒಳ್ಳೆವ್ಳು.
ಹೆಣ್ಣೈಗೇನೋ ಮಾತಾಡ್ಲಿಕ್ಕೆ
ಆದ್ರೂನೂವೆ ಒಳ್ಳೆವ್ಳು.
ಅಪ್ಪಾಳ ಬಂದು ನಿಂದ್ರೆ ಎದ್ರಿಗ
ಹುಬ್ಬಾರ್ ಮಿಣ್ಕ್ ಹಾಕ್ಕೊಂಡು
ನೇತ್ರ ಕೆಳ್ಗೆ ಕಲ್ಲಗ್ ಮುಚ್ಚ್ತ
ಹೊನ್ನೇರ್ ಕಾಲ್ನ ತುಂಬ್ಕೊಂಡು
ತುಂಬಿದ್ ಕಾಲ್ನ ತೋರ್ಸೋಕೆ ಸುಗ್ಗಿ
ಚಿನ್ನದ್ ಗೊಂಬೆ ನಗ್ತಿತ್ತು
ಬೇಲೂರ್ ಸುತ್ತಾ ಹೂವಿನ್ ಸುಗ್ಗಿ
ಜೀವದ್ ಕಣ್ಣೇ ತೆಗ್ತಿತ್ತು.
ಹುಲ್ಲೆಲ್ಲೆಸೂಂತಾ ಹೊನ್ನೇರನ್ನ
ಒಳ್ಳೆ ಹೆಂಡ್ತಿ ನನ್ ಲಚ್ಚಿ
ಬೆಳ್ ಬೆಳ್ಗಿದ್ದೇರೆ ಬೆಳ್ಕೊಂಡ್ ಬರ್ಲಿ
ಪಚ್ಚೇ ಬಳ್ಳಿ ನನ್ ಲಚ್ಚಿ.
ತೊಟ್ಲು ಬಟ್ಲು ತಂದೋರ್ಯಾರು
ಅವ್ಳೇ ತಾನೇ ನನ್ ಲಚ್ಚಿ

ಬಿಸ್ಲಾಗೆ ಮಳೇಲಿ ನಿಕ್ಕೊಂಡ್ಯಾರು
ಕೊಂಡೋಯ್ತಾರು ನನ ಲಚ್ಚಿ
ಕಣ್ಣಂಗೆ [illegible] ಹಾಕಿ
ಕಾಪಾಡ್ಕೊಳ್ಳೇ ನನ ಲಚ್ಚಿ
ಮಕ್ಕಳ್ನೆಲ್ಲಾ ತೂಗಿ ಸಾಕಿ
ಬೆಳ್ಸ್ಲೇ ಬೇಕ್ರೆ ನನ ಲಚ್ಚಿ
ಜೊತೇಲೆ ಬಂದು ಮನೇಲೆ ನಿಂತು
ನನ್ನೇ ನೋಡ್ತಾಳೆ ನನ ಲಚ್ಚಿ
ಮೋಡದ ಮನೇಲಿ ಮುಂಗಾರ್ ಮಿಂಚು
ಕಾಡಿನ ತುಂಬಾ ನನ ಲಚ್ಚಿ

ಬಿ. ಸಿ.

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮುಡಿಯೊಳಗಿಡಲು ತಂದಿರುವೆವು ,
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.

ಮರೆಮೋಸ ಕೊಂಕುಗಳನರಿಯಲ್ಲವಳು
ಇನಿಸು ವಿಶ್ವಾಸವನು ಕಂಡರಿಯಳು
ಕಷ್ಟಗಳ ಸ್ಪರ್ಶದೆಯೆ ಕಾಣದೆಯೆ ಬೆಳೆದವಳು
ಸಲಹಿಕೊಳ್ಳಿರೀ ಮಗಳನೊಪ್ಪಿಸುವೆವು.
ಕಠಿಣಗಳ ನೆಳಲ ಸುಳಿಯಲದರೆ ಬಾಡುವಳು
ಹಿಮಮಂಜು ಬಳಲಿಸಿದ ಹೂವಿನಂತೆ
ಸುಖದಲ್ಲಿ ದು:ಖದಲ್ಲಿ ಎಲ್ಲ ದೆಸೆಯಿರವಿನಲಿ
ನಿಮ್ಮ ಪಾಲಿಗೆ ನಿಲುವ ಕುವರಿಯಿವಳು.
ನಿಮಗಿವಳು ನೀಡುತಿರೆ ಹಾಲುಹಣ್ಣುಗಳ ಸವಿ
ಎಂದೆಂದು ಅವಳ ನಡೆ ನಿಮ್ಮ ಪರವಾಗಿ
ಎಮ್ಮ ಕುಲ ಮನೆಗಳಿಗೆ ಹೊರಗಾಗಿ ಬಂದಿಹಳು
ನಿಮ್ಮ ಕುಲವನು ಬೆಳಗೆ ಬಂದಿರುವಳು.

ನಿನ್ನ ಮದುವೆಯು ಹೊಂದು ಸುಖವಾಗಿರಲಿ ಮಗುವೆ
ನಿಮ್ಮ ಸೊಸೆ - ಸೋದರಿಯು - ಕೊಳ್ಳುತಿವಳ್ಳ,
ನಿಮ್ಮ ಕೀರುತಿ ಬೆಳೆಯುತಿವಳ್ಳ ಸೌಜನ್ಯದಲಿ
ನಿಮ್ಮ ಕುಲ ಶೀಲಗಳು ಪುರಿಮಳ್ಳಿನಲಿ.
ಹೆತ್ತವರ ಮನೆಯಿಂದು ಹೊರಗಾದೆ, ನೀ ಮಗಳೆ,
ಈ ಮನೆಯು, ಈ ಇವರೆ ನಿನ್ನವರು ಮುಂದೆ;
ಇವರೆ ತಾಯ್ಗಳು, ಸುಖವು, ಭಾಗ್ಯವನು ಬೆಳೆಸುವರು
ಇವರ ದೇವರೆ ನಿನ್ನ ದೇವರುಗಳು.
ನಿಲ್ಲು, ಕಣ್ಣೊರಸಿಕೊ, ನಿಲ್ಲು ತಾಯತ ಹೋಗುವೆವು;
ತಾಯ್ತಿರಾ, ತಂದೆಯರ, ಕೊಳ್ಳುತಿವಳ್ಳ;
ಎರಡು ಮನೆಗಳ ಹೆಸರು ಖ್ಯಾತಿಗಳು ಉಳ್ಳವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು.

ಕಳ್ಳವಳ್ಳ ಪದಬೇಡ । ಮಗಳೇ ॥

ಬಾಗಿ ತಲೆ ಮೇಲೆ ತಪ್ಪಲೆ ಹೊತ್ತು
ನೀರಿಗೋದಾಗ ನೀ ನಿಂತಿಲ್ಲ
ನೀರ ತಪ್ಪಲೆ ಹೊತ್ತು ತಿರುಗಿ ನೋಡದಿರು
ಜಾರಿ ಉಳುಕೀತು ನಿನ್ನ ಕುತ್ತಿಗೆ.
ಅತ್ತೆ ಒಲೆ ಮೇಲೆ ಮಾಡಿ ನೋಡಿಲ್ಲ
ಸುಟ್ಟೀತು ಬೆಂಕಿ ಎಲೆ ಮಗಳೆ
ಸುಟ್ಟೀತು ಬೆಂಕಿ, ನಿನ್ನ ಮಾತ ಬೇಡ
ಕೆಟ್ಟೀತು ಊಟಿಗೆ ಬಲು ಜೋಕೆ.
ಜಂಬೇಡ ನಾ ಬರಲಿಲ್ಲವೆಂದು
ನೋಡುಯುಂತಿರುವೆನು ನಿನ್ನಳಿಯನು
ನೋಡುಯುಂತಿರುವೋ ನಿನ ಗಂಡನ ಕೂಡ
ಮರಳಿ ಬನ್ನಿ ನಿವ್ವು ಮನೆ ಬಂದಾಗ.
ಹರಸಿ ಕಳುಹುವೆನು ಹೋಗಿ ಬಾ ಮಗಳೆ
ಹರಸಿದ ತಾಯ ಮರಬೇಡ
ಹರಸಿದ ತವರಾ ಮರಬೇಡ ಮಗಳೆ
ಹರುಷದಿ ಬಾಳ್ವೆ ಸಾಗಿ ಬಾ.
ಹದಿನಾರು ವರುಷ ನಾ ನಿನ್ನ ಸಲಹಿದೆ
ನಗುತ ಹೋಗಿ ಬಾ ಗಂಡನ ಮನೆಗೆ
ಬಿದಿರಸಂತಿರುವೋ ಕಬ್ಬಿನ ಸಿಪ್ಪೆ
ಕಡಿಗಾಯಿದು ಹದ ನೀರ ಮಗಳೇ.

ಇನ್ನು ಜುಗುಜುವೇಕೆ ? ಭಯವು ಇಲ್ಲ ನಿಮಗೆ
ಇನ್ನುಮೇಲೆ ಆಗಿಹಳು ತಾಕೆ ನಿಮ್ಮವಳೇ.

ರಾಮನ ಪ್ರೀತಿಯ ಸೋದರಿಯಾಗಿ ಇರುವಳೀ ತಂಗಿ
ಎಲ್ಲರ ಒಲವಿನ ಕುಮಾರಿ ಬಾಳ್ವಳೀ ತಂಗಿ
ಭಾವಮೈದುನನ ಬಂಧು ಜನಕೆ ಹಿತವಾಗಿರಲು
ತಾಕೆ ಭಯವೇಕೇ ?

ಹೆತ್ತವರ ಕಣ್ಮಣಿಯನು ಸುಖದಿ ಬೆಳೆಸುವೆವು
ಮನೆಯ ಮಕ್ಕಳ ಮೇಲೆ ನಾವು ತಾಕೆಯು ಕಾಂಬೆವು
ಸ್ವಂತ ಸೋದರಿಯಂತೆ ತಾಕೆ ಸತತ ಬಾಳ್ವಳು
ಚಿಂತೆ ನಿಮಗೇಕೇ ?

ಕಿರಿಯವಳೆ ಮಗಳು ಮೋಹದ ಮುದದಿ ಕ್ಷಮಿಸುತಲಿ
ತಾಯಂದಿರ ಗುಣವನು ತಿದ್ದುತೆ ತಿದ್ದಿ ನಡೆಸುವಂತೆ
ಮುಗ್ಧ ಗುಣವತಿ ತಾಕೆಯನ್ನು ನೋಡಿಕೊಳ್ಳುವ
ತಂಗಿ ಸುಖಿಸಲು

ಪ್ರೀತಿಯ ಕರೆ ಕೇಳ್ದೆ ಅತ್ತನ ಮೊರೆ ಕೇಳ್ದೆ
ನೀ ಮಯಂದು ನಿಂದಿಲ್ಲ ದೀಪ ಹಚ್ಚ
ನಲ್ಲ ನೀ ಬಂದಂದು ಕತ್ತಲೆ ಕಂಡಂದು
ಮನೆಯೆಲ್ಲ ಹೊಳೆದಂತೆ ದೀಪ ಹಚ್ಚ
ಕೆಲಸಕ್ಕೆ ಹೋಗಿರುತ್ತ ಕತ್ತಲೆಯ ಮರೆಯುತ್ತ
ಇರುಳಿಗೆ ಬಂದವಳು ದೀಪ ಹಚ್ಚ
ಬಾನಿನಂಗಳದಲ್ಲಿ ಚಿಕ್ಕಿ ಹೊಳೆದಿರುವಂತೆ
ನನ್ನ ಮನದಂಗಳದಿ ದೀಪ ಹಚ್ಚ
ಹಳೆ ಬಾಳು ಸತ್ತಿತ್ತು ಹೊಸ ಬಾಳು ಹುಟ್ಟಿತ್ತು
ಹೊಸ ಬಾಳು ಹುಟ್ಟಿತ್ತು ದೀಪ ಹಚ್ಚ
ಪ್ರೀತಿಯ ರತಿಗೆ ಬೆಳಕಿನ ಆರತಿ
ಬೆಳಗಲು ಕೊಳ್ಳರತಿ ದೀಪ ಹಚ್ಚ
ನಿತ್ಯ ಮೋಹಕ ರತಿಗೆ ಮಿಂಚಿನ ಚಿತ್ತಾರ
ಆನಂದದ ಹೊಂಗಿರಣ ದೀಪ ಹಚ್ಚ
ನೀನೊಲಿದ ಜ್ಯೋತಿಯಲಿ ನಾನೊಲಿದ ಚೈತನ್ಯ
ಹೊತ್ತ ಬೆಳಕೆಳೆ ದೀಪ ಹಚ್ಚ
ನಮ್ಮಂತರಂಗದ ನಂದದ ~~ದೀ~~ ದೀಪ
ನಂದಾದೀಪವಾಗಿರಲಿ ದೀಪ ಹಚ್ಚ.

ಅನಾದಿ ಗಾನ.

[illegible] [illegible]

ಅನಾದಿಗಾನವು ನಾನು — ಹೇ
ಅನಂತ ಗಾಯಕನೇ — ನಿನ್ನ ॥ಪ॥

ಜಗತಿನಿಷ್ಟು ಈ ಗಾನ ಮಾಧುರ್ಯಕ್ಕಾಗಿ ನಿಂ
ವಿಶ್ವವೆಂಬುವ ಮಹಾ ನಿನ್ನ ವೀಣೆಯನು ;
ನಿನ್ನ ಸ್ಪರ್ಶನಕೆ ಆದಿಯಲಿ ಆ ಜಡವೀಣೆ
ಹಾಡತೊಡಗಿತು ನನ್ನ ಜೀವಗಾನವನು !

ಈ ಗಾನವನು ಕೇಳಿ ರವಿ ಚಂದ್ರ ತಾರಾಳಿ
ಗಾನಲೀಲೆಗೆ ತೊಡಗಿರುವವು ರುಷ್ಟ ತಾಳಿ !
ಕಾಲದೇಶಾಕಾರ ಸತ್ಯ ಮುಕ್ತಿಗಳೆಲ್ಲ
ಆನಂದ ಸೃಷ್ಟಿಯಲಿ ಮೈಮ್ಮ ತಿಳಿದುವೆಲ್ಲ !

ಗಾನವಾಸಂಗದಲಿ ಗಾಯಕನ ಕರೆಯುತಿಹೆ ;
ಚಿರಮಧುರ ನೂತ್ನವಾ ಗೀತರಸಪಾನ :
ಗಾನಗಾಯಕರೊಂದೆ ತಾದಾತ್ಮ್ಯದಲಿ ಲಭಿಸುತಿದೆ
ಕಲ್ಪ ಬುದ್ಬುದಗಳಿಗೆ ಸಂಸಾರ ಸ್ನಾನ !

ಪಂಚಮೀ ಹಬ್ಬ ಉಳಿದಾವ ದಿನ ನಾಕ,
ಅಣ್ಣಾ ಬರಲಿಲ್ಲ ಯಾಕ, ಕರಿಯಾಕ.
ನಮ್ಮ ತೌರೂರು ಗೋಕುಲ ನಗರ
ಮನೆ ಇಂಥಾವು ರಾಜ್ಯ ಮಂದಿರ
ನಮ್ಮ ಅಣ್ಣಯ್ಯ ದೊಡ್ಡ ಸಾವುಕಾರ
ಹೆಂಗಾದೀತ್ಯ ತಂಗೀನ ಮರೆಯಾಕ.
ಮುತ್ತಿನಂಥಾಕಿ ನಮ್ಮತ್ತಿಗೆ
ಆಕೀಗಾಬಳ ಸಸಮ್ಯಗಸ್ಕರೆ
ಎಂದು ನೋಡೇನ ತವರೀಗೆ ಹೋಗಿ
ಬಿಟ್ಟಾಳೇನವ್ವ ಇಲ್ಲೇ ಇರಲಾಕ.
ನಮ್ಮ ತೌರೀಲಿ ಪಂಚಮಿ ಭಾರಿ
ಮಗಾ ತೂಕ ಬಸ್ವಲ ಕೊಬ್ಬರಿ
ಅಳ್ಳು ಅವಲಕ್ಕಿ ತಂಬಿಟ್ಟು ಪುರಿ
ನಾವು ತಿನುವಾಕಿ ಮನಸಕ ಬಂದಾಂಗ.

ಸಾಹಿತ್ಯ ಸಾಗರದ ದಡದಿ ನಿಲ್ಲುತಲಿಂದು
ನೋಡಿದೆನು ಅಸಂಖ್ಯ ಅಲೆಗಳನ್ನೆನೆ
ಒಳಗೆ ಹುದುಗಿಹ ಮುತ್ತು ರತ್ನ
ಕನ್ನಡಮ್ಮನ ಕಿರೀಟ ಮಾಲೆಯಾಗಿಹವು.
ದೂರದಿಂ ಕುಣಿಯುತ್ತ ಹತ್ತಿರಕೆ ಬಂದಿತಲೆ
ನೋಡುತ ದಿಕ್ಕೆಟ್ಟು ಕಾದಿರಲು
ಸಾಗರದಿ ಮುಳುಗುತ್ತ ಮುತ್ತು ರತ್ನವನಾಯುತ್ತ
ಧೈರ್ಯವ ತಾಳದೆ ಹಿಂತೆ ನಿಂತೆ ಭ್ರಮೆಯೊಳಗೆ.
ಎಡೆಯ ಬಿಡದ ಹಾಡಿ ದಡದಿ ಮರಳಿನ ಮೇಲೆ
ಬಿದ್ದಿರುವ ಚಿಪ್ಪುಗಳನ್ನೆ ಆಯ್ದು ತಂದೆ
ಅಮ್ಮನಡಿಗಳಲಿಡುವೆ ಇದುವೆ ಎನ್ನಯ ಸೇವೆ
ಒಪ್ಪಿ ಮುದ್ದಿಸುವುದು ಮಮತೆ.

ನಿತ್ಯೋತ್ಸವ.

ನಿಸಾರ್

ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,
ನಿತ್ಯಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ—
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ....

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ,
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ—
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ....

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ,
ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ,
ಈ ವತ್ಸರ ನಿಮರ್ತ್ಸರ ಮನದುದಾರ ಮಹಿಮೆಯೆ,—
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ....

ಸ್ಮೃತಿ

ನಿಸಾರ್

ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ
ಹೂಡಿ ಬರದಿರು ಮತ್ತೆ ಹಳೆಯ ನೆನಪೇ ;
ಕಲ್ಲಸಂದದಿ ಬಿದ್ದ ತಿಳಿಯಾದ ಎದೆಗೊಳವ
ರಾಡಿಗೊಳಿಸುವೆ ಏಕೆ, ಮಧುರ ನೆನಪೇ ?

ಕಪ್ಪು ಕಾಡಿನ ನೆಟ್ಟ ಸೋಗೆಬರೆ ಚಿತ್ರಣವನ್ನೆ
ತೊಟ್ಟು ಬಂದಾಗ ಹಾಗೆ ಬಾರದಿರು ನೆನಪೇ ;
ಬಿರಿದ ಹೂಗಳ ತುಂಬುನಗೆಯ ಕಾರಣವನ್ನೆ
ಕಂಡು ಕೊಲ್ಲಲು ಬಳಿಗೆ ಬಾರದಿರು ನೆನಪೇ.

ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ನನ್ನ ಮನದಂಗಳಕೆ ಹಾಕದಿರು ನೆನಪೇ ;
ನವ್ಯ ಭವಿತವ್ಯಕ್ಕೆ ಮೊಗವಾಗಿ ನಿಂತಿರುವೆ,
ಬೆನ್ನಲ್ಲೆ ಇರಿಯದಿರು ಓ! ಚೆನ್ನ ನೆನಪೇ.

2∪7

ಮತ್ತದೇ ಬೇಸರ...

ಬಿಸ್ಲಾರ್

ಮತ್ತದೇ ಬೇಸರ, ಅದೇ ಸಂಜೆ, ಅದೇ ಏಕಾಂತ —
ನಿನ್ನ ಜೊತೆಯಿಲ್ಲದೆ, ಮಾತಿಲ್ಲದೆ ಮನ ವಿಭ್ರಾಂತ.

ಕಣ್ಣನೆ ತಣಿಸುವ ಈ ಹಸುರಿನ ಬಣ್ಣಬಣ್ಣಗಳು,
ಮಣ್ಣನೆ ಹೊನ್ನಿನ ಹಣ್ಣಾಗಿಸುವೀ ಕಿರಣಗಳು,
ಹಕ್ಕನೆ ಹಸುರಿಗೆ ಹಾರಿಯಾಡುತಿರುವೀ ಖಗಗಣ —
ಚಿನ್ನ, ನೀನಿಲ್ಲದೆ ಬಿಕ್ಕುತಿದೆ ಹಮ್ಮೀರಾವ್ಯಸ.

ಆಸೆಗಳ ಹಿಂತಿನ ತುಳಿತಕ್ಕೆ ಸೋತ ನನ್ನೀ ದೇಹ ;
ಬರುವೆಯೊ, ಬಾರೆಯೊ ನೀನೆನುತಿದೆ ಹಾ! ಸಂದೇಹ.
ಮುತ್ತಿ ದಾಳಿಸ್ವವ, ಬಿಗಿಮಾನವ ಹೊಡೆದೋಡಿಸು ಬಾ!
ಮತ್ತೆ ಆ ಸಮತೆಯು ಹಿರಿ ಬೇಲಿಯು ಸರಿ ನಿಲ್ಲಿಸು ಬಾ!

ಬಣ್ಣ ಕಳೆದುಕೊಂಡವೆಯು ತೆರ ಮಾಸುತಲಿದೆ ಸೂರ್ಯಾಸ್ತ.
ನೋಡದಗೊ! ತಿಮಿರದ ಬಲೆ ಬೀಸಿದ ಇರುಳಿನ ಹಸ್ತ.
ವ್ಯಕ್ತವಾಗುತ್ತಿದೆ ನಕ್ಷತ್ರಗಳ ಘನ ದಂಡಾಗಿ ;
ನಲವಿನ ಗಳಿಕೆಗೆ ಬಳಗವುಗಳನೊಂದೊಂದಾಗಿ.

ನಾ ನಿನ್ನ ಕಂಡಾಗ

ನಿಸಾರ್

ನಾ ನಿನ್ನ ಕಂಡಾಗ ಎಷ್ಟೊಂದು ನಲಿವಿತ್ತು,
ಎಷ್ಟೊಂದು ಗೆಲುವಿತ್ತು, ಅಷ್ಟೊಂದು ನಗುವಿತ್ತು —
ಹಗಲೆಲ್ಲ ನಿನ್ನ ಧ್ಯಾನ, ಇರುಳೆಲ್ಲ ನಿನ್ನ ಸ್ವಪ್ನ
ನೀ ನಡೆವ ದಾರಿಯಲ್ಲಿ ಹಾಸಿದೆನು ನನ್ನ ಹೃದಯ
ನೀ ಸುಳಿದಕೆನ್ನ ಬಳಿಗೆ ನೆರೆ ಬಂದ ಹಾಗೆ ಹೊಳೆಗೆ
ಹೊಸ ಕನಸಿನಿಂದ ಸಜ್ಜೆ, ನಲವುಕ್ಕಿ ಹಾಡಬಲ್ಲೆ
ಹಾಲ್ಗೆನ್ನೆ ಸುಳಿಗಳಲ್ಲಿ ನಗೆಲಜ್ಜೆಯೆಂಬ ತೇರು;
ಕಣ್ಣಂತು ನಾಗ ಹೆಡೆಯ ಸೆಳೆಯುಂಬತಿನ್ನೆರಡು ಚಕೋರ.
ನನ್ನೆದೆಯ ತೋಟದಲ್ಲಿ ಆ ಹಾಡು ಓ! ಕೋಗಿಲೆ
ಇದ್ದಲ್ಲಿ ಹಕ್ಕಿ ಹಾಡು, ಇಳಿದಿರುವ ಕಾರ್ಮುಗಿಲೇ.
ಹತ್ತಾರು ಚಿಂತೆಯಿರಲಿ, ಬಾಳೆಲ್ಲ ಗೋಳೆ ಇರಲಿ
ನೀ ನಕ್ಕರೆಲ್ಲ ಮರೆವೆ ಸುಖಸ್ವಪ್ನದಲ್ಲಿ ತೇಲಿ
ನೆನೆದಾಗ ನಿನ್ನ ರೂಪ, ಎದೆಗತ್ತಲಲ್ಲಿ ದೀಪ —
ಮನದಿಚ್ಛೆ ಬಿಚ್ಚಿ ನಗಲು, ನನಗಾವ ಚಿಂತೆ, ದಿಗಿಲು ?
ಆ ಮೊಗದ ನೋಟದಂತೆ ಮುತ್ತಿರಲಿ ನಿನ್ನ ಸೊಬಗು
ಅನುಗಾಲ ನನ್ನ ಮನಕೆ ನೀಡಿರಲಿ ತುಂಬು ಬೆರಗು

ನೀಲವು ಬೆಣ್ಣೆಗಳಲ್ಲ

ನಿಸಾರ್

ಬೆಣ್ಣೆ ಕದ್ದ ನಮ್ಮ ಕೃಷ್ಣ—
ಬೆಣ್ಣೆ ಕದ್ದನಮ್ಮ.
ಬೆಣ್ಣೆಯ ಕದ್ದು ಜಾರುತ ಬಿದ್ದು
ಮೊಣಕಾಲು ಒಡೆಸಿಕೊಂಡ.
ಬಂದಿಗೆ ಬಿದ್ದು ಸಿಡಿಯಲು ಸದ್ದು
ಬೆಚ್ಚಿದ ರಾಧೆಯ ಗಂಡ,
ಬೆಣ್ಣೆ ಕದ್ದ.....
ಬಾಯಿ ಬಂದಲ್ಲೋಡಿ
ಕಳ್ಳನ ಕಣ್ಣಿನಲ್ಲಿ ಕೋಟಿ!
ಕಣ್ಣಲಿ ಆಸೆ ಸಿಟ್ಟನು ತಾಳಿ
ಸೊಂಟಕೆ ಕೈಯಿಟ್ಟು,
ಬಂದಳು ಅರೆಬರೆ ಭೀಕರ ತಾಳಿ
ಗುರುಗುರು ಕಸ್ ಬಿಟ್ಟು!
ಬಾಗೆ ತುಟಿ ಕೆನ್ನೆಗೆ ಬೆಣ್ಣೆ ಮೆತ್ತಿದ
ತರಟನ ನೋಟಕ್ಕೆ
ಒಡೆಯಿತು ಕೋಪ ಉಕ್ಕಿತು ಕಂದುವಿ
ತುಂಟನ ಆಟಕ್ಕೆ.

ತೊಟ್ಟಿಲ ಕಂದಕೆ ನಿದ್ರೆಯ ಸಿರಿಯೆಲ್ಲ
ಬೆಣ್ಣೆಗಳಲ್ಲ ನೀಲ.
ತಕ್ಷಣೆ ಓಟುತ್ತಾರ ನಿಲ್ಲಿಸಿ ನಕ್ಕ
ಬಾಯಿಗಳಿಸಿ ಬಾಲ—
ಜರತಿಗ ಬೆಳುದಿಂಗಳ ಜಾಲ—

ಅವನ ಬಿಕ್ಕಿಲು ಬೆಣ್ಣೆಯಂಥ ನಗು
ಕಾಯಲಿ ಜಗದವರ;
ಸಂತತ ನಗಿಸಲಿ ನಗಿಸಲಿ ನಗದವರ

ಬೆಣ್ಣೆ ಕದ್ದ ನಮ್ಮ ಕೃಷ್ಣ—
ಬೆಣ್ಣೆ ಕದ್ದನಮ್ಮ.......

ಮೆಟ್ಟುವ ನೆಲ ಕರ್ನಾಟಕ.

ಕನ್ನಡ ಡಿಂಡಿಮ: ಕುವೆಂಪು

ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು !
ನೀ ಮೆಟ್ಟುವ ನೆಲ — ಅದೆ ಕರ್ನಾಟಕ ;
ನೀನೇರುವ ಮಲೆ — ಸಹ್ಯಾದ್ರಿ.
ನೀ ಮುಟ್ಟುವ ಮರ — ಶ್ರೀಗಂಧದ ಮರ ;
ನೀ ಕುಡಿಯುವ ನೀರ್ — ಕಾವೇರಿ.
ಪಂಪನನೋದುವ ನಿನ್ನಾ ನಾಲಗೆ
ಕನ್ನಡವೇ ಸತ್ಯ,
ಕುಮಾರವ್ಯಾಸನನಾಲಿಸು ಕಿವಿಯದು
ಕನ್ನಡವೇ ನಿತ್ಯ.
ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪಂಪನ ಬನವಾಸಿಗೆ ಕರಗುವ ಮನ ;—
ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿಗೆ ಹೊಂಪುಳಿವೋಗುವ ಮನ ;—

ಕಾಜಾಣಕೆ ಗಿಳಿ ಕೋಗಿಲೆಯುಲಿಯಿಗೆ,
ಮಲ್ಲಿಗೆ ಸಂಪಗೆ ಕೇದಗೆ ಸೇವಂತಿಗೆ,
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸ ರೋಮಾಂಚನಗೊಳ್ಳುವಾತನ ಮನ
ಎಲ್ಲಿದ್ದರೆ ಏನ್? ಎಂತಿದ್ದರೆ ಏನ್
ಎಂದೆಂದಿಗು ತಾನ್ —

ಕನ್ನಡವೇ ಸತ್ಯ !
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯ !

[illegible] [illegible]

ಇಂದ್ರ ದಿಗಂತದಿ

ಇಂದ್ರ ದಿಗಂತದಿ ಪೂರಾಪ್ಪುರಂ
ಪ್ರಾತಃ ಸ್ಮರಣ ಸ್ವರ್ಣದ್ವಾರಂ
ನೋಡದೊ ತೆರೆಯುತಿದೆ ;
ಲೋಕದ ನಯನಗವಾಕ್ಷಗಳೆಚ್ಚರುತೆ
ನೋಡಾಸಿ ತೆರೆಯುತಿದೆ !
ಮುಗಿಲಿನ ಬಾನಿನ ಕುಂಕುಮ ಚೆಲ್ಲುತೆ
ಮಳೆಬಿಲ್ಲ ರೇಖೆಯು ಬಣ್ಣಗಳ ನೆಯ್ಯುತೆ
ಹೊಂಬೆಳಕೆ ಹರಿಯುತಿದೆ ;
ಕಾನನ ಚಿನ್ನದ ಪತ್ರಗಳಿಂದದಿ
ಕವಿಯಂತೆ ಮೊರೆಯುತಿದೆ !
ಕಾಳಿದಾಸ ಪ್ರತಿಭೆಯ ಜಲಧಿ ಕಲ್ಲೋಲಂ
ಸ್ವರ್ಣಪ್ರವಹನ ಕುಸುಮೋದ್ಯಾನಂ
ರತಿಯಂತೊಳಗಿರುವಂತೆ !
ಶ್ರೀಕೃಷ್ಣನ ಶಂಖನಿನಾದ ಸಾಮಗಾನ್ಯತೆ
ಕೇಳಿಯುದೆ ಕೊನ್ನಂತೆ ?
ಉತ್ತಮ ವೈಭವ ದೃಶ್ಯದ ರಾಶಿ
ಸುವಿದಿತದೆನಿತೋ ಸಾವಿರ ಸಾರಿ ,
ಬೆಂದುಂಬಿ ಜೇನಂತೆ !
ನಲಿದಿರುವದೆ ಇಂತೇ ಪ್ರತಿದಿನವು
ಅದೆ ಮೊದಲೆಂಬಂತೆ !

ಅಂತರ್ವಾಣಿ

[illegible] ಕುವೆಂಪು

ಒಂದಲ್ಲ ಒಂದು ದಿನ ನೀನೆಲ್ಲ ತೊರೆವೆ;
ಒಂದೆಡೆಯೊಳೆಲ್ಲರೊಮ್ಮನದೊಳೆನ್ನೆಡೆಗೆ ಬರುವೆ!

ನೂರು ಆವೇಶಗಳು, ನೂರಾರು ವೇಷಗಳು,
ರೋಷ ಸಂತೋಷಗಳು ಎಲ್ಲ ಕೊನೆಮುಟ್ಟಿ,
ಜೀವನೋದ್ಯಾನದಲಿ ಕುಸುಮ ವೃಂದದ ಕಾಂತಿ
ಮಸುಳಾಗಿ ಮೃತ್ಯು ಬಂದು ಬಾಗಿಲನು ತಟ್ಟಿ;

ಇಂದು ನಿನ್ನಯ ಕಣ್ಣ ಸೆಳೆವ ಕಣ್ಣುಗಳೆಲ್ಲ,
ಇಂದು ಕೆಂದುಟಿಗಳನು ಕರೆವ ಕೆನ್ನೆಗಳು,
ಇಂದಿನ ಯಶೋಲೋಭ, ಇಂದಿನ ಮಹತ್ವಾಕಾಂಕ್ಷೆ,
ಅಂದೆಲ್ಲ ನಿನಗವು ಬರಿಯ ಸೊನ್ನೆಗಳು.

ಅಂದು ನನ್ನೊಬ್ಬನನೆ ನೆನೆವ ನಿನ್ನೆದೆಯಲ್ಲಿ
ಬೆಳಕು ಹೊಳೆ ಹರಿಯುವುದು ಕತ್ತಲೆಯ ಕೊಚ್ಚಿ;
ಜಗವೆಲ್ಲ ಜಾರುವುದು; ಒಲ್ಮೆ ಮೈದೋರುವುದು;
ಬಾಳ್ಗೊನೆಯಲಿ ಹರಿವುದೆನ್ನನೆ ನಚ್ಚಿ ನೆಚ್ಚಿ!

ನೀನು - ನಾನು.

'ನಾಮನಾಗ' ಜಿ. ಎಸ್.

ನೀಲಾಕಾಶದ ತಾರಗೆ ನೀನು.
ನಿನ್ನನು ನೋಡುತ ಕಣ್ಣೊಲುಕ್ಕುವ
ಮರ್ತ್ಯದ ಮಣ್ಣಿನ ಹುಳು ನಾನು. —
ದಿವ್ಯ ಪ್ರಸಾದ ವೈಣಿಕ ನೀನು.
ನಿನ್ನಯ ವಿಪಂಚಿಯಿಂಚರವಾಲಿಸಿ
ಮೈ ಮರೆಯುವ ಹರಿಣಿಯು ನಾನು. —
ಬಂಧುರ ಮಂದಾನಿಲ ನೀನು.
ನಿನ್ನಯ ಸ್ಪರ್ಶಕೆ ಮೈಯುಬ್ಬಿ ತೂಗುತ
ಲಾಸ್ಯವನಾಡುವ ಲತೆ ನಾನು. —
ಸಗ್ಗದ ಹೊಂಬಿಸಿಲಿನ ಕೃಪೆ ನೀನು.
ನಿನ್ನಯ ಸ್ಪರ್ಶಕೆ ಎದೆಯನು ತೆರೆಯುವ
ಸುಂದರ ಹೊಂದಾವರೆ ನಾನು. —
ಭುವನಾಕರ್ಷಣ ಶಕ್ತಿಯು ನೀನು.
ನಿನ್ನ ಸುತ್ತಲೂ ದಿನದಿನ ಸುತ್ತುವ
ಅಗಣಿತ ಜಗತ್ತುಗಳೊಳಗೊಂದಾನು.

ಬಾ, ಬಾ!

ಲೋಗಡಿ. ಕುವೆಂಪು.

ಸುಂದರ ದಿನ, ಸುಂದರ ಇನ,
ಸುಂದರ ವನ, ನೋಡು ಬಾ!
ಎಳಬಿಸಿಲೊಳು ತಿಳಿಗಾಳಿಯೊಳು
ಹುಲ್ಲಲೆಗಳು ನಲಿನಲಿಯುತಲಿ,
ನೋಡು, ಬಾ! ಕೂಡು, ಬಾ!
ಬೇಗ ಬಾ! ಬಾ! ಬಾ!
ತನ್ನೊಲವಲಿ ಹೂಗಳ ಬಳ್ಳಿ
ಸೊಕ್ಕಿದ ಬಳ್ಳಿ! ನೋಡು, ಬಾ!
ಹೊಸ ತಳಿರೊಳು ಬಂಗಾರದೊಳು
ಕೋಗಿಲೆಗಳು ಸುರಗ್ಗಿಯುತಲಿ,
ಹಾಡು, ಬಾ! ಕೂಡು, ಬಾ!
ಬೇಗ ಬಾ! ಬಾ! ಬಾ!
ಜೊತೆಯಿಲ್ಲದೆ ನನ್ನೊಲವೆದೆ
ಕಂಪಿಸುತಿದೆ; ಕೂಡು, ಬಾ!
ಹೊಸ ಹಸುರೆಡೆ, ತಿಳಿಗಾಳಿಯೆಡೆ,
ನಾ ನಿನ್ನೆಡೆ, ನೀ ನನ್ನೆಡೆ!
ಕೂಡು, ಬಾ! ಹಾಡು, ಬಾ!
ಬೇಗ ಬಾ! ಬಾ! ಬಾ!

ಬಾಲ ಗೋಪಾಲ ನಿನ್ನ ಬಾಲನೇನೆ ಗೋಪಮ್ಮ
ಗೋಪಮ್ಮ ನೀ ಕೇಳೆ ಗೋಪಿ ಕಂದಮ್ಮ ಕೇಳೆ
ಗೋಕುಲದೊಳು ಬಂದಿರುವನೆ ಗೋಪಮ್ಮ.
ಬಂದು ಬಂದು ನಮ್ಮ ಕೆಲಸ ಕೆಡಿಸ್ತಾನೆ
ನಂದಗೋಪಾಲನ ಕರಕೊಳ್ಳೆ ಗೋಪಮ್ಮ
ಹಾಲು ಮಾರ್ತಾ ಬಂದಾಳ್ಳಮ್ಮ ನೀಲ ನಾಮದ ಗೊಲ್ಲರ ಬಾಲೆ
ಹಾಲು ಮಾರಿದ ಹುಂಡಿ ಕೆಳ್ಳಿದ ನೀಲ ನಾಮ ತೊಳ್ತಾಳೆ.
ಮೊಸರು ಮಾರ್ತಾ ಬಂದಾಳ್ಳಮ್ಮ ಕಸ್ತೂರಿ ನಾಮದ ಗೊಲ್ಲರ ಬಾಲೆ
ಮೊಸರು ಮಾರಿದ ಹುಂಡಿ ಕೆಳ್ಳಿದ ಕಸ್ತೂರಿ ನಾಮ ತೊಳ್ತಾಳೆ
ಬೆಣ್ಣೆ ಮಾರ್ತಾ ಬಂದಾಳ್ಳಮ್ಮ ಸುಣ್ಣ ನಾಮದ ಗೊಲ್ಲರ ಬಾಲೆ
ಬೆಣ್ಣೆ ಮಾರಿದ ಹುಂಡಿ ಕೆಳ್ಳಿದ ಸುಣ್ಣ ನಾಮ ತೊಳ್ತಾಳೆ
ಕುಸುಮದಳ ನಯನೇಲಿ ರತಿಮರಂಗ ನಾಡುತ
ಕುಸುಮದಳ ನಯನೇಲಿ ಬಾಲನೇನೆ ಗೋಪಮ್ಮ

ಒಡೆಯ ಒಕ್ಕಲಿಗ.

ನಾದಲೀಲೆ

ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು
ಹದ ಬೆದೆಯನರಿತಂಥ ಹೃದಯವಾಗೀ 1

ಗರುವ ತೃಷ್ಣೆಗಳೆಂಬ ಹುಲ್ಲು ಕಳೆಗಳಿಂದ
ಸುರುವನ್ನು ಕಿತ್ತಿಹುದು ನಟ್ಟು ಬೆಳೆದು
ಬರುವ ಹುಗ್ಗಿಯ ಬೆಳೆಯು ಭಾರದಿಂದ ಬರುವಂತೆ
ಗುರುವೆ! ಮಾಡೋ! ಕಲ್ಪತರುವೆ! [illegible] ಮಾಡೋ!

ಕಾಡಿನಂದದಿ ಕರಲು-ಕಲ್ಲಿನಂದದಿ ಎದೆಯು
ಕಾಡುವದು ಕಾಣದೇ ಹಗಲು ಇರುಳೂ
ಮಾಡಿದ್ದು ಬೇಕಾಯ ಮಣ್ಣುಗೂಡುವದಯ್ಯಾ
ಮಾಡಬೇಕಿನ್ನೇನು ಕೃಪ ಸಾಗರಯ್ಯಾ.

ಕೋರಪಾಲಿನ ಮಾತು ಮಾಡಿಕೊಟ್ಟೆನು ನಿನಗೆ
ಯಾರೇಕೆ ಮಧ್ಯಸ್ಥರಿಲ್ಲಿ ಬೇಕು?
ಪಾರು ಮಾಡೆನ್ನ ಹೊಟ್ಟೆಗಿಲ್ಲದೇ ಸಾಯುವೆನು
ತೋರು ಕರುಣಾದ ಕನಸು ಒಡೆಯ ಒಕ್ಕಲಿಗಾ.

ನುಡಿಯೋದಿಂದು ಇವು ಎನ್ನನು ಎತ್ತಿಕೊಳ್ಳುವು !
ಬಸಿರಿನ ಕಾಸಬೇಡಿ ಇವು ನಾನು
ಮುಕ್ತಿಪ್ತಿ ಮಾಡಲಾರೆ.

ಪುಟ 178 ರಿಂದ ಮುಂದುವರೆದುದು.

ನಡುನಿಶೆಯೊಳು ನರ್ತಿಸುವ ಜ್ವಲಿಸುವ ನವ ತಾರೆಯು
ಕಾಮೋಲ್ಲಾಸದ ಕಣ್ ತೆರೆಯಿತು ಸೆಳೆಯುಂಬಿನ ಸಂಚೆಳವೆ
ತಿರೆ ತಿಣ್ಣನೆ ತೆಳೆಯುತಲಿರೆ ತಂಗದಿರನ ಚುಂಬನದಿಂದ
ಮುಗಿಲಮಲ್ಲೆ ಕಾನನ ಅಲೆ ನಾಗಲೋಲ್ಲಾಸದಿಂದ
ಮನದ ಬಯಕೆ ಸೋಲುವುದೆ
ಎದೆಯ ಬೀಣೆ ಕ್ಷಣಗೊಳ್ಳುವೆ
ಸ್ವಪ್ನ ಕುಂಚ ಎನ್ನನೆ
ಶಿಲ್ಪ ಕಲ್ಪ ತಲ್ಪವೆ
ಗಗನಗಂಗೆ ನವತರಂಗೆ ಶಿವ [illegible] ||

ತ್ರಿಭುವನಾವಲ ಜಲಕಣಾವಲ ಘನತರ ಸ್ವರೂಪಿಯು
ದಿಗ ದಿಗಂತರಗಳಲ್ಲಿ ತುಂಬಿ ನೆ[illegible]ರೆದ ತುಂಬಿಯು

ಪುಟ 221 ರಲ್ಲಿ
ಮುಂದುವರಿದೆ

ನೀ ಮೆಟ್ಟುವ ನೆಲ ಕರ್ನಾಟಕ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ

ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ನೀ ಮೆಟ್ಟುವ ನೆಲ — ಅದೆ ಕರ್ನಾಟಕ ;
ನೀನೇರುವ ಮಲೆ — ಸಹ್ಯಾದ್ರಿ.
ನೀ ಮುಟ್ಟುವ ಮರ — ಶ್ರೀಗಂಧದ ಮರ
ನೀ ಕುಡಿಯುವ ನೀರ್ — ಕಾವೇರಿ.

ಪಂಪನನೋದುವ ನಿನ್ನಾ ನಾಲಗೆ
ಕನ್ನಡವೇ ಸತ್ಯ.
ಕುಮಾರವ್ಯಾಸನನಾಲಿಸು ಕಿವಿಯದು
ಕನ್ನಡವೇ ನಿತ್ಯ.

ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಬೇಲೂರಿನ ಬಿನ್ನಾಣಕೆ [illegible]

ಬೆಳ್ಳಿಯ ಬೆಳದಿಂಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿನ ಹೊಂಬಿಸಿಲೊಳ್ ನಲಿಯುವ ಮನ;—

ಹಿಮಾಲಯಕ್ಕೆ ಏಳು ಕೊಳಲೆಯಲಂತಿಗೆ,
ಮಲ್ಲಿಗೆ ಸಂತಿಗೆ ಕೇದಗೆ ಸಂಪಿಗೆ,
ಮಾಲಿನ ಹೊಂಗೆಯ ತಳಿರಿನ ತಂತಿಗೆ
ಬಗೆಬಗೆಯಂತ್ರ ನಗುವಾತನ ಮನ
ಎಲ್ಲಿದ್ದರೆ ಏನ? ಎಂತಿದ್ದರೆ ಏನ?
ಎಂದೆಂದಿಗು ತಾನೆ—
ಕನ್ನಡವೇ ಸತ್ಯ!
ಕನ್ನಡವೇ ನಿತ್ಯ!
ಅನ್ಯವೆನಲದೆ ಮಿಥ್ಯ!

02-4-58

ಒಂದಾಗಿ ಮಿಡಿಯುವ ಬನ್ನಿ, ಒಂದಾಗಿ ದುಡಿಯುವ ಬನ್ನಿ
ಬೇರೆ ಬೆಳೆಯಿತು ಒಂದೇ ನೇರವು ಹೆಗಲಿಗೆ ಹೆಗಲನು ತನ್ನಿ.
ಕರ್ನಾಟಕದೊಳಗೆಲ್ಲೆಲ್ಲೂ ಒಂದೇ ಎಂಬುವ ಭಾವನೆ ಬೆಳಗಿ
ಭೇದ ಭಾವನೆ ಅಳಿಸಿ ಕನ್ನಡ ಒಮ್ಮತ ಬಿಡದು ತಿಳಿ
ಬಿಟ್ಟರೆ ಇರಲು, ನಾಗರಿಕರು, ನಾಚಿಕೆ? ಮನಸಿನ ಮುಂದೆ
ಚಂದದ ಕನ್ನಡನಾಡನು ಕಟ್ಟಲು ಕನ್ನಡ ಕುಲಗಳು ಒಂದೇ!!!
ವಿದ್ಯಾರ್ಥಿಗಳು ಕಟ್ಟಿದ ನಾಡು, ಕನ್ನಡ ನಾಡೆಂದು ಬೀಡು
ನಡೆನುಡಿ ನಾಡಿಗೆ, ಒಂದಾಗಿ! ನೋಡು ಇಂದು ಹೊಂದಿದ ನಾಡು.
ವಿಚಿತ್ರವಾಗಲಿ, ಮರೆತರೆ ಹೋಯಿತು ಕನ್ನಡ ರಾಜ್ಯದ ಉಳಿವು
ಉಳಿಯಲಿ ಆಸೆ ನಾಡಲಿ ಮಿಡಿತ, ಉಳಿಸಲು ಕನ್ನಡ ಮನಿಸರು.

═

ಪುಟ 218 ರಿಂದ

ಕವಿ ಕಲಾವಿದ ಅಂತರಂಗದಾನಂದದ ಮೂರ್ತಿಯೆ
ರವಿಗೆ ತೇಜ ಶಶಿಗೆ ಶಾಂತಿ ವಾಯುವೇಗ ದಾತೆಯೆ
ಓಂ ನಮೋ ಹಿನ್ನಡ್ಡಾರ್ ಸ್ವರ್ಗದ್ವಾರ್ ಕಾರಣೆ
ಓಂ ನಮೋ ಗಗನೋಲ್ಲಾಸ ರಾಗ ಪುರಾಣ ರಾಗಿಣಿ
ಓಂ ನಮೋ ಶಾಂತಿ ತೃಪ್ತಿ ದಯಾ ಸಿಂಧು ದಾತರೆ
ಓಂ ನಮೋ ಶಾಂತಿ ನಮೋ ಶಾಂತಿ
ನಮೋ ಶಾಂತಿ ರೂಪಿಣೆ.

ಕಬೀರದಾಸರಿಂದ.

ಕಾಫಿ. [illegible]

ಅಂತ್ಯವ ಕಾಣದ ಮೊದಲನರಿಯದ
ಊರೊಂದಿರುವುದು ಸೋದರನೆ.
ಅಲ್ಲಿಹನೊಬ್ಬನು ಹೆಸರೇ ಇಲ್ಲದ
ಯಾರೂ ಅರಿಯದ ಮಾಯಾವಿ.
ಹೇಳಿದ ಕೇಳಿದ್ದೊಂದೂ ಇಲ್ಲ
ಊರಿಗೆ ಹೋದವನೊಬ್ಬನೆ ಬಲ್ಲ.

ಉಷ್ಣವು ಶೀತಲವು ಕಾಣುವುದಿಲ್ಲ,
ದೇಹಾಕಾರಗಳಲ್ಲಿಲ್ಲ.
ಅದು ಹೇಗಿರುವುದು ಎಂಬುದ ನಾನು
ನಿನಗೆಂತುಸುರಲಿ ಸೋದರನೆ?
ಬಾಯಿಯಿಂದಾಡಲು ಆಗುವುದಿಲ್ಲ,
ಬರೆಯಲು ಓಲೆಯೊಳಾಗುವುದಿಲ್ಲ.

ಸಿಹಿಯನು ತಿಂದಾ ಮೂಕನವೊಲು ಇದೆ.
ಗಹನವು ಅದರ ವಿಚಾರ!
ಮಂಜುಲೋಕವ ಬಣ್ಣಿಪ್ಪುದೆಂತೈ?
ಎಂಬನು ಭಕ್ತ ಕಬೀರ.

ನನ್ನ ಬಯಕೆ.

ಕೊಳಲು — ಕುವೆಂಪು.

ಸುಸ್ಥಿರದ ಹಸುರುಡೆಯ ಮಲೆನಾಡ ಬನಗಳಲಿ
  ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ.
ಅಲ್ಲಿ ಇಲ್ಲಿ ಸೊಗಸಿನ ಕೋಗಿಲೆಗಳಿಂಚರವು
  ಕಲೆಯುತಲೆಯುತಲೆಯಾಗಿ ಕೇಳಿ ಬರುತಿರಲಿ.
ಅಲ್ಲಿ ಬಳಿ ಹಸುಳೆಯುಲಿ ದನಗಳಂಬಾ ಎಂಬ
  ದನಿಯು ದನ ಕಾಯುವನ ಕೊಳಲೊಡನೆ ಬರಲಿ.
ಅಲ್ಲಿ ಸಿಂಗನ್ನರದ ಕಬ್ಬುಗಳ ಹುಬ್ಬುಗಳು
  ದಿನದಿನವು ಸಂಪಿಯೂಟವಿಕ್ಕುತಿರಲೆನಗೆ.
ಬಾಂದಳದಿ ರಾತಿಗರು ಬುವಿಯಲ್ಲಿ ಜಾರುತಿರೆ
  ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ.
ಬೈಗಾಗೆ ನನ್ನೊಡನೆ ಗಳಹಿಯುಲಿದಾಡಲ್ಕೆ
  ಗೋಪಾಲನಾಗಿರುವ ತಿಮ್ಮನೆನಗಿರಲಿ !
ಮೇಲೆ ಬಾಳ್ಗನು ಬಿಟ್ಟು ನಾನಲ್ಲಿಹ ಮರೆಯಾಗೆ
  ನನ್ನಾಸೆ ಏನೆಂದು ಎಲ್ಲರರಿತಿರಲಿ.
ಸ್ವರ್ಗವಿದನೊಳಗೊಂಡಿರಲು ಸ್ವರ್ಗವೆನಗಿರಲಿ ;
  ನರಕವಿದನೊಳಗೊಂಡಿರಲು ನರಕವಿರಲಿ !

ಬರುತಾಳೆ ನಾಳೆ!

ಚಂದ್ರಮಂಚಕೆ ಬಾ ಚಕೋರಿ

ಕುವೆಂಪು

ಬರುತಾಳೆ ಬರುತಾಳೆ ಬರುತಾಳೆ ನಾಳೆ;
ಕೈ ಹಿಡಿದ ಮನದನ್ನೆ ಚೆನ್ನೆ ಬರುತಾಳೆ!
ಕೋರುತಿರು ಹಿಮ್ಮರಳಿ ಬರುವಂತೆ ಬರುತಾಳೆ
ಬಾನಗಲದ ತಂಬೆಲರಿಗೆ ಸುಳಿಯುಂತೆ ಬರುತಾಳೆ
ಬೆಂದೆದೆಗೆ ಶಾಂತಿಯ ಜೊನ್ನವ ತರುತಾಳೆ
ಬಿಸಿಲ ಕನಲಿಗೆ ತಿಂಗಳುದಿಸುವಂತೆ ಬರುತಾಳೆ!
ತೋಟದ ಹೂಗಳಿಗೆ ಬರುವಂತೆ ಕಾಂತಿ
ಮನೆಯ ಹೊಸ್ತಿಲ್ಕೆ ತುಂಬಿ ಬರುವಂತೆ ಕಾಂತಿ
ಕವಿಯ ಬಾಳಿರುಳಿಗೆ ಹೊಂಬೆಳಕು ಬರುವಂತೆ
ಶಿವನ ಮೊಗ್ಗೆಯೆ ಮಲರುವಂತೆ ಬರುವಳು ಕಾಂತೆ!

ಮಾವನ ಮನೆಯಲ್ಲಿ.

ಮೈಸೂರು ಮಲ್ಲಿಗೆ — ಕೆ.ಎಸ್.ನ.

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು;
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು. — ತುಂಬಿದ
ಚಂದಿರ ಬಂದಿತ್ತು.
ಮಾವನ ಮನೆಯಲಿ ಮಲ್ಲಿಗೆ ಹೂಗಳ
ಹಂದಮುಳ ತುಂಬಿತ್ತು.
ಬಾಗಿಲ ಬಳಿ ಕಾಲಿಗೆ ಬಿಸಿನೀರಿನ
ತಂಬಿಗೆ ಬಂದಿತ್ತು — ಒಳಗಡೆ
ದೀಪದ ಬೆಳಕಿತ್ತು.
ಘಮಘಮಿಸುವ ಮೃಷ್ಟಾನ್ನದ ಭೋಜನ
ರಾಯರ ಕಾದಿತ್ತು.
ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ
ರಾಯರ ಕರೆದಿತ್ತು — ಭಾಮಿನಿಗೆ
ಸ್ವಾಗತವೆ ಇಳಿದಿತ್ತು.

ಚಿಕ್ಕೂರ ಗಾಲಿನ ಮಂಚದ ಮೇಗಡೆ
ಮೆತ್ತನೆ ಹಾಸಿತ್ತು.

ಅಷ್ಟರ ಹಾಸಿದ ದಿಂಬಿನ ಅಂಚಿಗೆ
ಚಿತ್ರದ ಹೂವಿತ್ತು. — ಮಡದಿಯು
ಹಾಕಿದ ಹೂವಿತ್ತು.
ಒಳಗಡೆ ಬಣ್ಣದ ಆರತಿಯ ತಂದಳು
ನಾದಿನಿ ನಗುನಗುತ :
ಬಿಸಿ ಬಿಸಿ ಹಾಲಿನ ಬಟ್ಟಲ ತಂದರು
ಅಕ್ಕರೆಯುಳ್ಳ ಮಾವ. — ಮಡದಿಯ
ಸುದ್ದೇ ಇರಲಿಲ್ಲ.
ಮಡದಿಯ ತಂಗಿಯು ಕರೆದಂತೆಂದಳು:
'ಅಕ್ಕನ ಕರೆಯಮ್ಮ':
ಮೇಲುಮನೆಯಿಂದಲಿ ನಾದಿನಿ ಇಂತೆಂದಳು:
'ಮಡದಿಯು ಬಳಿಯಿಲ್ಲ' — ನಕ್ಕಳು.
ರಾಯರು ನಗಲಿಲ್ಲ.
ಏರುತ ಇಳಿಯುತ ಬಂದರು ರಾಯರು
ಕುಂದದ ಊರಿಂದ.
ಕಣ್ಣನು ಕಡಿದರು ನಿದ್ದೆಯು ಬಾರದು
ಮಡದಿಯು ಬಳಿಯಿಲ್ಲ — ಮಡದಿಯ
ಬಳೆಗಳ ದನಿಯಿಲ್ಲ.

ಒಪ್ಪಿಗೆಯಾಯಿತು; 'ಸರಿ, ಹೋಗಬಹುದು' ಎಂದರು
ರಾಯರು [illegible].
[illegible] 'ಸಾಕಾಯಿತು!' ಎಂದಳು
ನಾದಿನಿ ರಾಗದಲಿ. 'ಯಾರಿಗೆ?'
ಎನ್ನಲು [illegible]
[illegible] ಬಂದಳು [illegible] [illegible]
ರಾಯರ [illegible].

ನಕ್ಷತ್ರಲೋಕ

ಸಾಮಗಾನ — ಜಿ.ಎಸ್. ಶಿವರುದ್ರಪ್ಪ.

ಇದು ನಕ್ಷತ್ರ ಲೋಕ
ಇಲ್ಲಿಲ್ಲ ಮರ್ತ್ಯ ಶೋಕ
ಮಾತೆಲ್ಲವು ಇಲ್ಲಿ ಮೂಕ
ತುಂಬಿಕೋ ಇಲ್ಲಿ ಬೆಳಕ!

ಇದು ರಜತದುದ್ಯಾನ
ಅವ್ಯಕ್ತ ಮಧುರಗಾನ
ಹೊಮ್ಮುತಿದೆ ತಾನ ತಾನ
ಮನವಿಲ್ಲಿ ಧ್ಯಾನಲೀನ.

ಇದು ನಿತ್ಯ ಜ್ಯೋತಿರೂಪ
ಬಾನ್ ಗುಡಿಯ ಲಕ್ಷ ದೀಪ
ಬೆಳಗುತಿವೆ ಕಲ್ಪ ಕಲ್ಪ
ಮನವಿಲ್ಲಿ ನಿರ್ವಿಕಲ್ಪ!

ಗುಮ್ಮನ ಕರೆಯದಿರೆ ಅಮ್ಮ ನೀನು
ಗುಮ್ಮನ ಕರೆಯದಿರೆ ।
ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು
ಮಮ್ಮು ಉಣ್ಣುತೇನೆ, ಅಮ್ಮ ಅಳುವುದಿಲ್ಲ ॥
ಹೆಣ್ಣುಗಳಿರುವಲ್ಲಿ ಪೋಗಿ, ಅವರ
ಕಣ್ಣುಮುಚ್ಚುವುದಿಲ್ಲವೆ
ಬೆಣ್ಣೆಯ ಬಡಿಯೆನು, ಅಣ್ಣನ ಬೈಯೆನು
ಬೆಣ್ಣೆಯ ಬೇಡೆನು, ಮಣ್ಣು ತಿನ್ನುವುದಿಲ್ಲ ।
ಬಾವಿಗೆ ಪೋಗೆ ನಾನೆ, ಅಮ್ಮ ನಾನು
ಹಾವಿನೊಳಾಡೆ ನಾನೆ
ಆವಿನ ಮೊಲೆಯುಣದೆ, ಕರುಗಳ ಬಾಲ ಪಿಡಿಯೆ
ದೇವರಂತೆ ಒಂದು ಠಾವಿಲಿ ಕೂಡುವೆ ॥
ಮಗನ ಮಾತನು ಕೇಳಿ, ಗೋಪಿ ಓಡಿ
ಮುಗುಳುನಗೆಯಲಿ ನಗುತ
ಜಗದೊಡೆಯ ಶ್ರೀ ಪುರಂದರ ವಿಠಲನ
ಬಿಗಿದಪ್ಪಿ ಕೊಂಡಳು ಮೋಹದಿಂದಾಗ ॥

ಚಿನ್ನದ ಒಡವೆಗಳೇತಕೆ ಇಷ್ಟು ತೊಂದರೆ ಕೊಡುವುದು ಬೇಡವ್ವ
ಬಣ್ಣದ ಬಟ್ಟೆಗಳೇತಕೆ ಇಷ್ಟು ಮೈಮ್ಯಾನ ಭಾರವು ಬಿಡುವವ್ವ
ಚೆಂದಕೆ [illegible] ಹೇಳುವೆನವ್ವ, ಚೆಂದವ್ವ ಯಾರಿಗೆ ಹೇಳುವವ್ವ?
ನೋಡುವವರಿಗೆ ಚೆಂದವು ಆನಂದ, ಆದರೆ ಎನಗಿದು ಬಲು ಬಂಧ.
ನನ್ನೀ ಶಿಶುತನ ನಿನ್ನೀ ತಾಯ್ತನ ಎರಡೇ ಒಡವೆಗಳೆಮಗವ್ವ!
ನಾ ನಿನಗೊಡವೆಯು ನೀನೆನಗೊಡವೆಯು ಬೇರೆ ಒಡವೆಗಳೇಕವ್ವ!
ಚಿನ್ನದ ಒಡವೆಗಳೇತಕೆ ಇಷ್ಟು ತೊಂದರೆ ಕೊಡಲು ಬೇಡವ್ವ!!

ನಿನಗೆ ನೀನೇ!

—— ಅಡಿಗ.

ನಿನಗೆ ನೀನೇ, ಗೆಳೆಯ, ನಿನಗೆ ನೀನೇ!
ಅವರಿವರ ಸಂಬುಗೆಯ ಮುಳ್ಳಲ ಗಾಲಿಯ ಮೇಲೆ
ಬಾಳ್ಮನೆಯನು ಮುಗಿಲನೆತ್ತರ ನಿಲಿಸಲಹುದೇನು?
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಮುನಿಸಿನಿಂದ ಹೊರಳಾಗುತಿರುವ ವೇಳೆ,
ಕನಸುಗಳ ಗುಳ್ಳೆಗಳು ಒಡೆದೊಡೆದು ಬೀಳೆ,
ಜನುಮದೀ ರಂಗಭೂಮಿ ಪಾಲುಗಳು ಸೋಲೆ,
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಒಲುಮೆಯ ಹುಬ್ಬುಳ್ಳವರ ಕೊಂಕೆ ಹೋಗುತಿರೆ,
ಒಲವು ವಿರಹದ ಬೆಂಕಿಯಲ್ಲಿ ಬೇಯುತಿರೆ,
ಗೆಳೆತನಕೆ ಹುಳು ಬಂದು ಕೊಳ್ಳು ಗಸ್ಸುತಿರೆ,—
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಕವಲು ದಾರಿಯ ನಡುವೆ ನೀ ಬಂದು ನಿಂದು,
ಗುರಿಯ ಮಾವುದೆಂದು ಮುಂಗಾಣದೆ ನೊಂದು
ಮನದ ಕೊನೆ ಕೊನೆಯ ಮೊರೆಯನ್ನು ಯಾರು ಕೇಳುವರು,
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!

ಬಾಳ ಕಾಳಗದಲ್ಲಿ ಏಕಾಂಗಿ ವೀರ!
ನೀನಜಯ ಮೊಗ್ಗೆದೆಗೆ ಬರಿಯ ಹೋರಾಟ;

ನಿನ್ನ ಅಂತಃಸತ್ತ್ವಸಾರ ಆಧಾರ!
ಉಳ್ಳವೆಲ್ಲವು ಬೆಳಕೆ ಬಗೆದ ಶಿಂಗಾರ!
ನಿನ್ನೊಳ್ಪೊಳೆದಿರಲು ನೀ ನಿಂತಿರುವ ವೇಳೆ,
ಆತ್ಮಸಾಕ್ಷಿಗೆ ಸಾಕ್ಷಿಗುರುತಲಿಹೆ ಬಾಳೆ;
ಮೃತ್ಯುವಿನ ಹಿಡಿತ ಬಿಗಿಯುಗುತಿರೆ, ಮೇಲೆ
ಕಿರುತಾರಕೆಯೊಂದು ಮಿಗಿಲು ಹೊಳೆದರೆ,
ನಿನಗೆ ನಮನ, ಗೆಳೆಯ, ನಿನಗೆ ನಮನ!
ದೂರದೂರದ ದಾರಿ, ನೀಲ ಸಂತಂದು
ಮರೆತ ಬಾಳಿನ ಕುರಿತ ಮನದಿ ನೆಲೆಸಿಂದು,
ಭುವನದ ಬಣ್ಣದ ಸಾಹೋಳಾಗಾಗ ಬಿವದ
ದತ್ತ ವಾರ್ಧದ ಕಾಂತಿ ಹೋಲ್ಕೃತಿ ಕಣ್ಣು,
ಬಳ್ಳಿಕೆಲ್ಲ ಬಾಳುವು ಕಾರಿರುಳು ಕುಣಿದ,
ನಿನಗೆ ನಮನ, ಗೆಳೆಯ, ನಿನಗೆ ನಮನ!
ನಿನ್ನ ಮರುಕದ ಅನ್ನುದಿನ್ಯದ ನೆರವು
ಮೇಲೆ ಬಾ, ಜ್ಞಾನವಾಗಿ, ಜೇನಾಗಿ ತ್ರಿಬಿಡು,
ಕೆಳಲಿ ಬಾ, ಬಳ್ಳಿಗಿಲ ತುಂಬುಕಾಗಿ ನೆರೆದು,
ಬಾನೆತ್ತರಕು ಜಗದ ಬಿತ್ತರಕು ಬೆಳೆದು;
ಅದೆ ಸಾಧನೆಯು, ಸಾಧ್ಯ;— ಅದೆ ಬಾಳ್ಗೆ ನೆಲೆ;
ನಿನಗೆ ನಮನ, ಕೊನೆಗು, ನೀನೆ ನಿನಗೆ!

ನೀನೆ ವರವಾಗಿ ಬರುವೆ!

'[illegible]'

ಕುವೆಂಪು

ಎನಗಾವ ಬಹುಮಾನವನು ಕೊಡುವೆ ನೀನು?
ನಿನಗಾಗಿಯನುದಿನವು ಬಳಲುವೆನು ನಾನು!
ಅರಿವಿಗಾಗನುದಿನವು ಯುಕ್ತಿಶಿಖರಂಗಳಲ್ಲಿ
ಸಂಗತಿಯ ಬೆಟ್ಟಗಳ [illegible];
ಸಿರಿಗಾಗಿಯನವರತ ಹೋರಾಡಿ ಸವೆಯುತಲಿ
[illegible] [illegible] ಧನವ!
ಅರಿಗಳನು ಕೊಂದು ರಣರಂಗದಲಿ ಗೆಲುವರಿಗೆ
ಧರೆಯ ~~[illegible]~~ ಸಿರಿ ಹೊಬ್ಬಗಳ [illegible]
ಧರೆಯನನುದಿನ ಬೇಡಿ ಹೊಲಗೆಲಸ ಮಾಡುವರಿ
[illegible] [illegible] ಸುಖವ!
ಸಿರಿಯ ಸಂಗತಿ ಧರಾರಮಣಿಯುವರೆಲ್ಲರೂ
ಬಂದೆ ವರವೀಯುವರು ತಮ್ಮನುಳ್ಳಿದು;
ಹರಮಾತ್ರೆ, ನಿನ್ನನೇ ಬಯಸುತಿಹ ಎನಗೆ ನೀ
ವರವೀಯೆ; ನೀನೆ ವರವಾಗಿ ಬರುವೆ!

ಕನ್ನಡ್ ಪದಗೋಳು.

'ರತ್ನ'

ಯೆಂಡ ಯೆಡ್ತಿ ಕನ್ನಡ್ ಪದಗೋಳ್
ಅಂದ್ರೆ ರತ್ನಂಗ್ ಪ್ರಾಣ!
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ—
ತಕ್ಕೊ! ಪದಗೋಳ್ ಬಾಣ!
ಬಗವಂತ್ ಏನ್ರ ಬೂಮಿಗ್ ಇಳದು
ನನ್ ತಾಕ್ ಬಂದಾಂತ್ ಅನ್ನು;
ಪರೀಕ್ಸೆ ಮಾಡ್ತಾನ್ ಔನು—
ಬಕ್ತನ್ ಮೇಲೆ ಔನ್ ಕಣ್ಣು!
'ಯೆಂಡ ಕುಡಿಯೋದ್ ಬುಟ್ಬುಡ್ ರತ್ನ!'
ಅಂತ್ ಔನ್ ಏನಾರ್ ಅಂದ್ರೆ—
ಮುನ್ ಮೂರ್ ಒತಾರಾಗ್ ಮುಚ್ಕೊಂತೀನಿ
ದೇವರ್ ಮಾತ್ಗ ಅಡ್ಬಂದ್ರೆ!

'ಯೆಂಡ ಬುಟ್ಟೆ. ಯೆಡ್ತೀನ್ ಬುಟ್ಬುಡ್!'
ಅಂತ ಔನ್ ಏನಾರ್ ಅಂದ್ರೆ—
ಕಳದೋಯ್ತ್ ಅಂತ ಕುಣದಾಡ್ತೀನಿ
ದೊಡ್ಡ್ ಒಂದ್ ಕಾಟ! ತೊಂದ್ರೆ!

'ಕನ್ನಡ ಪದಗೊಳ್ ಆಡೋಕಿಲ್ಲ
ನಿಲ್ಲಾಕ್ ಬುಡಬೇಕ್ ರತ್ನ!'
ಅಂತ ಜನ ಅಂದ್ರೆ — ದೇವ್ರ್ ಆಣೆ ವಸು!
ಮುತ್ತಿನ ಜಿನ್ಗೆ ಬುತ್ತು!
ಅಷ್ಟೇ ಮಾತೋ ಬಿಗೊಳ್ ಎಲ್ಲಾ
ದೇವ್ರೇ ಆಗ್ಲಿ — ಎಲ್ಲ!
ಕನ್ನಡ್ ಹುಡ್ಗೀಗೆ ಎನ್ರ್ ಬಂದ್ರು
ಮಾನಾ ಉಳ್ಸಾಕಿಲ್ಲ!

ನರಕಕ್ಕ್ ಇಳಿಸಿ ನಾಲಿಗೆ ಸೀಳಿಸಿ
ಬಾಯ್ನ ಹೊಲಿಸಾಕಿದ್ರೂನೆ —
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ನ್ ನೀ ಕಾಣೆ!
ಯೆಂಡ ಹೋಗ್ಲಿ! ಯೆಡ್ತಿ ಹೋಗ್ಲಿ!
ಎಲ್ಲಾ ಕೊಚ್ಕೊಂಡ್ ಹೋಗ್ಲಿ!
ಪ್ರಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ!

ನಂಜೀಗೆ.

'ರತ್ನ'.

ನೀ ನನ ಅಟ್ಟೀಗ ಬೆಳ್ಳಕಂಗ ಇದ್ದೆ ನಂಜು!
ಮಾಡೀಲ್ ಒಳ್ಳೇಲ್ ಮಲಗಿದ್ದಂಗೆ ಮಂಜು!
    ಮಾಗಿ ಕುಗ್ಗು!
    ಬೇಸ್ಗೆ ಸುಗ್ಗು!
ಇದ್ದಿದ್ದಂಗೆ ಮಾಯಮಾಗೋಯ್ತು ಮಂಜು!
ನಂಗೂ ನಿಂಗೂ ಯೆಂಗೆ ಅಗಲೋಯ್ತು ನಂಜು!!
ಶೀರಂಗ್ಪಟ್ನದ ತಾವ್ ಕಾವೇರಿ ಓಡದಿ
ಯೆಳ್ಳೋಳ್ಳಾಗಿ ಹಬ್ಬದ ಸುತ್ತ ನಡದಿ
    ಸುಂಗಂದಳ್ಳಿ
    ಸೇಕೊಂಡ್ ಮಳ್ಳಿ
ಮುಂದಕ್ ಹೋಯ್ತು ಸಮುಗ ಗ್ನಾನದ ತುಂಜು!
ಈಗ ಅಗಲಿದ್ರೇನ ಮುಂದ ನಾವ್ ಸೇರ್ತೀವೆ ನಂಜು!
ಅಗಲೋದೋಗ್ಗೆ ರಾತ್ರಿ ಬಂತಂತೆ ಅಂಜಿ!
ರಾತ್ರಿ ಮುಗದೋದ್ರೆ ಅಗಲೆ ಅಲ್ವ ನಂಜಿ!
    ರಾತ್ರಿ ಬಿತ್ತು!
    ಅಗಲೇ ಬತ್ತು!
ಓಗೋದ್ ಮಳ್ಳಿ ಬರೋದ್ಕೆ ಅಲ್ವ ನಂಜಿ?
ಆ ನೆಮ್ಕೆ ನನೆ ಜೀವಾನ ಉಳಸೋಗ ಗಂಜಿ!

ಮಡಿಕೇರೀಲಿ ಮಂಜು.

'ರತ್ನ'

ಬೂದಿಯಾನ್ ತಬ್ಬಿದ ಮೋಡ ಇದ್ದಂಗೆ
ಬೆಳ್ಳಿ ಬಳ್ಳಿದ ಕೋಟೆ ಇದ್ದಂಗೆ
ಸಾಹಾಗ್ ಅಳ್ಳ ತಿಪ್ಪಿಲ್ದಂಗೆ
ಮಡಕೇರೀಲಿ ಮಂಜು!
ಮಡಗಿದ ಅಲ್ಲೇ ಮಡಗಿದ್ದಂಗೆ
ಲಂಗರ್ ಬಿದ್ದಿದ ಅಡಗಿದ್ದಂಗೆ
ನಿಂತಕ ಸುತ್ತ ಉಡಗೋಟಂಗೆ
ಅಳ್ಳಾ ಹಾಲುದ ಮಂಜು!
ತಾಂಬು ಮೊಗೀನ ಎತ್ಕೊಂಡಂಗೆ
ಬಂದಕೆಲ್ಗಂಡು ಅತ್ಕೊಂಡಂಗೆ
ಮಡಕೇರೀನ ಎದೆಗೊತ್ಕೊಂಡಿ
ಜೋಗಿಲಿತ್ತು ತುಂಬಿ ಮಂಜು!
ಮಲಗಾಕ ಸೊಳ್ಳೆ ಪರದೆ ಕಟ್ಟಿ
ಬಿಸಿಂದಾಕ ಬಗದಿದೆ ದುಬಿಬಿ ಕೊಟ್ಟಿ
ಮಕ್ಕಾಗ್ ಗಂಧದ ದೂಮ ಆಕ್ಯಂಗ್
ಮಡಕೇರೀ ಮೇಲ ಮಂಜು!
ಮಂಜಿನ್ ಮುಸುಕಿನ ಕಾವಲ್ನಲ್ಲಿ
ಬಿಗಾದಿಕ್ ಉದ್ಯಾನ ಪುಲ್ನಲ್ಲಿ
ಒತ್ತಗೇ ಎಸೋ ಸುಕ ದೋಡಂಗೆ
ಅಲಗಾತ್ತಿ ತ್ತುಂ ಮಂಜು!

ನಡಿಂತೋ ದೊಡ್ಡೋವ್ರ ದೇವಲ್ಲಂಗೆ
ಪಟ್ಟದ ಪುತ್ರಿನ ಕಾವಲ್ಲಂಗೆ
ಅಲ್ಲಲ್ಲೇನೆ ಅಂಗಂಗೇನೆ
ಗಸ್ತಾಕ್ತಿತ್ತು ಮಂಜು!
ಸೂರ್ಯನ ಕರೆಯಾಕೆ ಬಂದ ನಿಂತೋರು
ಕೊಡಗಿನ ಎಲ್ಲಾ ಪೂವಮ್ಮೋರು
ತೆಳ್ಳ ಬೆಳ್ಳ ಬಟ್ಟೇನಾಕಿ
ಬಂದಂಗಿತ್ತು ಮಂಜು!
ಒತ್ಮ್ಯಾನಿದ್ರ ಎಳಬಿಸಿಲಿನ ಕೆಂಪು
ಮಂಜಿನ ಬಣ್ಣ ಕಣ್ಗೆ ತಂಪು!
ಕೊಡಗಿನ ಲಕ್ಷ್ಮೀರ ಪೂವಮ್ಮೋರಿಗೆ
ಆಲಿನ ಸೌಂದ್ರ್ಯೇ ಮಂಜು!
ಅಗಲೇ ಬರಲಿ ರಾತ್ರೇ ಬರಲಿ
ಬಿಸಲು ನೆಳ್ಳು ಏನೇ ಇರಲಿ
ಕಣ್ಣಾರೆಯಾಗಾಕೆ ತಾವ ಕೊಡಾಲುದ
ಮಡಕೇರೀಗೆ ಮಂಜು!
ತ್ರೈಲ ನೀರಿನ ಮ್ಯಾಗಿದ್ದಂಗೆ
ಪೂವಮ್ಮ — ನನ ತಂಗೀದ್ದಂಗೆ
ಬಿಟ್ಟು ಬಿಡದಂಗ ಇಡಕೊಂಡಿತು
ಮಡಕೇರೀಗೆ ಮಂಜು!

ಜೋಕಾಲಿ ಆಡೋಣ ಬನ್ನಿರೋ ! ನಾವೆಲ್ಲ
ಜೋಕಾಲಿ ಆಡೋಣ ಬನ್ನಿರೋ ||
ಬಂದಾಳು ಗೌರಮ್ಮ ತಂದಾಳು ಸಂತಸ
ತೋರಣ ತೋರಣಗಳು ಮನೆ ಮನೆಯಲಿ ಇಂದು
ಹೂವು ಹಣ್ಣುಗಳ ತುಂಬ ಬಂಗಾರದ ಹಾರ
ಮನೆ ತುಂಬ ಸಡಗರ ಸಾಂಬ್ರಾಣಿ ಧೂಪ.
ಬಿತ್ತಿದ ಹೊಲದಲ್ಲಿ ಮೊಳೆತಾವ ಬೀಜ
ಕಣ್ಣು ತೆರೆದಾವೆಲ್ಲ ಹಸುರಿನ ತೇಜ
ಹೊಲದ ಬದುಗಳಲ್ಲಿ ನಾನೇ ರಾಜ
ಬಲ್ಲವರು ಯಾರಿಲ್ಲ ಈ ಎಲ್ಲ ಮೋಜ.
ಹಕ್ಕಿ ಪಕ್ಕಿಗಳೆಲ್ಲ ಹಸುರಿನ ಜೋಲಿ
ಗುಡಿಯ ದೇವರ ಸುತ್ತ ಆಡುವ ಜೋಲಿ
ಚಿಕ್ಕಿ ಚಿಂಕ್ರ ಮಾತೆ ನಿಲ್ಲದ ಜೋಲಿ
ನಮ್ಮ ಹಿಗ್ಗಿಗೆ ಜಗವೆಲ್ಲ ಜೋಲಿ.

ಮಾತು.

ಆಕಾಶಬುಟ್ಟಿ   ಚೆನ್ನವೀರ ಕಣವಿ

ಮುಂಜಾವದಲಿ ಹಸಿರು ಹುಲ್ಲು ಮಕಮಲ್ಲಿನಲಿ
ಪಾರಿಜಾತವು ಹೂವ ಸುರಿಸಿದಂತೆ
ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ
ಸೃಷ್ಟಿ ಸೌಂದರ್ಯವು ಬಿಂಬಿಸುವಂತೆ,

ಮಲ್ಲಿಗೆಯ ಸುಗಂಧವು ಕರಗಿ ತಂಬೆಲರಾಗಿ
ಜೇನ್ನ ಕಣ್ಣಂಚಿನಲಿ ತುಳುಕುವಂತೆ,
ಸುಳಿಗಾಳಿಯೊಂದಿನಿತು ಸೂಸಿ ಬಂದರು ಸಾಕು
ಮರವನಪ್ಪಿದ ಬಳ್ಳಿ ಬಳುಕುವಂತೆ, —

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದುವಚನ ಮೋಡಿಕೆ ಗೆಲ್ಲುವುದು ತಿಳಿಯ ;
ಪ್ರಾಣ ಮೊಗ್ಗೆಯನೊಡೆದು ಮಾತಲ್ಲಿ ಬರಲಿ
ಮೂಕ ಗೆಳೆಯ ಬಾಳು ಮಾಗಮಾಗಿಸುತಿರಲಿ.

[illegible]

ನೆಲ-ಮುಗಿಲು. ಚೆನ್ನವೀರ ಕಣವಿ

[illegible] ಹಸಿರ [illegible], [illegible]
[illegible]
ನರುಗಂಪ ತೇಲಿಸುವ; ಹಂಬಲಿಪ [illegible]
ತುಂಬಿ [illegible]; [illegible]
[illegible], ನೆಲ-
ಮುಗಿಲನೊಂದು [illegible] ಜೀವ [illegible];
[illegible]
[illegible].
[illegible] -
[illegible]; [illegible]
[illegible], [illegible].
[illegible].
[illegible]
[illegible] ಜೀವ [illegible].

ಯಾರು ?

ದೇವಶಿಲ್ಪ ಜಿ.ಎಸ್.ಶಿ.

ಯಾರವರು ಯಾರವರು
ಯಾರವರು ಯಾರೋ ?
ಬಾನಿನಲಿ ಬಂದವರು
ನಿಂದವರು ಯಾರೋ !
ಬೆಳಗೆಲ್ಲ ಬೆಳಕನ್ನು
ಚೆಲ್ಲುವವರಾರೋ ?
ತುಂಬಿದ್ದ ಕತ್ತಲನು
ಕಳೆದವರು ಯಾರೋ.
ಬಾಳ ನಂದನದಲ್ಲಿ
ಮಂದಾರ ಗಂಧವನು
ತಂದು ಬೀಸುತ ಚೆಲುವ
ತೆರೆದವರು ಯಾರೋ ?
ಮಾಗಿ ತುಂಬಿದ ಬನಕೆ
ಮಕರಂದ ಪಾತ್ರೆಗಳ
ತುಂಬಿ ನಿಲಿಸಿದ ಕುಸುಮ
ಸುಂದರನು ಯಾರೋ !

ಅಲ್ಲಿ ಇಲ್ಲಿ ಎಲ್ಲಿ
ರಸದ ಬುಗ್ಗೆಗಳನು ತನ್ನ
ಹೃದಯ ಸಂಸ್ಕೃತಗಳನು
ಬರೆದವರು ಯಾರೋ!
ಚಿಕ್ಕ ಚಿಕ್ಕಾಕು ಚಿಕ್ಕಚ್ಚವನು
ಚಿಗುರಿಸುವ ಚಿಕ್ಕುರಿಸಲಿ
ಬಣ್ಣಗಳ ಹೊರಗೂ ತುಂಬಿ
ತುಳುಕುವರು ಯಾರೋ!
ಯಾರವರು ಯಾರವರು
ಯಾರವರು ಯಾರೋ,
ಕಾಣಲು ಬಂದಿತು
ನಿಂದವರು ಯಾರೋ!

ಬಂ ಚಿಕಿ ಬಂ ಚಿಕಿ ಬಂ ಬಂ ಬಂ ।
ಬಂ ಚಿಕಿ ಬಂ ಚಿಕಿ ಬಂ ಬಂ ಬಂ ॥
ಬೇಟೆಗಾರರು ನಾವೆಲ್ಲ ।
ಕಾಟ ಕೊಡದ ಶೂರರು ಎಲ್ಲ ॥
ಹುಲಿ ಚಿರತೆಗಳ ಭಯವಿಲ್ಲ ಕಾಡು ಮೇಡು ಬಿಡೆವಲ್ಲ
ಹೊಟ್ಟೆ ಪಾಡು ಬಿಡುವೆಂಯಲ್ಲ ಬೇಟೆಗಾರರು ನಾವೆಲ್ಲ ॥
ಹಾರಾಡುವ ಆ ಹಕ್ಕಿಗಳ ಕವಣೆ ಕಲ್ಲಲಿ ಹೊಡೆಯುವೆವು
ಓಡಾಡುವ ಹುಲಿ ಸಿಂಹಗಳ ಕಾಟ ಕೊಡದಿಹೋ ಕೊಲ್ಲುವೆವು
ಘೀಳಿಡುವ ಆ ಆನೆಗಳ ಬೀಳಿಸುವಂತ ವೀರರು ನಾವು
ಚೆಂಗನೆ ಓಡುವ ಜಿಂಕೆಗಳ ಬೆಂಕದಿ ಹಿಡಿದು ತರುವೆವು ನಾವು ।
ನೋಡಲು ಬರುತಿಹ ನಾಗಣ್ಣ ಪುಂಗಿಯ ನಾದೋ ಜೋರಣ್ಣ
ಹೊತ್ತು ಮುಳುಗಿತು ನೋಡಣ್ಣ ಇಂದಿಗೆ ಬೇಟೆಯು ಸಾಕಣ್ಣ ॥

ಶುಭನುಡಿಯೆ ಶಕುನದ ಹಕ್ಕಿ

[illegible]

ಯೋಗ್ಯರೇ ಬಯಸಿ ಬನ್ನಿ ಶುಭೋದಯಕೆ ಸ್ವಾಗತ
ಸ್ವರಾಷ್ಟ್ರದಾಕಾಶದಲ್ಲಿ ಸುಪ್ರಭಾತ ಸ್ವಜನರತ ||

ಹಳ್ಳಿ ಹಳ್ಳಿ ಬಯಲಗಾಳಿ ಸುವಾಸನೆಯನು ಹೇಳಿದೆ
ಹೆಜ್ಜೆ ಹೆಜ್ಜೆಗೂ ಸ್ವದೇಶ ತನ್ನ ಮಹಿಮೆ ತಿಳಿಸಿದೆ
ಯಜ್ಞಭೂಮಿ ಯೋಗಭೂಮಿ ತ್ಯಾಗಭೂಮಿ ಭಾರತ ||
ನದಿ ಹಿಮಾಗ ಮಂತ್ರ ಹಾಡಿ ನಿತ್ಯ ಸ್ಫೂರ್ತಿ ನೀಡಿದೆ
ಜನರ ಮನವ ನೆಲದ ಕಣವ ಅತಿ ಪವಿತ್ರ ಮಾಡಿದೆ
ಮಾತೃಭೂಮಿ ಪಿತೃಭೂಮಿ ಗುರುಸ್ವರೂಪಿ ಭಾರತ ||
ಅನಾದಿಯಿಂದ ಸಾಧು ಸಂತ ಭಕ್ತರಿಲ್ಲಿ ಬಾಳಿದರು
ಅಸಂಖ್ಯ ವೀರ ಶೂರರಿಲ್ಲಿ ಶಕ್ತರಾಗಿ ಮೆರೆದರು
ಧರ್ಮಭೂಮಿ ಕರ್ಮಭೂಮಿ ವೀರಭೂಮಿ ಭಾರತ ||
ತಾನಾಗಬಲ್ಲನಿಲ್ಲಿ ನರನು ನಾರಾಯಣ
ಅಮರಗಾನ ಮೊಳಗುತಿಹವು ಗೀತೆ ರಾಮಾಯಣ
ಪುಣ್ಯಭೂಮಿ ದೇವಭೂಮಿ ಮೋಕ್ಷಭೂಮಿ ಭಾರತ ||

ಸಮಾಜಪುರುಷನ ಅಭಂಗಿಪ್ಪಜೆಗೆ ಅಸಂಖ್ಯ ಕುಸುಮಗಳರಳುತಿ:
ಅಸೀಮ ಸ್ಫೂರ್ತಿಯ ಸತತ್ತ ಒಲವಿಕರ
ಪ್ರಬುದ್ಧ ಹೃದಯಗಳರಳುತಿವೆ.

ಪ್ರಭಾತ ಭಾಸ್ಕರ ಮುದದಿಂದುದಿಸುತೆ
ಶೃಂಗಾರಾಕಾರದಿ ಬರುತಿಹನು
ನವರಾಗದ ನವಗಾನದ ನವೀನ ಸಂದೇಶವನಿದೋ ತರುತಿಹನು
ಅನಂತಪ್ರೇರಣೆ ದಿಗಂತ ತುಂಬುತ ಸಜೀವ ತಳ್ಳಿಂತುತಲಿದೆ ನಾದ.
ಪಕ್ಷಿಗಳ ಜಯಗಾನವ ಹಾಡುವ ರಾಗಕಹಳೆಗಳೆದ್ದಿವೆ ನೋಡು

ರಾಷ್ಟ್ರದ ಸೇವಾರಾಧನೆ ಬಂದಿದೆ ಬೆಂಕಿಯ ಕೊಡು ನಿಜಜೀವನಕೆ
ಪ್ರಜ್ವಲಿಸಲಿ ಯಜ್ಞದ ಜ್ವಾಲಾಪ್ರಭೆ
ಧುಮುಕೋಣೊಗ್ಗಿನೆ ಸಮರಾಂಗಣಕೆ
ಈ ಜೀವನವಾಗಲಿ ಆಹುತಿ ಭೂರಜಕಾಗಲಿ ಸಂತೃಪ್ತಿ
ಅದರಿಂದಾಗಲಿ ಚಿರಶ್ರೀಸ್ಮೃತಿ ಅದುವರೆಗೆಲ್ಲಿದೆ ವಿಶ್ರಾಂತಿ?

ಹಿಮಗಿರಿಯಲ್ಲಿನ ಉನ್ನತ ಶಿಖರ
ಕನ್ಯಾಕುಮರಿಯ ಹಿಂದು ಸಾಗರ
ನಡುವೆ ಬಾಳುವ ಕೋಟಿ ತರುಣರ
ಮಾತೃಭೂಮಿ ಈ ಭೂಮಿ.
ಶಂಕರ ಮಧ್ವರ ಪವಿತ್ರ ಭೂಮಿ
ವಿದ್ಯಾರಣ್ಯರ ಕಾರ್ಯಕ್ಷೇತ್ರ
ರಾಮದಾಸರ ಸೇವಾ ಮಂತ್ರ
ವಿವೇಕಾನಂದರ ಈ ಭೂಮಿ.
ಪ್ರತಾಪ ರಾಣಾ ತೋರಿದ ಹಾದಿಯು
ಶಿವಾಜಿ ಶೂರ ಬೆಳಗಿದ ಬೀದಿಯು
ಝಾನ್ಸಿ ರಾಣಿ ಕಾದಿದ ಜಾಡಿಯು
ಕ್ಷಾತ್ರ ತೇಜದ ಈ ಭೂಮಿ.
ಹೆಡಗೇವಾರರ ಸಂಘದ ದೀವಿಗೆ
ಬೆಳಕನು ತುಂಬಿದೆ ಯುವಕರ ಬಾಳಿಗೆ
ರಾಷ್ಟ್ರ ಕಟ್ಟುವ ಪೂಜ್ಯ ಕಾರ್ಯಕೆ.
ಸಂಘಸ್ಥಾನವೇ ಈ ಭೂಮಿ.

ಕೋಲು ಮುಂದೆ ಜಂಗಮರು
ಕೋಲಣ್ಣಕೆ ಬಿಜು ಮಾಡುವರೆ
ಕೋಲಣ್ಣ ನೀಡವ್ವ ಕೋಡುಗಲಮ್ಮನೆ॥

ರಂಗನ ಬಲೆಂಯ ತಕ್ಕೊಂಡು
ಸುಗ್ಗಿ ದಂಟಿಂಯ ಹಿಡುಕೊಂಡು
ಬಿಬ್ಬನೆ ಕೋಬ್ಬನೆ ಮುದ್ದು ಮಾಡೇವ
ಹೆಬ್ಬುಲಿ ಬಾಗಿಲೀಗೆ ॥
ಕುಲದಲ್ಲಿ ಕುರುಬರಕ್ಕಲಗಾದ
ಜಾತಿಲಿ ಸೋಲುಗ ನೀಲಮ್ಮ
ನೀಲಮ್ನ ಮಡದಿ ಸಂಕಮ್ಮ
ಮುಲೋಕದಲ್ಲಿ ಕರಕೊಳುವೆ.
ಮಡದಿ ಸಂಕಮ್ಮನ ಬಳಿಗೆ ಬಿತ್ತವ್ನೆ
ದೇವ ಸೋಲುಗ ನೀಲಮ್ಮ
ಮಡದೀ ಬಳಿಗೆ ಬಂದವ್ನೆ - ಒಮ್ಮೆ
ಮುಂಗೆತ್ರ ನಾತ್ರೆ ದಾಡಿದವ್ನೆ ॥
ದೇವ ಸಾಲುಗ ನೀಲೋನಾದ
ಸಾಕ್ಷಚಿಂತೆ ಕ್ರಾಂತನಾಗಿ
ಮಡದಿ ಸಂದ್ಯಾನೆ ಬಂದು.

ಹಿಂತ್ಯಾ ಯಜಮಾನ್ರೆ ಯಜಮಾನೆ
ಜಾಲೋಕದಲ್ಲಿ ವನ ಮಾಡದ
ಪತ್ನಿ, ಕುಲಮಾಡದ [illegible] ಮನುಜಾ -
ಎರಡೂ ಒಂದಲ್ಲವ ಸ್ವಾಮಿ.
ನನ್ನ ನೀವು ಬಿಟ್ಟರೂ ನಿಮ್ಮ
ಕುಲವ ನೀವು ಬಿಡಬಾರ್ದಿ. ।
ಎಲ ಎಲಾ ಕೇಳ್ಬ ದನಿಮನೆ ಳ
ನಾ ಕುಲ ದೋಲೊಂದ್ಗ ಜೆಜ್ಜೆನ ಮಂಗೆ
ಜೆಜ್ಜೆನ ಬೋಬಿಗೆ ಕ್ಲೀಯ್ಬಾನಿಲ್ಲ
ಕಾಲ ತಪ್ಪಿ ಒಂಬತ್ತು ತಿಂಗಳ ವರುಗ್ಗ
ಮ್ಯಾಗ ನಟ್ಟ್ಲಿ ಮ್ಯಾಗ ನಂಬಿ ನಿನ್ನ ನಾನು
ನನ್ನ ಬಲಗೈ ಮುಟ್ಟಿ ಭಾಷೆ ಕೊಟ್ಟ
ಜೆಜ್ಜೆನ ಮಾತೆಗೆ ತಪ್ಪಿ ಹೆನ್ಗೆ ॥
ಹಿಂದು ಯಜಮಾನ ಯಜಮಾನಿ
ಎಂದೂ ತಿರುದ ಮಾತು ಈ ದಿವಸ ಬಂದು
ಇದಿ ದೀರಲ್ಲಿ, ಬಲಗೈ ಮುಟ್ಟಿ
ಭಾಷೆ ಕೊಡು ಹಿಂತ ಕೇಳ್ದಿ ದೀರಲ್ಲಿ
ಬಲಗೈ ಮುಟ್ಟಿ ಭಾಷೆ ಕೊಡೋದ್ಕ
ಹಿಂತಾ ತಪ್ಪು ನಿಮ್ಮನ ನಾನೇನು
ಮಾಡಿದೇನು; ತಪ್ಪು ಕಾಣ್ಲಿಲ್ಲ

ಹೆಣ್ಣಾಬಿಂಯ ಕಾಣಿಲ್ಲ, ಕಲ್ಯಾಣ ಮಾಡಿಲ್ಲ
ಸುಳ್ಳು ಶಾಸ್ತ್ರ ಹೇಳಿಲ್ಲ
ಮನೆಲಿದ್ದುಕ್ಕೆ ಮುಂದಕ್ಕೆ ತೂದಂಗೆ
ಗರತಿಯ ಪಾದದಾಣಿತ್ತಿ ಮಾಡ್ದಂಗೆ
ಮಾತಾಡಿದಿಲ್ಲ ಯಜಮಾನ
ಹಿಂತಾ ತಪ್ಪುನೆಪ್ಪು ನೀನು
ಹಿಂತಿಗೆ ಆದ ಪಕ್ಷದಲ್ಲಿ —
ತಂದೆ ತಾಯಿ ಕರೆಸಯ್ಯ
ಅತ್ತೆ ಮಾವಂದಿರ ಕರೆಸಯ್ಯ
ಅಣ್ಣ ತಮ್ಮಂದಿರ ಕರೆಸಯ್ಯ
ಅಕ್ಕ ತಂಗೇರ ಕರೆಸಯ್ಯ
ಭಾವ ಮೈದುನರ ಕರೆಸಯ್ಯ
ಅತ್ತೆ ನಾದಿನೀರ ಕರೆಸಯ್ಯ
ಬಂಧು ಬಳಗ ಕರೆಸಯ್ಯ
ಕುಲ್ದೋರೆಲ್ಲ ಕರೆಸಯ್ಯ
ಮತದೋರೆಲ್ಲ ಕರೆಸಯ್ಯ.
ನ್ಯಾಯ ಪಾತ್ರೆ ಮಾಡ್ಸಯ್ಯ
ತಪ್ಪು ನೆಪ್ಪು ತೋರ್ಸಯ್ಯ
ನೀನು ಕಳ್ಳತನದ ತೆರವ ತಪ್ಸಿಂದಲ್ಲ
ಬುಬ್ಬು ಬಿಡಯ್ಯ ಮಾದಯ್ಯ||

ಎಲಾ ಮಾದಪ್ಪ ಸಂಕೆಸ್ಗೆ ಸಂಕೆಸ್ಗೆ
ಕಳ್ಳದ ತೆರವನ್ನ ತಪ್ಸಿಂದು
ಬುಬ್ಬು ಬಿಡೋಕೆ ನೀನೇನು
ಧನವ, ಕರುವ, ಕುರಿಯ, ಕೋಳಿಯಾ
ಮಾರ, ಎಮ್ಮು, — ಸಂಕೆಸ್ಗೆ
ಇಂತ ಕರಚಲುವಂಯಾದ ಮಾದೀಯ
ಈ ಗಾಡುಹೋಯಿಸಿನ ಬಿಂಬ ಸೋತ್ತಿನ
ಗುಳ್ಳದಲ್ಲಿ ಬುಬ್ಬುಬ್ಬೆಗಕ್ಕೆ
ಸಂಗೆ ತುಂಬು ಹಿಸುಮಾನ ಮಾದಪ್ಪ.
ನಿನ್ನ ಬುದ್ಧಿಗೆ ಭಾಷೆ ಕೊಡುತೇನೆ ನನ್ನ
ಕುಲದೋರೆಂದ್ಗೆ ಕಳುಹಿಸ್ಗೆ ||
ಇಂಥ ಯಜಮಾನ ಯಜಮಾನ
ಇಂತಾ ಹಿಸುಮಾನವನ್ನ ಮಾತ್ರ ಮಾಡ್ಬೇಡಿ
ನಾನು ಹಿಡಿಗೆಯನ್ನ ಮಾಡಿ
ಪ್ರೀತಿಯಿಂದ ಊಟಕ್ಕೆ ಕರೀತಿನಿ
ಹುಳ್ಳವನ್ನು ಕೊಟ್ಟು ಕುಲದವರು
ಸಂಗ ನಿಮ್ಮನ್ನ ನೆನನೆಗ್ಗಾ ಕಳ್ಸುತೀನಿ.
ಹೀಗೆ ಬ್ಬು ಚಿಂಯನ್ನ ಕೊಂಡ್ಡೆ
ಬನ್ನಿ ಹಿಂತೇಳು ದ್ದಂತೆ —

ಎಲಾ ಮಡದಿ ಸಂಕೆಸ್ಲ, ನೀನೇನು
ನೆನಸೆರಾ ಬ್ಯಾಡೆ ಮಾಡ್ಯಂಡು ಬನ್ನಿ
ಹಿಂತಾ ಹೇಳ್ದ್ರು; ನನ್ನ ಕೊಲಸು ಕೊಲಸು
ಹಿಂತ ಸಾತ್ರಿದೀಂಯಲ್ಲ ಮಡದಿ
ನಿನ್ನ ಮರುವನ್ನೀ ನಾನು
ಹಿಡುಕೊಳ್ಳ್ಯಾರಾಂಯ್ತ ಇಲ್ಲಾ.
ನೀನು ಬಲಕ್ಕೆ ಬಾಲೆ ಕೊಡು ಕೆನ್ನೆ ನನ್ನ
ಕೊಲುದೋಕೆ ಸಂಗಡ ಕಳುಕೆನ್ಲಾ ||
ಹಿಂದೀಲ ಯಜಮಾನ ಯಜಮಾನ
ಇಂತ ಮಾತ ನಿನ್ನಂದ್ಸಲ ಹಿಡಬೇಡಿ
ನನ್ನಲ್ಲಿ ನೀನು ತೆಪ್ಪುಕಂಡಿಲ್ಲ, ಹಿನ್ಯಾಯ
ಕಂಡಿಲ್ಲ, ಹಿಂವಾದ್ರುಲ್ಲ, ಬಲಕ್ಕೆ ಮಲ್ಲ್ಯ
ಬಾಲೆ ಕೊಡು ಹಿಂತಿದೀಂಯಲ್ಲ, —
ಬಿಂಜೆ ಕೆತ್ರಿನ ಬಾಲೆ ಬ್ಯಾಡ
ಸುಮ್ಮನೆ ಹೊಗೆಯ ಯಜಮಾನ ||
ಎಲಾ ಮಡದಿ ಸಂಕೆಸ್ಲ
ಬಂಜೆ ಕೆತ್ರಿನ ಬಾಲೇ ಬ್ಯಾಡ ಹಿಂತ
ಹೇಳ್ದ್ರುದೀಂಯಲ್ಲ, ಮೀನೋಟೆಲ್ಲೆ
ಈ ನಾಡು ಹೇಳ್ತಿನ ಬಾಯಿ ನೋಡ್ಬ್ಯನ
ಮಳ್ಳಲ್ಲಿ ಇರು ದಂತಾ ಮಾನ್ಯಕ್ಕ್ಯ ಬಲ್ಲಿ

ನನ್ನ ಕಂತ್ರೆ ಗಣ್ಮಾ ತಮ್ಮರ್ನಾರ ಇಲ್ಲ
ಹಿಪ್ರ ಕಂತ್ರೆ ಸಂಗಾಗಾರಿಲ್ಲ
ಎಲ ಮಡದಿ ಸಂಕೆಸ್ಲ
ನಾನು ಹೆಗ್ಗೆ ಹಿತ್ತಲ ನಾಡಿಗೆ ಹೋಗಾರೆ
ಹಿನ್ನಾ ತಮ್ಮದೀರು ಬನ್ನಾರೆ
ಬೆಂಕೀಯ ಸೇಂಯಲ್ಲಿ ಬನ್ನಾರೆ
ಬಾಗಿಲನಾಕ್ರೆ ಬಡಿನಾರೆ
ಸಂಕೆಸ್ಲ ನೀನು ಬತ್ತೀಂಯ
ಬಾಗಿಲ ಬಗ್ಗ ನೋಡ್ತೀಂದಿ
ಹೆನ್ನೀ ನಿನ್ನೇಲೆ ಕಣ್ಣ ಮಡುನಾರೆ
ಮಡದಿ, ನಾಲಿ ಕೊಂಡು ಹೋಯ್ತಾರೆ |
ಹಿಂದೀಲ ಯಜಮಾನ ಯಜಮಾನ
ಇಂತ ಪಾಪ್ರದ ಮಾತ ನೀವಾದ ಬನ್ನ
ನಿಮ್ಮಗ್ಗ ಎಂಬುವರು ನಂಗೆ ಬಾವನಾಕ್ಕೆ
ಬಾವ ಎಂಬುವರು ನನ್ಗೆ ತಂದೆಸಮಾನ
ಹಿಬ್ಬ್ಯ ಯಜಮಾನ; ನಿಮ್ಮ ತಮ್ಮ
ಎಮ್ಮವರು ನನ್ಗೆ ಮೈದುನಾಗ್ಬೇಕು
ಮೈದ ಎಂಬುವರು ಸಾಗ ಮಕ್ಕಳು
ಸಮಾನ ಹಿಬ್ಬ್ಯ ಯಜಮಾನ.
ಇಂತೆ ಪಾಪುದ ಮಾತ ಆಡಲುಬಾರದು
ಪಾಪಿ ನೋಡುವಗ ನಿಲಯ್ಯ ||

ಕೇಳ್ತಾಳೆ ಮಡದಿ ಗಂಡನ್ನ
...ನ್ನ ಅಣ್ಣತಮ್ಮಂದೀರು ನಿನ್ಗೆ ತಂದೆ
ಮಕ್ಕಳು ಹಿಂತಿರೀಲಿ; ಹೋಗ್ಬ
...ದು ಹೆಚ್ಚೆ ಮಾಡದೀ,
...ನ್ನೆಂಬ ಹೆಸ್ರ ಜಲ್ಲಿಕ್ಕ
ಮುತ್ತು ಹಿಂಕ್ರೆ ಅಕ್ಕೆಯಲ್ಲ
ಮಾಡಿಲ ನಿಂಗೆ ಹೋದರೆ
ಮುತ್ತಿನ ತೆಪ್ಪ ಬರ್ತಾನೆ
ಮುತ್ತೊಂದ್ಸಾರ ತರ್ತಾನೆ
ಮುತ್ತು ಮುತ್ತಂತೆ ಗಾತ್ತಾನೆ
...ನ್ನ ತೊಟ್ಟಿಲಂಬು ನೋಡ್ತಾನೆ
ತೊಟ್ಟಿಲಂಬು ಬಾಗಿಲ್ಗೆ ಬರ್ತಾನೆ
...ಬಾಗಿ ನಿನ್ನ ಕರಿತಾನೆ
...ನು ಗುಡುಗುಡು ಹೋಡಿ ಬರ್ತೀಲಿ
ಬಾಗಿಲ ಬಗ್ಗಿ ನೋಡ್ತೀಲಿ
ಮುತ್ತಿನ ತೆಪ್ಪ ಕರಿತೀಲಿ
ಏನಾದ್ರೆ ಅನ್ತೀಲಿ
ಮುತ್ತಾನಾದ್ರು ನೋಡ್ತೀಲಿ
ಮುತ್ತೀ ಮುಖ್ಯ ನೋಡ್ತೀಲಿ
ಮುತ್ತು ಬಾವನ್ನ ಕೇಳ್ತೀಲಿ

ದುಡ್ಡಕ್ರೆ ಕೈಲಿ ಕೊಟ್ರೀಲಿ
ಇಲ್ಲದೆ ಇದ್ರೆ ನೋಡ್ತೀಲಿ
ಅವನು ನಿನ್ನ ನೋಡ್ತಾನೆ
ನಿನ್ನ ಅಂದ ಚಂದ ನೋಡ್ತಾನೆ
ನಿನ್ನ ಚೆಂದ ಚಾರ ನೋಡ್ತಾನೆ
ನಿನ್ನ ಚೆಲುವ ಬಾವ ನೋಡ್ತಾನೆ
ದಪ್ಪ ದುಡುವ ನೋಡ್ತಾನೆ
ಕೆಂಪು ರಂಗು ನೋಡ್ತಾನೆ
ನಿನ್ನ ಮುಂದೆ ಬಾವ ನೋಡ್ತಾನೆ
ಸುದ್ದಿ ಸುಳಿಯು ನೋಡ್ತಾನೆ
ನಡಿಗೆ ನುಡಿಗೆ ನೋಡ್ತಾನೆ
ನಿನ್ನೊಳಗೆ ತಲ್ಲ ಮಡ್ಗುತಾನೆ
ಒಟ್ಟೆ ಮುದ್ದು ಕೊಟ್ಟು ನಿನ್ನ
ವಾಲಗ ತೊಂದು ಹೋಯ್ತಾನೆ ॥
ಹೆಣ್ಣು ಮುತ್ತಿನ ತೆಪ್ಪ ಬಂದು
ಚಂಬು ಬರೆದು ಮುಂದಕೆ ಮಡಿ
ನಿನ್ನೊಟ್ಟೆ ಮನೆ ಹೊಟ್ಟೆ ವಾಲಗ
ತೊಂದು ಓಯ್ತಾನಲ್ಲ.
ಮುತ್ತಿನ ತೆಪ್ಪ ಜೊತೆ ನಾನು ಹೋಗಿಲ್ಲನ್ನ
ಮುತ್ತಿಗೆ ನೋವು ಬಿಡುತೀಲಿ ॥

ಆವಾಗ್ಗೆ ಸರಸೆ ಸಂಕಮ್ಮ [illegible]
ಗಂಡನಾದ್ದ ಮಾತ ಕೇಳ್ಕಂಡು ನಾನು [illegible] ದಾರೆ
ಹಿಂದ್ಗುಂಡು ಜಮಾನ ಯಜಮಾನ ಒಬ್ಬ ಬಳೆಗಾರಶೆಟ್ಟಿ ಬತ್ತವ್ನೆ
ಆ ಮುತ್ತಿನ ಗೆಜ್ಜೆ ವನಾರು ಬಂದದ್ದು ಹಿಂದ್ಗುಂಡ ಬಳೆಯ ತತ್ತವ್ನೆ
ಆದ ಪತ್ತ್ರದಲ್ಲಿ ಮಕ್ಕಳ ಕರು ಬಂದ್ಗುಂಡ ಬಳೆಯ ತತ್ತವ್ನೆ, [illegible]
ಮ ಕಾಂಗಿಪನ್ನು ಆ ಸಮ್ಮುಪ್ಪನ ಹೋಡ್ತಾನೆ, ಬಳೆ ಬಳೆ ಅಂತ ಹಾಕ್ತಾನೆ
ಮನೆ ಮಾಯ್ಕಾರ ಮಾದೇವ ಹೊಕ್ಕಂಗೆ ಬಾಗಲ ಮುಂದಕ್ಕೆ ಬತ್ತಾನೆ, ಬಾಗಲ ತೆಳ್ಗ
ಮನೆ ತುಂಬ ಮುತ್ತೈದ್ಯ [illegible] ಕರಿತಾನೆ. ಬಾಗಿಲ ನೀನು ತೆಗಿತೀಯೆ,
ಮುದ್ದನ್ನ ಕೊಟ್ಟ ಮುತ್ತಿನ ಶೆಟ್ಟಿ ಬಗ್ಗಿ ಬಗ್ಗಿ ನೋಡ್ತಿಯಂತೆ [illegible]
ಕೆಳಗುಂಟೀನಿ ಎಂದು ಜಮಾನ ಕರೀತೀಯೆ, [illegible] ಹಾಕ್ತೀಯೆ,
ಹಿಂತೆ ಪಾಪದ ಮಾತ ಆಡಬ್ಯಾಡ ನಿನ್ನ ಬಳೆಗ್ಳ್ನಾದ್ರೆ ಕೊಡ್ತೀಯೆ ಒಂದಾದ ಬಳೆಯ
ವಾದ [illegible] ದಮ್ಮಯ್ಯ. ನೋಡ್ತಾನೆ, ಎಡಗೈನಾದ ಕೊಡ್ತೀಯೆ
ಎಲಾ ಮಡದಿ ಸಂಕಮ್ಮ, ನಿನ್ನಾತ [illegible] ಬಳೆಯ ತೊಡ್ತಾನೆ, ನಿನ್ನ
[illegible] ದುಂಡು ತೋಳ ಹಿಡಿತಾನೆ, ಕಂದಂಗೆ
[illegible] ಹಿಸುಕ್ತಾನೆ, [illegible]
ಮಾಡದಿ, [illegible] ಕಾಲದಲ್ಲಿ ಕೊಡ್ತೀಯ, ಇಲ್ಲದೆ ಇದೆ, ನೋಡ್ತೀಯ
[illegible] ಮನೆಗೆ ಬತ್ತೀಯೆ, ಮನೆಯ
ಮಾಡದಿ, [illegible]
[illegible] ಬಳೆಗಾರ ಶೆಟ್ಟಿ ಜೊತೆ ಹೋದೀಯೆ
[illegible] ನನ್ನ ಬಾಯಲ್ಲಿ ಮಣ್ಣ [illegible]
[illegible]

ಕಾಡು ಕುದುರೆ.

ಶಿವಮೊಗ್ಗ ಸುಬ್ಬಣ್ಣ
ಣ್ಣನಾ ಹಾಡಿದರು.

ಡಾ॥ ಚಂದ್ರಶೇಖರ ಕಂಬಾರ

ಕಾಡ ಕುದುರಿ ಓಡಿ ಬಂದಿತ್ತ ||
ಊರಾಚೆ ದೂರದಾರಿ ಸುರುವಾಗೋ ಜಾಗದಲ್ಲಿ
ಮೋಡಬೆಟ್ಟ ಸೂರ್ಯಹುಟ್ಟಿ ಹಸುರಿನ ಗುಡ್ಡ ಹಾಸೀವಲ್ಲಿ
ಮುಗಿಲೇ ಇಲ್ಲದ ಮುಗಿಲಿನಿಂದ ಜಾರಿ ಬಿದ್ದ ಉಲ್ಕೀ ಹಾಂಗ
ಕಾಡಿನಿಂದ ಚೆಂಗನೆ ನೆಗೆದಿತ್ತ ||
ಮೈಯ ಬೆಂಕಿ ಉರುಗುತ್ತಿತ್ತ ಬಾಲಕ್ಕಿ ಬಿಸಿಲಾಗು ನಿರಾಡಿತ್ತ
ಜ್ಯೋತಿ ಉರಿಯೋ ಕೇಶರಾಶಿ ಕತ್ತಿನಾಗ ಕುಣಿಯುತಿತ್ತ
ಧೂಮಕೇತು ಹಿಂಬಾಲಿತ್ತ ಹೊಳದಿತ್ತ ಹಾರಾಡಿತ್ತ
ಹ್ರೈ ಹ್ರೈ ಅಂತ ಹಾರಿ ಬಂದಿತ್ತ ||
ಕಣ್ಣಿನಾಗ ಹಣ್ಣ ಬಿದ್ದ ಆಕಾಶದ ಚುಕ್ಕಿ ಮಿನಿಗಿತ್ತ
ಬೆನ್ನ ಹುರಿ ಬಾಗಿದಿತ್ತಲ್ಲಾ ಸೊಂಟದ ಬಾಗುರಿ ತಿರುಗುತ್ತಿತ್ತ
ಬಿಗಿದ ಕಾಡಬಿಲ್ಲಿನಿಂದ ಬಿಟ್ಟ ಬಾಣ ಹಾಂಗ ಚಿಮ್ಮಿ
ಹರಿವು ಚಿಗಿರಿ ಹಾರಿ ಬಂದಿತ್ತ ||
ಆಹಾ, ನೆಲ ಬಿದ್ದು ಗುಡ್ಡ ತೋರಿ ಗುತ್ತಿನ ಬತ್ತಿ ಬಿಡ್ಡಂಯಾಗಿ
ಬಿರಕೀ ನೀರು ಧಾರಿಯಾಗಿ ಹರಿಯೋ ಹಾಂಗ ಹೆಜ್ಜೆ ಹಾಕಿ
ಹತ್ತ ದೋರ ಎತ್ತಿ ಕೊಂಡು ಎಕ್ಕೊಳ್ಳ ತಿಳ್ಳ ಓಡೆ
ಕೊಳ್ಳ ಮಳ್ಳ ಅಡಿನಿಕೆದವಿತ್ತ ||

ಕರಿಮಾಯಿ

ಡಾ. ಚಂದ್ರಶೇಖರ ಕಂಬಾರ

ಮುಂಗೋಳಿ ಕೂಗ್ಯಾವು ಮೂಡ್ಯಾಗ ಬೆಳ್ಳಿ
ತಂಗಾಳಿ ಬೀಸ್ಯಾವು ತವರೀ ಹೂವಿನಲ್ಲಿ
ಹೂ ಹೂವಿನೊಳಗೊಂದು ಕೈಲಾಸದರಳ್ಯಾವು
ಕೈಲಾಸ ಕೈಮುಗಿದು ಭೂಲೋಕ ಕೆಳಗಾವು
ಸಾವಿರದ ಶರಣವ್ವ ಕರಿಮಾಯಿ ತಾಯೀ ॥

ಬಂಗಾರ ಮೈಯಂಥವಳೇ ಬಂಗಾರ ಮುಖದವಳೇ
ಸೂಸು ನಗೆಯುಳ ಜಗದ ಬೆಳಕು ತುಳುಕಿಸಿದವಳೇ
ಬಲದ ಕೂಡಿದ ತಾಯಿ ಕುಲ ಪಾಲಿಸುವವಳ
ಬಸುರಾಗಿ ಎದುರಿಸಿದಿ ದೇವದಾನವರನ್ನ
ಕೇಳೇಳು ಭುಜದವರ ಮೆಟ್ಟೆಟ್ಟು ಶಿರ ತರಿದು
ಕೊರಳಿಗೆ ಹೂಹಾರ ಧರಿಸಿಕೊಂಡವಳೆ
ಸಾವಿರದ ಶರಣವ್ವ ಕರಿಮಾಯಿ ತಾಯೀ ॥

ಮೂರೂ ಲೋಕಕ ಅಧಿಕ ನಿನ್ನ ಕಾರಣಿಕ
ಮುಖ್ಯರ ಕಿವಿ ಹಿಡಿದು ಹಾಕೀದಿ ನೆಲಕ
ಗಂಡ ತೇಲಿಸಿದೆವ್ವ ಹೆಂಡ ಮುಳುಗಿಸಿದಿ
ಗಂಡಗಂಡರನೆಲ್ಲ ಹೆಂಡಿರ ಮಾಡಿ

ಹೆಂಡೀರ ಭಂಡಾಟ ಕೇಳುರಾಗಿ ನಿಲ್ಲ್ಸದೆ
ರಂಡೀ ಹುಣ್ಣಿವೀ ದಿನ ಮಿಂಡ್ಯಾದೆ ತಾಂಯೀ
ಸಾವಿರದ ಶರಣವ್ವ ಕಂಮಾಯಿ ತಾಂಯೀ ॥

ಬಾಗೀಲ ಭಕ್ತರಿಗೆ ಬೇಡಿದ್ದ ಕೊಟ್ಟವಳೆ
ಗಿಜ್ಜೀಕಾಲಿನ ಮಗನ ಬಂಜೀ ಉಡಿಗಿಟ್ಟವಳೆ
ಕಲ್ಲೀನ ಎದೆಯೊಳಗ ಹುಲ್ಲ ಚಿಗರಿಸಿದವಳೆ
ಬೇಲೀಯ ಮುಳ್ಳೀಗೆ ನೀಲಿ ಹೂ ಕೊಟ್ಟವಳೆ
ಬೆಣ್ಣೆ ಸುಣ್ಣದ ಗುರುತ ತೋರಿಸಿ ಕೊಟ್ಟವಳೆ
ಸುಣ್ಣ್ಯದ ನೀರಾಗ ಜೇವಾ ಕೊಟ್ಟವಳೆ
ಸಾವಿರದ ಶರಣವ್ವ ಕಂಮಾಯಿ ತಾಂಯಿ ॥

...ಮಳಗಿ ಶಿವಲಿಂಗ ಭೂಷಿಸೂರ ಮಠದಯ್ಯ
...ವರ ಅಂಗೈಲಿಂಗ ಗಂಗ್ಯಾಗಿ ತೊಳದಿ
...ಗೋಡಗೇರಿ ಬಸ್ಸಪ್ಪ ಅವರ ಮಗ ಚಂದ್ರಪ್ಪಗ
...ರಾಂಶ ವಚನಗಳ ... ಹೇ...

ವರುಷಕ್ಕೆ ಬರುವುದು ಅರಸು ದೀಪಾವಳಿ

ಅರಶಿನವಸನವದ್ದಿ ಮಡಿಯುಟ್ಟು
ಮಂಡೆಯ ಕಟ್ಟಿ ಗೋವಿನಾರತಿಯ ಬೆಳಗ್ವಾರೆ.
ಬತ್ತಿಸದ ಬಂದಿಗೆಯೊಳಗೆ ಹಣ್ಣಕ್ಕಿ ತುಂಬಿದ್ರಿ.
ಉತ್ತಮರ ಮನೆಯಲ್ಲಿ ಬಲೀಂದ್ರನ ಕರೆದಿರುರೆ.
ಪಟ್ಟೆಧೋತ್ರವನುಟ್ಟು ಮುತ್ತಿಂಬತ್ತಿನ ಜೋಡೆ ಹಿಡಿದು
ಬೆಳ್ಳಿ ಕುದುರೆಯನೇರಿ ಇಳೆಗೆ ಬಂದನೆ ಬಲೀಂದ್ರ.
ಕಟ್ಟದೆ ಕಪಿಲೆಯು ಕರೆಯೆ, ಬಿತ್ತದೆ ಭತ್ತವು ಬೆಳೆಂ
ಅವ ತನ್ನ ರಾಜ್ಯಕೆ ಸುಖವ ತಂದನೆ ಬಲೀಂದ
ಶ್ರೀ ಮಹಾಭಕ್ತನೆಂದೆನಿಸಿ ಧರೆಯ ರಕ್ಷಿಪ ದೊರೆಯೆನಿಸಿ
ಶ್ರೀಕೃಷ್ಣನ ಬಾಗಿಲ ಕಾಯ್ದ ಬಲಿ ಬಂದನೆ ಅರಮನೆಗೆ.

